ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 47
ನವೆಂಬರ್ 18, 2012

ಪುಟ 16 ರೂ. 5/-



ಮನೆ ನಿವೇಶನ - ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ



ರಾಜ್ಯವ್ಯಾಪಿ ಬಂಧನ ಚಳುವಳಿ

ಅಂಗನವಾಡಿ ನೌಕರರ
5 ನೇ ರಾಜ್ಯ ಸಮ್ಮೇಳನ
3-5 ನವೆಂಬರ್ 2012
ಮೈಸೂರು





ಅಭೂತಪೂರ್ವ ರ್‍ಯಾಲಿ

ಹೋರಾಟದ ಕೆಚ್ಚು ಒಗ್ಗಟ್ಟಿನಿಂದ ಸ್ಫೂರ್ತಿಗೆ ಸಾಕ್ಷಿಯಾದ ಸಮ್ಮೇಳನ

ಸಿಐಟಿಯು ಮುಖಂಡರ ಮೇಲೆ ಸುಳ್ಳು ಕೊಲೆ ಆರೋಪ ಐಕ್ಯತೆಗೆ ಮಾರಕವಾದ ಎಐಟಿಯುಸಿ ಸ್ವಾರ್ಥ ಸಾಧನೆ



ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿರುವವರು ಪ್ರಧಾನಿ, ಕಾಂಗ್ರೆಸ್ ಪಕ್ಷ ಅಲ್ಲವೇ?

ಮೋದಿ ಪ್ರಧಾನಿಯಾದರೂ ಮುಸ್ಲಿಮರು ಉಗ್ರರಾಗಬೇಕಿಲ್ಲ


ಪಂಕ್ತಿಭೇಧ-ಮಡೆ ಸ್ನಾನ ನಿಷೇಧಿಸಲು ಸರ್ಕಾರ ಮುಂದಾಗಬಾರದೇಕೆ?

ಕೃಷಿ ಕೂಲಿಕಾರರ ತಾಲೂಕು ಮಟ್ಟದ ಸಮ್ಮೇಳನಗಳು

**ವರದಿ: ಭೀಮಶೆಟ್ಟಿ ಯಂಪಳ್ಳಿ
ಕರಿಯಪ್ಪ ಅಚ್ಚೊಳ್ಳಿ**

ಗಂಗಾವತಿಯಲ್ಲಿ ನಡೆಯಲಿರುವ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 5ನೇ ರಾಜ್ಯ ಸಮ್ಮೇಳನದ ಅಂಗವಾಗಿ ಕೆಳಹಂತದ ಸಮ್ಮೇಳನಗಳು ನಡೆಯುತ್ತವೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ 5ನೇ ತಾಲೂಕು ಸಮ್ಮೇಳನ ನಡೆಯಿತು. ಚಿಂಚೋಳಿ ತಾಲೂಕಿನ 35 ಗ್ರಾಮ ಘಟಕಗಳ ಒಟ್ಟು 130 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಂಘದ ರಾಜ್ಯ ಸಮಿತಿ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿ ಸಮ್ಮೇಳನವನ್ನು ಉದ್ಘಾಟಿಸಿದರು. ಜಿಲ್ಲಾ ಅಧ್ಯಕ್ಷರಾದ ಸಂಗಾತಿ ಭೀಮಶೆಟ್ಟಿ ಯಂಪಳ್ಳಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು, ಕಾರ್ಯದರ್ಶಿ ಮಲ್ಲಮ್ಮ ಕೋಡ್ಲಿ ಅವರು ಮಂಡಿಸಿದ ವರದಿಯ ಮೇಲೆ ನಡೆದ ಚರ್ಚೆಯಲ್ಲಿ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ನವೆಂಬರ್ 5ರಂದು ಮನೆ ನಿವೇಶನಗಳಿಗಾಗಿ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಮತ್ತು ಸ್ಥಗಿತಗೊಳಿಸಲಾದ ವೃದ್ಧಾಪ್ಯ ಮೊದಲಾದ ಮಾಶಾಸನಗಳ ಪುನರಾರಂಭಕ್ಕಾಗಿ ಚಿಂಚೋಳಿ ತಾಲೂಕ್ ಕಛೇರಿ ಎದುರು ಪಿಕೆಟಿಂಗ್ ನಡೆಸಲು ತೀರ್ಮಾನಿಸಲಾಯಿತು. 38 ಜನ ಸದಸ್ಯರಿರುವ ತಾಲೂಕ್ ಸಮಿತಿಯನ್ನು ಆಯ್ಕೆಮಾಡಲಾಯಿತು. ಕೆ. ವೆಂಕಟಾಪುರದ ಸಂಗಾತಿ ಗೋಪಾಲ ಪೆಂಟಯ್ಯ ಭಜಂತ್ರಿ ತಾಲೂಕ ಸಮಿತಿಯ ಅಧ್ಯಕ್ಷರಾಗಿಯೂ ಖಾಜಾಮಿಯೂ ಕುಕನೂರು, ಬಂಡಯ್ಯಸ್ವಾಮಿ, ದೇವೇಂದ್ರಪ್ಪ 'ಸಜ್ಜನ್' ಉಪಾಧ್ಯಕ್ಷರಾಗಿಯೂ ತುಳಜಪ್ಪ ರುಸ್ತಾಂಪುರ ಕಾರ್ಯದರ್ಶಿಯಾಗಿಯೂ ಮಲ್ಲಮ್ಮ ಕೋಡ್ಲಿ ಜಂಟಿ ಕಾರ್ಯದರ್ಶಿಯಾಗಿಯೂ ಕುಪೇಂದ್ರ ಐನ್ನೊಳ್ಳಿ ರಾಜು ಲಡ್ನೋರ ದಶರಥ ಕೊರವಿ 3 ಜನ ಸಹ ಕಾರ್ಯದರ್ಶಿಗಳಾಗಿಯೂ ಜಗದೇವಿ ಚಂದನಕೇರಾ ಖಜಾಂಚಿಯಾಗಿಯೂ ಚುನಾಯಿತರಾಗಿದ್ದಾರೆ. ನವೆಂಬರ್ 5 ರಂದು ನಡೆದ ಪ್ರತಿಭಟನೆಯಲ್ಲಿ ಸುಮಾರು 700 ಜನ ಕೃಷಿಕೂಲಿಕಾರರು ಭಾಗವಹಿಸಿದ್ದರು. ಇದರ ಪೂರ್ವಭಾವಿಯಾಗಿ ಅಕ್ಟೋಬರ್ 15 ರಂದು ಕರ್ನಾಟಕ-ಆಂಧ್ರಗಡಿ ಪ್ರದೇಶದಲ್ಲಿ ಕುಂಚಾವರಂ ಎಂಬಲ್ಲಿ ಕೃಷಿ ಕೂಲಿಕಾರರ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಕುಂಚಾವರಂ ವೆಂಕಟಾಪುರ ಮತ್ತು ಶಾದೀಪುರ ಗ್ರಾಮ ಪಂಚಾಯಿತಿಗಳ ಸುಮಾರು 15 ಗ್ರಾಮ ಮತ್ತು ಲಂಬಾಣಿ ತಾಂಡಗಳು ಸುಮಾರು 300 ಜನ ಬಡ ಕೂಲಿಕಾರರು ಭಾಗವಹಿಸಿದ್ದರು. ತಾಲೂಕ ಅಧ್ಯಕ್ಷರಾದ ಗೋಪಾಲ್ ಭಜಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ



ಚಿತ್ತಾಪುರ ತಾಲೂಕು ಸಮ್ಮೇಳನ ಉದ್ಘಾಟನೆ

ಸಂಗಾತಿ ನಿತ್ಯಾನಂದಸ್ವಾಮಿ ಭೀಮಶೆಟ್ಟಿ ಯಂಪಳ್ಳಿ ಸವದತ್ತಿಯ ಸಂಗಾತಿ ಎಲ್.ಎಸ್ ನಾಯಕ್ ಮತ್ತು ಶ್ರೀಮತಿ ಸರೋಜ ಎಲ್.ಎಸ್. ನಾಯಕ್ ಶರುಗುಪ್ಪದಿಂದ ಸಂಗಾತಿ ಇ.ಆರ್. ಯಲ್ಲಪ್ಪ ಎಸ್.ಎಫ್.ಐ. ರಾಜ್ಯ ಧ್ಯಕ್ಷರಾದ ಅನಂತ ನಾಯ್ಕ ಪಾಲ್ಗೊಂಡಿದ್ದರು.

-ಚಿತ್ತಾಪುರ ತಾಲೂಕ್ ಸಮ್ಮೇಳನ :

ಕೃಷಿ ಕೂಲಿಕಾರರ ಸಂಘದ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ 2ನೇ ಸಮ್ಮೇಳನ ಅಕ್ಟೋಬರ್ 14 ರಂದು ಚಿತ್ತಾಪುರದಲ್ಲಿ ನಡೆಯಿತು. ಸಂಗಾತಿ ನಿತ್ಯಾನಂದಸ್ವಾಮಿ ಸಮ್ಮೇಳನವನ್ನು ಉದ್ಘಾಟಿಸಿದರು ಬಾಗೋಡಿ. ಭಂಕೂರ. ಹುಳಗೇರಿ. ಚಿತ್ತಾಪುರ. ಮುಗಳಾನಗಾಂವ. ಭಂಕೂರ್ ವಾಡಾ. ಹೋಳಾ. ದಂಡೋತಿ. ಚಿಂಚೋಳಿ. ಹೆಚ್. ಹೆಬ್ಬಾಳ. ಹುನಗುಂದ. ಕಾಳಗಿ.ಕಣಸೂರು. ಎಂಬ 13 ಗ್ರಾಮ ಘಟಕಗಳಿಂದ 62 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಚರ್ಚೆಯಲ್ಲಿ 14 ಜನ ಪಾಲ್ಗೊಂಡಿದ್ದರು. ಚರ್ಚೆಯಲ್ಲಿ ಮುಖ್ಯವಾಗಿ ಉದ್ಯೋಗ ಖಾತ್ರಿ ಯೋಜನೆಯ ಜಾರಿಗಾಗಿ, ಬಾಕಿ ಕೂಲಿ ಹಣ ಪಾವತಿಗಾಗಿ ನಡೆಸಲಾದ ಯಶಸ್ವಿ ಹೋರಾಟಗಳ ಬಗ್ಗೆ ಪ್ರಸ್ತಾಪವಾಯಿತು. ನವೆಂಬರ್ 5 ರ ಜೈಲ್‌ಬರೋ ಚಳುವಳಿಯನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ನೂತನ ತಾಲೂಕ್ ಸಮಿತಿಗೆ 37 ಜನ ಸದಸ್ಯರನ್ನು ಆಯ್ಕೆಮಾಡಲಾಗಿದ್ದು ಅಶೋಕ ಶಾಂತಪ್ಪ ಕಲಶೆಟ್ಟಿ ಅಧ್ಯಕ್ಷರಾಗಿಯೂ, ದೇವೇಂದ್ರ ಗುಂಡಮಿ ಶಂಕರ್ ರಾಠೋಡ್, ಬಾಬು ಕಂಬಾರ್, ನಾಗಣ್ಣ ಪೂಜಾರಿ 4 ಜನ ಉಪಾಧ್ಯಕ್ಷರಾಗಿ ಅಶೋಕ ಟಿ.ಮ್ಯಾಗೇರಿ ಕಾರ್ಯದರ್ಶಿಯಾಗಿಯೂ, ಸಾಯಬಣ್ಣ ಮುಗಳನಾಗಾಂವ ಜಂಟಿ ಕಾರ್ಯದರ್ಶಿಯಾಗಿಯೂ, ಶಿವರುದ್ರ ಹುನಗುಂಟ, ಮರೆಪ್ಪ ಬನಹಟ್ಟಿ, ಶಿವಶರಣ ಮುಗಳನಾಗಾಂವ, ಬಸವರಾಜ ಗುಂಡನೂರ, 4 ಜನ ಸಹ ಕಾರ್ಯದರ್ಶಿಗಳಾಯಾಗಿಯೂ ಜಗದೇವಿ ನರಿದೂರ ಖಜಾಂಚಿಯಾಗಿಯೂ ಆಯ್ಕೆಯಾದರು. ನವೆಂಬರ್ 5 ರ ಹೋರಾಟದಲ್ಲಿ 500 ಕ್ಕೂ ಹೆಚ್ಚು ಜನ ಕೃಷಿ ಕೂಲಿಕಾರರು ತಾಲೂಕ್ ಕಛೇರಿಗೆ ಮುತ್ತಿಗೆ ಹಾಕಿ ಬಂಧನಕ್ಕೆ ಒಳಪಟ್ಟಿದ್ದರು.

ರಾಯಚೂರು ತಾಲೂಕ್ ಸಮ್ಮೇಳನ

ನವೆಂಬರ್ 5 ರ ಹೋರಾಟದ ಪೂರ್ವಭಾವಿಯಾಗಿ ಅಕ್ಟೋಬರ್ 27 ರಂದು ಕೃಷಿಕೂಲಿಕಾರರ ರಾಯಚೂರ್ ತಾಲೂಕ್ 2ನೇ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು, ಉಂಡ್ರಾಲದೊಡ್ಡಿ, ಚಂದ್ರಬಂಡಾ, ಮಂಡಲಗೇರಾ, ಬಾಪೂರ ತಾಂಡ, ವೆಂಕಟಾಪುರ, ನೀಲಗಲ್, ಸಿದ್ಧಾರಾಮಪುರ, ಐಜಾಪುರ, ಗಣಮೂರು, ಗೋನಾಳ, ಮತ್ತು ಮುರಾನ್‌ಪುರ ಎಂಬ 12 ಗ್ರಾಮಗಳ 55 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕೂಲಿಕಾರರ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿಯವರು ನವೆಂಬರ್ 5 ರ ಚಳುವಳಿಯ ಮಹತ್ವವನ್ನು ವಿವರಿಸುವ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿದರು. ಸಂಗಾತಿ ಕರಿಯಪ್ಪ ಅಚ್ಚೊಳ್ಳಿ ನೀಡಿದ ಚಟುವಟಿಕೆಗಳ ವರದಿಯ ಆಧಾರದಲ್ಲಿ ಚರ್ಚೆನಡೆಯಿತು. ಮನೆ ನಿವೇಶನಗಳಿಗಾಗಿ ಮತ್ತು ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕಾಗಿ ಯಾವ ಯಾವ ಗ್ರಾಮಗಳಿಂದ ಅರ್ಜಿಗಳನ್ನು ಹಾಕಿಸಬೇಕಾಗಿದೆ ಎಂಬುದನ್ನು ನಿರ್ದಿಷ್ಟಪಡಿಸಲಾಯಿತು. ಪಿಕೆಟಿಂಗ್ ಚಳುವಳಿಗೆ 500ಕ್ಕಿಂತಲೂ ಹೆಚ್ಚು ಜನರನ್ನು ಪಾಲ್ಗೊಳ್ಳಿಸಬೇಕೆಂದು ನಿರ್ಧರಿಸಿ ಜೀಪ್ ಜಾಥಾ ನಡೆಸುವ ಮೂಲಕ 40 ಗ್ರಾಮಗಳಲ್ಲಿ ಪ್ರಚಾರ ಮಾಡಬೇಕೆಂದು ತೀರ್ಮಾನಿಸಲಾಯಿತು. ನೂತನ ತಾಲೂಕ ಸಮಿತಿಯನ್ನು ಆಯ್ಕೆಮಾಡಲಾಯಿತು. ಒಟ್ಟು 15 ಜನ ಸದಸ್ಯರಿರುವ ನೂತನ ಸಮಿತಿಗೆ ಸಂಗಾತಿ ಕರಿಯಪ್ಪ ಅಚ್ಚೊಳ್ಳಿ ಅಧ್ಯಕ್ಷರಾಗಿಯೂ ಉಂಡ್ರಾಲ ದೊಡ್ಡಿಯ ಮುದ್ದಪ್ಪ ಎನ್. ಬಾಪೂರದ ಸತ್ಯಪ್ಪ ಮಲ್ಲಯ್ಯ ಉಪಧ್ಯಕ್ಷ ರಾಗಿಯೂ, ಚಂದ್ರಬಂಡಾದ ಬಸವರಾಜ ನರಸಣ್ಣ ಕಾರ್ಯದರ್ಶಿಯೂ, ಮಂಡಲಗೇರಾದ ಈರಣ್ಣ ಹನುಮಂತ, ಗಣಮೂರದ ಶ್ರೀನಿವಾಸ ಪಾಗುಂಡಪ್ಪ ಮತ್ತು ಐಜಾಪುರ ಭೀಮಣ್ಣ ನಾಯಕ್ ಸಹಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಮರುದಿನ ಅಕ್ಟೋಬರ್ 28 ರಂದು ನಡೆಸಲಾದ ಜೀಪ್ ಜಾಥಾದಲ್ಲಿ ಸಂಗಾತಿ ನಿತ್ಯಾನಂದಸ್ವಾಮಿ. ಕರಿಯಪ್ಪ ಅಚ್ಚೊಳ್ಳಿ ಸತ್ಯಪ್ಪ ಮಲ್ಲಯ್ಯ ಮೊದಲಾದವರು ಭಾಗವಹಿಸಿದ್ದರು. ಬಾಯಿದೊಡ್ಡಿ ಬಾಪೂರು ಉಂಡ್ರಾಲದೊಡ್ಡಿ ಚಂದ್ರಬಂಡಾ, ಗ್ರಾಮಗಳಲ್ಲಿ ಕೂಲಿಕಾರರು ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿಯನ್ನು ಪರಿಶೀಲಿಸಲಾಯಿತಲ್ಲದೆ ಕೂಲಿಕಾರರ ಸಭೆಗಳನ್ನು ಮಾಡಿ ನವೆಂಬರ್ 5 ರ ಪಿಕೆಟಿಂಗ್ ಚಳುವಳಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆನೀಡಲಾಯಿತು. ನವೆಂಬರ್ 5 ರಂದು ತಹಶಿಲ್ದಾರ ಕಛೇರಿ ಎದುರು ನಡೆಸಲಾದ ಪಿಕೆಟಿಂಗ್ ಚಳುವಳಿಯಲ್ಲಿ ಒಟ್ಟು 600 ಜನ ಭಾಗವಹಿಸಿದ್ದರು. ಅವರಲ್ಲಿ 50 ಜನ ಬಂಧನಕ್ಕೆ ಒಳಗಾಗಿದ್ದರು. ಬಂಧಿತರನ್ನು ತಹಶಿಲ್ದಾರರ ಎದುರು ಹಾಜರು ಪಡಿಸಿದಾಗ ಪೋಲಿಸರು ದಾಖಲು ಮಾಡಿಕೊಂಡ ಪ್ರಕರಣವನ್ನು ತಹಶಿಲ್ದಾರರು ತಿರಸ್ಕರಿಸಿದರಲ್ಲದೆ ಮನೆ.ನಿವೇಶನ, ಬಗರ್ ಹುಕುಂ ಸಾಗುವಳಿ ಮುಂತಾದ ಸಮಸ್ಯೆಗಳನ್ನು ಚರ್ಚಿಸಲು ತಾಲೂಕಿನ ಹಿರಿಯ ಅಧಿಕಾರಿಗಳ ಹಾಗೂ ಸಂಘಟನೆಯ ಪ್ರತಿನಿಧಿಗಳ ಜಂಟಿ ಸಭೆ ಏರ್ಪಾಡು ಮಾಡುವ ಭರವಸೆ ನೀಡಿ ಬಂಧಿತರನ್ನು ಬಿಡುಗಡೆ ಮಾಡಿದರು.



ಸಮ್ಮೇಳನದ ಅಂಗವಾಗಿ ಧ್ವಜರೋಹಣ

ಜನಶಕ್ತಿ
ಕನ್ನಡ ವಾರಪತ್ರಿಕೆ

ಶಿರಸ್ತ್ರಾಣಕ್ಕೆಳು

ಪಂಕ್ತಿಭೇದ ಮತ್ತು ಮಡೆಸ್ನಾನ ನಿಷೇಧಿಲು ಕೋಟ ಶ್ರೀನಿವಾಸ ಪೂಜಾರಿ ಮುಂದಾಗಬಾರದೇಕೆ?

ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮುಕ್ತ ಪ್ರವೇಶ ಸಿಗಬೇಕು ಎಂದು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ ಎಂದು ಕೆಲವು ದಿನಪತ್ರಿಕೆಗಳಲ್ಲಿ ವರದಿಯಾಗಿತ್ತು. ಮುಜರಾಯಿ ದೇವಾಲಯಗಳ ಅರ್ಚಕರ ಸಂಘದ ವತಿಯಿಂದ ಉಡುಪಿ ಶ್ರೀಕೃಷ್ಣಮಠದ ರಾಜಾಂಗಣದಲ್ಲಿ ಜಿಲ್ಲಾ ಅರ್ಚಕರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದ್ದರು ಎನ್ನಲಾಗಿದೆ.

ಶ್ರೇಣಿಕೃತ ಹಿಂದು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನ ವಿಭಾಗವನ್ನು ಪ್ರತಿಧಿಸುವ ಸಚಿವ ಶ್ರೀನಿವಾಸ ಪೂಜಾರಿ ಅವರ ಈ ಮಾತುಗಳು ಸಹಜವೂ ಸ್ವಾಗತಾರ್ಹವೂ ಆಗಿವೆ. ಆದರೆ ಈ ಮಾತುಗಳು ಉಡುಪಿಯ ಶ್ರೀಕೃಷ್ಣ ಮಠಕ್ಕೆ ಹೆಚ್ಚು ಅನ್ವಯವಾಗುವುದಿಲ್ಲ. ಅವರೇ ಹೇಳಿರುವಂತೆ ಶ್ರೀಕೃಷ್ಣ ಬ್ರಾಹ್ಮಣನಲ್ಲ. ಬ್ರಾಹ್ಮಣನಲ್ಲದ ಶ್ರೀಕೃಷ್ಣನ ಮಠದಲ್ಲಿ ಬ್ರಾಹ್ಮಣರಲ್ಲದವರಿಗೆ ಪ್ರವೇಶ ನಿರಾಕರಣೆ ಸಾಧ್ಯವಿರಲಿಲ್ಲ. ಆದರೆ ಚರಿತ್ರೆಯ ಒಂದು ಘಟ್ಟದಲ್ಲಿ ಬ್ರಾಹ್ಮಣೇತರರಿಗೆ ಪ್ರವೇಶ ಇರಲಿಲ್ಲ ಎಂಬುದು ಕನಕದಾಸರ ಕುರಿತಾದ ಪ್ರಸಂಗದಿಂದ ಸಾಬೀತಾಗುತ್ತದೆ. ಆದರೆ ರಾಜ್ಯದ ಅನೇಕ ದೇವಾಲಯಗಳಲ್ಲಿ ದಲಿತರಿಗೆ ಇಂದಿಗೂ ಪ್ರವೇಶ ನಿರಾಕರಿಸಲಾಗಿದೆ.

ಮುಜರಾಯಿ ಸಚಿವ ಶ್ರೀನಿವಾಸ ಪೂಜಾರಿಯವರು ಶ್ರೀಕೃಷ್ಣ ಮಠದಲ್ಲಿ ಆಕ್ಷೇಪ ವ್ಯಕ್ತಪಡಿಸಬೇಕಾದ್ಧ ವಿಷಯವೊಂದಿತ್ತು. ಅದುವೇ ಪಂಕ್ತಿಭೇದದ ಪದ್ಧತಿ. ಇದು ಹಿಂದು ಸಮಾಜದಲ್ಲಿ ಶ್ರೇಣೀಕೃತ ಜಾತಿ ಪದ್ಧತಿಯ ಅಮಾನವೀಯ ಆಚರಣೆಯಾಗಿದೆ. ಅದೂ ಬ್ರಾಹ್ಮಣನಲ್ಲದ ಶ್ರೀ ಕೃಷ್ಣನ ಮಠದಲ್ಲಿ ಬಾಹ್ಮಣರಿಗೆ ವಿಶೇಷ ಭೋಜನದ ವ್ಯವಸ್ಥೆ! ಒಂದು ಬ್ರಾಹ್ಮಣೇತರರ ಪರಂಪರೆಯು ಬ್ರಾಹ್ಮಣ್ಯದ ಕಪಿ ಮುಷ್ಟಿಯೊಳಗೆ ಸಿಕ್ಕಿಕೊಂಡಾಗ ಹೀಗೆ ಆಗುವುದು. ದಮನಿತ ಜಾತಿಯವರ ಪ್ರತಿನಿಧಿಯಾಗಿರುವ ಶ್ರೀನಿವಾಸ ಪೂಜಾರಿ ಅವರಿಂದ ರಾಜ್ಯದ ದಲಿತ, ಹಿಂದುಳಿದ ಜಾತಿಗಳ ಜನ ಇನ್ನೂ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡರೆ ಅದು ತಪ್ಪಾಗದು.

ಉಡುಪಿಯ ಅಷ್ಟ ಮಠಾಧಿಪತಿಗಳಲ್ಲಿ ರಾಜಕೀಯವಾಗಿಯೂ ಪ್ರಬಲವಾಗಿರುವ ಪೇಜಾವರ ಮಠಾಧೀಶರು ಶ್ರೀಕೃಷ್ಣ ಮಠದಲ್ಲಿ ಚಾಲ್ತಿಯಲ್ಲಿರುವ ಅನಿಷ್ಟ ಜಾತಿ ಪದ್ಧತಿಯ ದ್ಯೋತಕರವಾಗಿರುವ ಪಂಕ್ತಿಭೇದವನ್ನು ಒಂದಲ್ಲ ಒಂದು ರೀತಿಯಲ್ಲಿ ಸಮರ್ಥಿಸುತ್ತಿರುತ್ತಾರೆ. ಅವರಿಂದ ಅದಕ್ಕಿಂತ ಭಿನ್ನವಾದ ದೋರಣೆಯನ್ನು ಯಾರೂ ನಿರೀಕ್ಷಿಸುವುದಿಲ್ಲ. ಸಚಿವ ಶ್ರೀನಿವಾಸ ಪೂಜಾರಿಯವರು ಈ ಅನಿಷ್ಟ ಪಂಕ್ತಿಭೇದ ಪದ್ಧತಿಯನ್ನು ಪ್ರಶ್ನಿಸಲು ಮುಂದೆ ಬಂದರೆ, ಅವರು ತಮ್ಮ ಸಚಿವ ಸ್ಥಾನವನ್ನು ಕಳೆದುಕೊಳ್ಳಬಹುದು. ಅದರೆ ಸಾಮಾಜಿಕ ತಾರತಮ್ಯಕ್ಕೆ ಒಳಗಾದ ಅಸಂಖ್ಯಾತ ಬಂಧು ಬಾಂಧವರ ನೊಂದ ಹೃದಯಗಳಲ್ಲಿ ಶಾಶ್ವತವಾದ ಸ್ಥಾನವನ್ನು ಅಲಂಕರಿಸಬಹುದು.

ಅವರು ಮಾಡಬೇಕಾದ ಇನ್ನೊಂದು ಮಹತ್ವದ ಕಾರ್ಯ ಕುಕ್ಕೆ ಸುಬ್ರಮಣ್ಯದಲ್ಲಿ ನಡೆಯುತ್ತಿರುವ ಮಡೆಸ್ನಾನ ಪದ್ಧತಿಯನ್ನು ನಿಷೇಸಿಸುವುದು. ಇದು ಅಷ್ಟೇನು ಕಷ್ಟದ ಕೆಲಸವಲ್ಲ. ಅದಕ್ಕಾಗಿ ಶ್ರೀನಿವಾಸ ಪೂಜಾರಿ ಅವರು ಸಚಿವ ಸ್ಥಾನ ಕಳೆದುಕೊಳ್ಳಬೇಕಾಗಲಿಕ್ಕಿಲ್ಲ. ಈಗಾಗಲೇ ಮಡೆಸ್ನಾನ ಪದ್ಧತಿಯ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಬಲಗೊಳ್ಳುತ್ತಿದೆ. ಮಡೆಸ್ನಾನ ಪದ್ಧತಿ ಜಾತಿ ಭೇದವನ್ನು ಪ್ರತಿಪಾದಿಸುತ್ತದೆ, ಮಾತ್ರವಲ್ಲ ಮೂಢನಂಬಿಕೆಯನ್ನು ಗಟ್ಟಿಗೊಳಿಸುತ್ತದೆ. ಇದು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ, ಕಾನೂನು ಕ್ರಮದ ಮೂಲಕ ಅದನ್ನು ನಿಲ್ಲಿಸುವುದು ಅಸಾಧ್ಯವೇನಲ್ಲ. ಮುಜರಾಯಿ ಸಚಿವರಾಗಿ ಶ್ರೀನಿವಾಸ ಪೂಜಾರಿ ಇದನ್ನೊಂದು ಸವಾಲಾಗಿ ಸ್ವೀಕರಿಸಬೇಕು ಎಂದು ಜನತೆಯ ನಿರೀಕ್ಷೆಯಾಗಿದೆ.


ಮಡೆಸ್ನಾನ ಪದ್ಧತಿ ನಿಷೇಧಿಸುವುದನ್ನು ಅಲ್ಲಿಯ ಮೂಲ ನಿವಾಸಿ ಮಲೆಕುಡಿಯರು ವಿರೋಧಿಸುತ್ತಾರೆ ಎಂಬ ನೆಪವನ್ನು ಎತ್ತಲಾಗುತ್ತಿದೆ. ಇದೊಂದು ಕ್ಷುಲ್ಲಕ ನೆಪಮಾತ್ರ. ಸತಿಪದ್ಧತಿ ವರದಕ್ಷಿಣೆ ಪದ್ಧತಿ ಬಾಲ್ಯವಿವಾಹ ಪದ್ಧತಿ ಮುಂತಾದ ಅನಿಷ್ಟ ಪದ್ಧತಿಗಳ ನಿಷೇದಕ್ಕೆ ಸಮಾಜದ ಕೆಲ ವಿಭಾಗಗಳ ತೀವ್ರ ವಿರೋಧ ಇದ್ದರೂ ಅವುಗಳನ್ನು ಕಾನೂನುಗಳ ಮೂಲಕ ನಿಷೇಧಿಸಲು ಸಾಧ್ಯವಾಗಿದೆ ಎಂಬುದನ್ನು ಮರೆಯಲಾಗದು.

ಸುಬ್ರಮಣ್ಯದ ಕಲ್ಕುಂದದಲ್ಲಿ ನೂರಾರು ವರ್ಷಗಳಿಂದ ನಡೆಯುತ್ತಾ ಬಂದಿದ್ದ ಜಾನುವಾರು ಜಾತ್ರೆಯನ್ನು ಭಜರಂಗದಳದ ಒತ್ತಡಕ್ಕೆ ಮಣಿದು ಸ್ಥಳಿಯ ಗ್ರಾಮ ಪಂಚಾಯಿತ್ ರದ್ದು ಪಡಿಸಲು ತೀರ್ಮಾನಿಸಿದೆಯಂತೆ! ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ರೈತರು ತಮ್ಮ ಎತ್ತುಗಳಿಗೆ ಸರಿಯಾದ ಜೋಡಿ ಪಡೆಯಲು ಸುಬ್ರಮಣ್ಯಕ್ಕೆ ಬರುತ್ತಿದ್ದರು. ಜಾತ್ರೆಗೆ ಬರುವ ಜಾನುವಾರಗಳನ್ನು ಕೇರಳದ ಕಸಾಯಿಖಾನೆಗಳಿಗೆ ಕೊಂಡೊಯ್ಯುತ್ತಾರೆ ಎಂಬ ಅಸಂಬದ್ಧ ನೆಪವನ್ನು ಮುಂದಿಟ್ಟು ದನಗಳ ಜಾತ್ರೆಯನ್ನು ಬಲವಂತವಾಗಿ ನಿಲ್ಲಿಸುವ ಪ್ರಯತ್ನ ನಡೆದಿದೆ. ರೈತರಿಗೆ ಇದರಿಂದ ಅನ್ಯಾಯ ಆಗುವುದರಿಂದ ಮುಜರಾಯಿ ಸಚಿವರು ಈ ವಿಷಯದಲ್ಲೂ ಮಧ್ಯಪ್ರವೇಶ ಮಾಡಬೇಕೆಂಬುದು ಜನರ ನಿರೀಕ್ಷೆಯಾಗಿದೆ.

ಮಡೆಸ್ನಾನದ ಬದಲಿಗೆ ಎಡೆಸ್ನಾನಕ್ಕೆ ಅವಕಾಶ ಮಾಡಿಕೊಡುವ ಸರ್ಕಾರದ ಅಭಿಪ್ರಾಯವನ್ನು ಹೈಕೋರ್ಟ್ ಪುರಸ್ಕರಿಸಿದೆ ಎಂದು ತಿಳಿದು ಬಂದಿದೆ. ಇದೊಂದು ತಾತ್ಕಾಲಿಕವಾದ ಮೊದಲ ಹಂತದ ಕ್ರಮ ಆಗಬಹುದು. ಪೂಜೆಗೆ ಇಟ್ಟ ನೈವೇದ್ಯವನ್ನು ಎಲೆಗಳ ಮೇಲೆ ಹಾಕಿ ಅದರ ಮೇಲೆ ಉರಳಲು ಅವಕಾಶ ನೀಡುವುದು ಮೂಢನಂಬಿಕೆಯನ್ನು ಬಲಪಡಿಸಿದಂತೆಯೇ ಆಗುತ್ತದೆ. ಮಡೆಸ್ನಾನದಿಂದ ರೋಗ ವಾಸಿಯಾಗುತ್ತದೆ ಎಂಬ ಮೂಢನಂಬಿಕೆಯನ್ನು ಕಿತ್ತುಹಾಕಲು ಎಲೆಗಳ ಮೇಲೆ ಉರುಳುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

ನೈಪಾಲರ ನೈಜ ಮುಖ ತೆರೆದಿಟ್ಟಿರುವ ಕಾರ್ನಾಡ್: ಒಂದು ಅರ್ಥಪೂರ್ಣ ವಿವಾದ

'ನನಗೆ ವಿಷಾದವಿಲ್ಲ. ಕ್ಷಮೆ ಕೇಳುವ ಪ್ರಶ್ನೆಯೇ ಉದ್ಭವಿಸುವುದೇ ಇಲ್ಲ. ನನ್ನ ಅಭಿಪ್ರಾಯಕ್ಕೆ ನಾನು ಬದ್ಧನಿದ್ದೇನೆ. ಎಲ್ಲಾ ಪರಿಸ್ಥಿತಿ ಎದುರಿಸಲು ಸಿದ್ಧನಿದ್ದೇನೆ.' ಹೀಗೆ ಹೇಳಿರುವ ಖ್ಯಾತ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಗಿರೀಶ್ ಕಾರ್ನಾಡ್ ರ ಈ ಮಾತುಗಳಲ್ಲಿ ಖಚಿತತೆ ಇದೆ, ಸನ್ನಿವೇಶ ಎದುರಿಸುವ ಗಟ್ಟಿತನವಿದೆ. ಮುಂಬೈನ ಸಮಾರಂಭದಲ್ಲಿ ಆಡಾಡ್ತ ಕಾರ್ನಾಡರು ಒಂದು ಗಂಭೀರವಾದ ವಿವಾದ ಮತ್ತು ಚರ್ಚೆಯನ್ನು ಹುಟ್ಟು ಹಾಕಿದ್ದಾರೆ. ಕೋಮುವಾದದ ವಿರುದ್ಧದ ಅವರ ನೇರ, ನಿಷ್ಠುರ ಮಾತುಗಳು ಮತ್ತು ಕ್ರಿಯಾಶೀಲತೆಯ ಕಾರಣಗಳಿಂದಾಗಿ ಕೆಂಡಮಂಡಲವಾಗಿರುವ ಸಂಘಪರಿವಾರ ಏನಾದರೊಂದು ನೆಪ ಸಿಕ್ಕರೂ ಸಾಕು ಕುಕ್ಕಲು ಸದಾ ಹೆಡೆಯೆತ್ತಿ ಕಾಯುವುದು ಹೊಸದೇನಲ್ಲ. ಈಗಲೂ ಅಂತಹ ಸನ್ನಿವೇಶ ಸೃಷ್ಟಿಯಾಗಿದೆ. ಸಂಘಟಕರು ಇದೆಂತಹಾ ಉಸಾಬರಿ ಅಂತಾ ಆಕ್ಷೇಪಿಸಿದ್ದಾರೆ. ನಿರೀಕ್ಷೆಯಂತೆ ಚೆಡ್ಡಿ ಪಡೆ ಹಾರಾಡುತ್ತಿದೆ. ಆದರೆ ಅದೇಕೋ ನಮ್ಮ ನಾಡಿನ ಬಹುತೇಕ ಪ್ರಗತಿಪರರು ಇನ್ನೂ ಗಂಭೀರ ಮೌನ ತಾಳಿದ್ದಾರೆ!



ಖಚಿತ ಅಭಿವ್ಯಕ್ತಿ

ಇದೇ ನವೆಂಬರ್ 3ರಂದು ಮುಂಬೈನಲ್ಲಿ ನಡೆದ ಸಾಹಿತ್ಯ ಹಬ್ಬದಲ್ಲಿ ಟಾಟಾಸಂಸ್ಥೆ 'ಲಿಟರೇಚರ್ ಲೈವ್' ಕೊಡಮಾಡಿದ 'ಜೀವಮಾನದ ಸಾಧನೆಯ ಪ್ರಶಸ್ತಿ' ಪಡೆದ ನೋಬೆಲ್ ಪ್ರಶಸ್ತಿ ಪುರಸ್ಕೃತ ಸರ್. ವಿ.ಎಸ್.ನೈಪಾಲರ ಬರಹಗಳಲ್ಲಿ ಕುರುಡು ಮುಸ್ಲಿಂ ವಿರೋಧಿ ಪ್ರತಿಪಾದನೆಗಳನ್ನು ಖಂಡ ತುಂಡವಾಗಿ ಕಾರ್ನಾಡರು ವಿರೋಧಿಸಿರುವುದು ಸರಿಯಾಗೇ ಇದೆ. ನೈಪಾಲರ ಸಾಹಿತ್ಯಿಕ ಶಕ್ತಿ, ಭಾಷೆಯ ಅಗಾಧ ಪ್ರತಿಭೆಯನ್ನು ಅಭಿಮಾನದಿಂದಲೇ ಸ್ಮರಿಸುವ ಕಾರ್ನಾಡರು ಭಾರತೀಯ ಮುಸ್ಲಿಂರನ್ನು ಧಾಳಿಕೋರರು, ದ್ರೋಹಿಗಳು ಎಂದೂ, ಅವರ ಕೊಡುಗೆಗಳನ್ನು ವಿಕೃತಗೊಳಿಸುವ ಪೂರ್ವಾಗ್ರಹವನ್ನು ಅಲ್ಲಿ ತೀವ್ರವಾಗಿ ಟೀಕಿಸಿರುವುದು ತಪ್ಪೇನಲ್ಲ. 'ಕೊಟ್ಟ ವಿಷಯವನ್ನು ಬಿಟ್ಟು ಮಾತನಾಡಿದ್ದಾರೆ' ಎಂಬ ಸಂಘಟಕರ ಆಕ್ಷೇಪಕರ ವಾದವೂ ಈ ನಿಟ್ಟಿನಲ್ಲಿ ಅರ್ಥಹೀನ. ಯಾಕೆಂದರೆ ಆ ಸಂಸ್ಥೆ ನೀಡಿದ್ದು ಕೇವಲ ಸಾಹಿತ್ಯ ಕುರಿತ ಪ್ರಶಸ್ತಿಯಾಗಿದ್ದಲ್ಲಿ ಅದು ಬೇರೆ ವಿಷಯವಾಗುತ್ತಿತ್ತು . ಇದು ಜೀವಮಾನದ ಸಾಧನೆಗಾಗಿರುವುದರಿಂದ ನೈಪಾಲರ ಒಟ್ಟು ಚಿಂತನೆಗಳನ್ನು ವಿಮರ್ಶಿಸುವುದು ಅನಿವಾರ್ಯ. ಇಲ್ಲವಾದಲ್ಲಿ ಅವರ ನೊಬೆಲ್ ಮತ್ತು ಈಗ ನೀಡಲಾಗುವ ಪ್ರಶಸ್ತಿಗಳ ಪ್ರಭಾವದಲ್ಲಿ ನೈಪಾಲರ ವೈಚಾರಿಕ ನಿಲುವುಗಳನ್ನು ಹಾಗೆ ಪ್ರಶ್ನಿಸದೇ ಜನರು ಸ್ವೀಕರಿಸುವ ಅಪಾಯವಂತೂ ಇದ್ದೇ ಇರುತ್ತದೆ. ಇದು ಕಾರ್ನಾಡರ ಅಭಿಪ್ರಾಯವೂ ಹೌದು. 'ಇಂತಹ ಒಂದು ಸಂದರ್ಭಕ್ಕಾಗಿ ಹತ್ತು ವರುಷಗಳಿಂದಲೂ ಕಾಯುತ್ತಿದ್ದೆ' ಎನ್ನುವ ಕಾರ್ನಾಡರ ಅನಿಸಿಕೆ ಇಲ್ಲಿ ಸಿನಿಕತನದ್ದೇನಲ್ಲ. (ಅವರ ವಿಶ್ಲೇಷಣೆ ಆಯ್ದ ಭಾಗಗಳು ಪ್ರತ್ಯೇಕವಾಗಿ ನೀಡಲಾಗಿದೆ.) ನೈಪಾಲರಿಗಿರುವಂತೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಕಾರ್ನಾಡರಿಗೂ ಇದೆಯಲ್ಲ.

ಪ್ರಶಸ್ತಿಗಳು– ಹುನ್ನಾರಗಳು

ನೈಪಾಲರು ನೊಬೆಲ್ ಪ್ರಶಸ್ತಿ ಪಡೆದಿದ್ದಾರೆ ಎಂಬ ಕಾರಣಕ್ಕೆ ಪ್ರಶ್ನಾತೀತರೇನಲ್ಲ. 'ಹಾಗೆ ಪ್ರಶ್ನಿಸಬಾರದು' ಎನ್ನುತ್ತವೆ ಪ್ರತಿಗಾಮಿ ವಲಯಗಳು! ಸಾಹಿತ್ಯಿಕ, ಸಾಂಸ್ಕೃತಿಕ ಕೊಡುಗೆಗಳಿಗಾಗಿ ನೀಡುವ ನೊಬೆಲ್ ನಲ್ಲಿ ಜಾಗತಿಕ ರಾಜಕೀಯ ದುರುದ್ದೇಶಗಳಿರುತ್ತವೆ. ಒಂದು ವೇಳೆ ಪಾಬ್ಲೋ ನೆರೂದ, ನೆಲ್ಸನ್ ಮಂಡೇಲಾ ರಂತಹ ಯಾವುದಾದರೂ ಪ್ರಗತಿಪರರಿಗೆ ನೀಡಿದಲ್ಲಿಯೂ ಪ್ರಶಸ್ತಿಯ ಮಾನ ರಕ್ಷಣೆಯ, ಸಾರ್ವಜನಿಕ ಮನ್ನಣೆಯ ಗುಪ್ತ ಅಜೆಂಡಾಗಳು ಮರೆ ಮಾಚಿರುವುದಿಲ್ಲ! ಹೀಗಾಗಿಯೇ ಇಂಗ್ಲೆಂಡ್ ಪ್ರಜೆ ಒಬ್ಬ ಬಲಪಂಥೀಯ ಪ್ರತಿಗಾಮಿ, ಇಂಗ್ಲೀಷ್ ಬರಹಗಾರ ನೈಪಾಲರಂಥವರಿಗೆ ನೀಡಿರುವಲ್ಲಿ ಮತ್ತು ಹಾಡಿ ಹೊಗಳುವುದರಲ್ಲಿ ಸ್ಥಳೀಯ ಸಂಸ್ಕೃತಿಗಳನ್ನು ತುಳಿಯುವ ಸಾಮ್ರಾಜ್ಯಶಾಹಿಗಳ ಹುನ್ನಾರಗಳಿಲ್ಲದಿಲ್ಲ. ನೈಪಾಲರಂಥವರ ಪೂರ್ವಗ್ರಹ ಪೀಡಿತ, ಜನಾಂಗೀಯ ದ್ವೇಷದ ಮಾನವ ವಿರೋಧಿ ನಿಲುವುಗಳು ಜಗತ್ತಿನಾದ್ಯಂತ ಮಾರುಕಟ್ಟೆ-ಸಾಮ್ರಾಜ್ಯ ವಿಸ್ತರಿಸಲು ಹೊರಟಿರುವ ಅಮೇರಿಕ, ಇಂಗ್ಲೆಂಡ್ ನಂತಹ ಸಾಮ್ರಾಜ್ಯಶಾಹಿ ಕೂಟಕ್ಕೆ ನೆರವಾಗುತ್ತದೆ. ಅದ ನೆಪ ಮಾತ್ರದ ಭಯೋತ್ಪಾದನೆ ವಿರುದ್ಧ ಹೋರಾಡುವ ಹಂಚಿಕೆಗೆ, ತೈಲ ಮಾರುಕಟ್ಟೆಗಾಗಿ ಅರಬ್ ರಾಷ್ಟ್ರಗಳನ್ನು ನುಂ ನೊಣೆಯುವ ಕುತಂತ್ರಕ್ಕೆ ಅದರ ಭಾಗವಾ ಭಾರತದಲ್ಲಿಯೂ ಪ್ರಜಾಪ್ರಭುತ್ವ ನಾಶಗೊಳಿ ಹಿಂದುತ್ವದ ಹೆಸರಿನಲ್ಲಿ ಕ್ರೂರ ಫ್ಯಾಸಿಸ್ಟ್ ಪ್ರಭು ತರುವುದಕ್ಕೆ ಪೂರ್ವೋಪಾದಿಯಾಗಿ ವೈಚಾರಿಕ ಸಾಂಸ್ಕೃತಿಕ ನೆಲೆಗಳನ್ನು ರೂಢಿಸುತ್ತದೆ ಅದ್ದರಿಂದಲೇ ಭಾರತದಲ್ಲಿ ಚೆಡ್ಡಿ ಪಡೆಗಳ ನೈಪಾಲರನ್ನು ಸಮರ್ಥಿ ಸಂಭ್ರಮಿಸುತ್ತಿರುವುದು.

ಮನುಷ್ಯರಾದವರು ಹೀಗೆ ಆಡಬಹುದೇ?

ಕಾರ್ನಾಡರಿಗೆ ತಕರಾರು ಇರುವುದ

ಪುಟ 4 ೬

ಕೇರಳ: 'ಕುಟುಂಬ ಶ್ರೀ' ನಿಧಿ ಖಾಸಗಿ ಸಂಸ್ಥೆಯ ಪಾಲಾಗುವುದನ್ನು ತಪ್ಪಿಸಿದ ದಿಟ್ಟ ಮಹಿಳಾ ಹೋರಾಟ

'ಕುಟುಂಬ ಶ್ರೀ' ಎಂಬುದು ಕೇರಳ ರಾಜ್ಯದ ಒಂದು 'ಯಶೋಗಾಥೆ'ಯ ಹೆಸರು. ಕರ್ನಾಟಕದಲ್ಲಿ ಸ್ತ್ರೀ ಶಕ್ತಿ ಸಂಘಗಳ ಯಶಸ್ಸಿನ ಬಗೆಗೆ ಬಹಳ ಹೇಳಲಾಗುತ್ತದೆ. ಆದರೆ ಈ ಸಂಘ ಸ್ತ್ರೀಯರಿಗೆ ಒಂದಷ್ಟು ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯ ಕೊಡುವುದಕ್ಕಿಂತ ಹೆಚ್ಚು, ಮುಂದೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಕೇರಳದ 'ಕುಟುಂಬ ಶ್ರೀ'ಯದ್ದು ಒಂದು ಭಿನ್ನ ಮಾದರಿ. ಕುಟುಂಬ ಶ್ರೀ ಎಂಬುದು ಸ್ವಸಹಾಯ ಗುಂಪು ಜಾಲ. ಕೇರಳ ರಾಜ್ಯದಲ್ಲಿ ಕೃಷಿ ಸೇರಿದಂತೆ ಪಂಚಾಯ್ತಿಗಳ ನಾನಾ ಅಭಿವೃದ್ಧಿ ಯೋಜನೆಗಳ ಜಾರಿಯಲ್ಲಿ ಹಾಗೂ ಕುಡಿಯುವ ನೀರು ಪೂರೈಕೆ ಯೋಜನೆ, ಶೌಚಾಲಯಗಳ ನಿರ್ಮಾಣ ಮುಂತಾದ ಯೋಜನೆಗಳ ಜಾರಿಯಲ್ಲಿ ಜನತೆಯ ಪಾಲ್ಗೊಳ್ಳುವಿಕೆಗೆ ಅದರಲ್ಲೂ ಕುಟುಂಬಗಳ, ವಿಶೇಷವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು 'ಕುಟುಂಬಶ್ರೀ'ಗಳ ಮೂಲಕ ಸಾಧಿಸಲಾಗಿದೆ. ಈ ಹಿಂದೆ ಕೇರಳದಲ್ಲಿ ಅಧಿಕಾರ ನಡೆಸಿದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಸರ್ಕಾರದ ಒಂದು ಮಹತ್ತರ ಕೊಡುಗೆ ಇದು.

ಈಗ ಕೇರಳದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರದ ಎಲ್‌ಡಿಎಫ್ ಸರ್ಕಾರದ ಜನಪರ ಕೆಲಸಗಳನ್ನು ಹಾಳು ಮಾಡುವುದರಲ್ಲೆ ಭಾರಿ ಸಂಭ್ರಮ-ಸಂತೋಷ ಇದ್ದಂತಿದೆ. ಕುಟುಂಬ ಶ್ರೀ ವಿಚಾರದಲ್ಲಿ ಸರ್ಕಾರವಾದರೂ ಏನು ಮಾಡಲು ಹೊರಟಿತ್ತು. ಮಾಜಿ ಮಂತ್ರಿಗಳು ಮತ್ತು ಕಾಂಗ್ರೆಸ್ ನಾಯಕರೂ ಎಂ.ಎಂ. ಹಸನ್‌ರವರು ಆರಂಭಿಸಿರುವ ಒಂದು ಖಾಸಗಿ ಸಂಸ್ಥೆಯಾದ 'ಜನಶ್ರೀ' ಎಂಬ ಸಂಸ್ಥೆಗೆ 'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ)ಯ ಅನುದಾನವನ್ನು ಹರಿಸಲು ತೀರ್ಮಾನಿಸಿ ಆ ನಿಟ್ಟಿನಲ್ಲಿ ಮುಂದಾಗಿತ್ತು. ಅದೂ ಕೇಂದ್ರ ಕೃಷಿ ಇಲಾಖೆಯ ಅನುಮತಿ ಪಡೆಯದೆ, ಇಲಾಖೆ ಗಮನಕ್ಕೆ ಸಹ ತರದೇ. ಅಂದರೆ ಸಾರ್ವಜನಿಕರ ತೆರಿಗೆ, ದುಡಿಮೆ, ಬೆವರಿನಿಂದ ತುಂಬಿಕೊಳ್ಳಲಾದ ಖಜಾನೆಯಿಂದ 'ಅಭಿವೃದ್ಧಿ'ಯ ಹೆಸರಿನಲ್ಲಿ ಆಳುವ ಪಕ್ಷದ ರಾಜಕಾರಣಿಗಳ ಖಾಸಗಿ ಸಂಸ್ಥೆಗೆ ಕಾಲುವೆ ತೋಡಿ ಹಣ ಹರಿಸುವುದು.

ಆದರೆ ಕೇರಳದ ಪ್ರಜಾಸತ್ತಾತ್ಮಕ ಚಳುವಳಿ ಈ ಜನದ್ರೋಹವನ್ನು ನೋಡಿಕೊಂಡು ಸುಮ್ಮನಿರುವುದಿಲ್ಲ ಎಂಬುದನ್ನು ಆಳುವವರು ಕೊನೆಗೂ ಅರ್ಥ ಮಾಡಿಕೊಳ್ಳಲೇಬೇಕಾಗಿ ಬಂತು.

ಈ ಒಟ್ಟು 'ಹಣ ತಿರುವು' ಯೋಜನೆಯಲ್ಲಿನ ಭಾರಿ ಭ್ರಷ್ಟತೆ ವಾಸನೆ ಹಿಡಿದ ಲಕ್ಷಾಂತರ ಕುಟುಂಬಶ್ರೀ ಯೋಜನೆಯ ಸದಸ್ಯರು ಹಗಲು ರಾತ್ರಿ ಎನ್ನದೆ ಎಂಟು ದಿನಗಳ ಸತತ ಹೋರಾಟದ ಮೂಲಕ ಅನುದಾನವನ್ನು ಖಾಸಗಿ ಸಂಸ್ಥೆ ಹರಿಸುವುದನ್ನು ತಡೆಯುವಲ್ಲಿ ಯಶಸ್ವಿಯಾದರು.

ಈ ಎಂಟು ದಿನಗಳ ಹೋರಾಟದಲ್ಲಿ ಕೇರಳದ ಮಹಿಳೆಯರು ಲಕ್ಷಗಟ್ಟಲೇ ಸಂಖ್ಯೆಯಲ್ಲಿ ಹಗಲು ರಾತ್ರಿ ತಿರುವನಂತಪುರಂನ ಬೀದಿಯಲ್ಲಿ ಕ್ರಾಂತಿಕಾರಿ ಗೀತೆಗಳನ್ನು ಹಾಡುತ್ತ ನೃತ್ಯ, ಮಾಡುತ್ತ ಹೋರಾಟ ಛಲ ಬಿಡದ ಮುಷ್ಕರ ಹೂಡಿ ಇತಿಹಾಸ ಸೃಷ್ಟಿಸಿದರು.

ಕೊನೆಗೂ 8 ಹಗಲು 7 ರಾತ್ರಿಗಳ ಈ ನಿರಂತರ ಹೋರಾಟ ಯಶಸ್ವಿಯಾಗಿ ಅ ರಂದು ಮುಕ್ತಾಯವಾಯಿತು. ಒಂದು ಕ ಎಲ್‌ಡಿಎಫ್ ಮುಖಂಡರು ಮತ್ತೊಂದು ಸಮಾಜ ಕಲ್ಯಾಣ ಇಲಾಖೆ ಸಚಿವರಾ ಡಾ.ಎಂ.ಕೆ. ಮುನೀರ್ ಮತ್ತು ಗೃಹ ಖಾ ಸಚಿವ ತಿರುವಾಂಕೂರು ರಾಧಾಕೃಷ್ಣ ಅವರುಗಳು ಭಾಗವಹಿಸಿದ ಸಭೆ ನಡೆ ಸರ್ಕಾರ ಹೋರಾಟಗಾರರ ಎಲ್ಲ ಹ ಬೇಡಿಕೆಗಳಿಗೂ ಒಪ್ಪಿಗೆ ಸೂಚಿಸಬೇಕಾಯಿತು ಮುಂದೆ 1,160 ಕೋಟಿ ರೂ.ಗಳ ಜನ ಜೀವನಾಧಾರಕ್ಕೆ ಸಂಬಂಧಿಸಿದ ಯೋಜನೆಗಳ 'ಕುಟುಂಬ ಶ್ರೀ' ಮೂಲಕ ಜಾರಿಗೊಳಿಸಲು ಸರ್ಕಾರದ ಪರವಾಗಿ ಈ ಸಚಿವರುಗಳ ಒಪ್ಪಿಕೊಂಡರು.

ಎಂಟು ದಿನಗಳ ಈ ಹೋರಾಟ ಕೊನೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದ ಪಿ.ಕೆ. ಶ್ರೀಮತಿ ಮಾತುಕತೆಯ ವಿವ ಘೋಷಿಸಿದಾಗ ಮಹಿಳೆಯ ವಿಜಯದ ಸಂಭ್ರಮದಲ್ಲಿ ಕುಣಿದಾಡಿದರು. ಸಿಪಿಐ(ಎಂ ಮತ್ತು ಎಲ್‌ಡಿಎಫ್‌ನ ಅಂಗ ಪಕ್ಷಗ ಮುಖಂಡರು ಪ್ರತಿಭಟನೆಗೆ ಬೆಂಬಲ ನೀಡಿ ಪಾಲ್ಗೊಂಡಿದ್ದರು.

ನೈಪಾಲರ ನೈಜ ಮುಖ ತೆರೆದಿಟ್ಟಿರುವ ಕಾರ್ನಾಡ್...

ಪುಟ 3 ರಿಂದ

ನೈಪಾಲರ ಸಾಹಿತ್ಯಿಕ ಶಕ್ತಿಯ ಬಗೆಗಲ್ಲ, ಬದಲು ವೈಚಾರಿಕ ನಿಲುವುಗಳ ಬಗೆಗೆ ಎಂಬುದನ್ನು ಗಮನಿಸಬೇಕು. ಮೊದಲನೆಯದಾಗಿ ಸ್ವತಃ ನೈಪಾಲರೇ ತಾನು ಭಾರತೀಯನೆಂದು ಎಲ್ಲೂ ಹೇಳಿಕೊಳ್ಳ ದಿರುವಾಗ ಸಂಘಟಕರು ಮುಂ.ವರು ಸಂಭ್ರಸಲು ಕಾರಣಗಳೇನೆಂದು ಅರ್ಥವಾಗುವುದಿಲ್ಲ. ಭಾರತದ ಬಗ್ಗೆ , ಭಾರತದ ಇತಿಹಾಸ, ಸಂಸ್ಕೃತಿಯ ಬಗ್ಗೆ ಅರಿವು ಅತ್ಯಂತ ಅರೆಬರೆ ಮತ್ತು ಅತ್ಯುಗ್ರವಾದ ಪೂರ್ವಾಗ್ರಹ ಪೀಡಿತ ಹಾಗೂ ಅವರ ಆಧಾರಗಳೂ ವಸಾಹತುಶಾಹೀ ಮೂಲಗಳೇ. ಭಾರತವನ್ನು ಸದಾ ಒಡೆದು ಆಳುವ ನೀತಿ ಅನುಸರಿಸಿದ ವಸಾಹತುಶಾಹಿ ಪ್ರಭಾವಿತ. ಹೀಗಾಗಿ ಭಾರತದ ಬಗೆಗಿನ ನೈಪಾಲರ ಮೂರು ಗ್ರಂಥಗಳಲ್ಲಿಯೂ ಇದೇ ದೃಷ್ಟಿ ಪ್ರವಹಿಸಿದೆ, ಹೀಗಾಗಿ ಅಲ್ಲಿ ವಿಜೃಂಭಿಸಿರುವುದು ಮುಸಲ್ಮಾನರ ಬಗೆಗೆ ಅತಿಯಾದ ಕಡು ದ್ವೇಷ. ಆದ್ದರಿಂದ ಭಾರತೀಯ ಸಂಸ್ಕೃತಿಗೆ ಮುಸ್ಲಿಂರ ಕೊಡುಗೆಗಳನ್ನು ಗುರುತಿಸಲು ಹೋಗಿಲ್ಲ. ಮಾತ್ರವಲ್ಲ ಅದರಿಂದಲೇ ವೈಭವಪೂರ್ಣ ಹಿಂದು/ಭಾರತೀಯ ಸಂಸ್ಕೃತಿ ಅವನತಿ ಹೊಂದಿತೆಂದೂ ದೂಷಿಸಲಾಗಿದೆ. ಅವರ 'ಎ ವೂಂಡೆಡ್ ಸಿವಿಲೈಜೇಷನ್' ನಲ್ಲಿ ಅತಿಯಾದ ಮುಸ್ಲಿಂ ದ್ವೇಷ. ಭಾರತದ ಬಡತನ, ದಾರಿದ್ರ್ಯಗಳಿಗೆ ಮುಸ್ಲಿಂರೇ ಕಾರಣವೆಂದೂ ಹೇಳಲಾಗಿದೆ. ಸಮ್ಮಿಳಿತ ಶೈಲಿಯ ತಾಜ್ ಮಹಲು ನಿರುಪಯುಕ್ತವೆಂದೂ ಅದು ಅವನತಿಯ ಸಂಕೇತ,ಕ್ರೂರವಾದುದು, ಎನ್ನುತ್ತಾರೆ. ಭಾರತದಲ್ಲಿರುವ ಅಂತಹ ಅತ್ಯಾಚಾರದ ಮತ್ತು ಲೂಟಿಯ ಸಂಕೇತಗಳೆನ್ನುತ್ತಾರೆ. ಅವರ ಪ್ರವಾಸ ಕಥನದಲ್ಲಿ 'ಮುಸ್ಲಿಂರು ಯಾವ ದೇಶಕ್ಕೆ ಹೋದರೂ ಅಸಹಿಷ್ಣುಗಳು' ಎಂದಿದ್ದಾರೆ. ಇನ್ನು ಅವರ ಭಾರತೀಯ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಭಕ್ತಿ-ಸೂಫಿ ಪಂಥಗಳ ಕೊಡುಗೆ, ಸಂಗೀತ ಕಲೆಗಳ ಪ್ರಸ್ತಾಪವೇ ಇಲ್ಲದಿರುವುದು ಏನನ್ನು ತೋರಿಸುತ್ತದೆ?. ಭಾರತೀಯ ಸಂಸ್ಕೃತಿಯಲ್ಲಿ ಶ್ರೀಮಂತವಾಗಿರುವ ವೈವಿಧ್ಯಮಯ, ಬಹು ಸಂಸ್ಕೃತಿಯ ಸ್ವರೂಪ, ಹಿರಿಮೆಗಳನ್ನು ತಿರಸ್ಕರಿಸುವ ಉದ್ದೇಶದಿಂದಲೇ ಅಲ್ಲವೇ?. ಇನ್ನು ಅಯೋಧ್ಯಾದಲ್ಲಿ ಬಾಬ್ರಿ ಮಸೀದಿ ನಾಶ ಮತ್ತು ಅದನ್ನು ಅನುಸರಿಸಿ ದೇಶದಲ್ಲಿ ನಡೆದ ಸಾವಿರಾರು ಮುಸ್ಲಿಂರ ಹತ್ಯೆಗಳನ್ನು ಸಮರ್ಥಿಸುವ ರೀತಿ ನೈಪಾಲ್ ಒಬ್ಬ ಅಮಾನವೀಯ ಫ್ಯಾಶಿಸ್ಟ್ ವಾದಿ ಎಂಬುದನ್ನು ನಗ್ನವಾಗಿಸಿದೆ. ಇಲ್ಲವಾದಲ್ಲಿ ಮನುಷ್ಯತ್ವವಿರುವ ಯಾರಾದರೂ ಅಯೋಧ್ಯಾದಲ್ಲಿನ ದುರಂತ ಮತ್ತು ನಂತರದ ಘಟನೆಗಳನ್ನು ಒಂದು ಭಾವೋದ್ರೇಕ ಹಾಗೂ ಸೃಜನಾತ್ಮಕವೆಂದು ಹೇಳಿಯಾರೆ?. ಇದನ್ನು ಮುಚ್ಚಿಕೊಳ್ಳಲು 'ಅವರ ಹೆಂಡತಿ ಮುಸ್ಲಿಂಳೆಂದೂ ಮಕ್ಕಳೂ ಸಹ ಮುಸ್ಲಿಂರ ತರಹವೇ ಬಾಳುತ್ತಿದ್ದಾರೆಂದೂ ಹೇಳುವುದು ನಾಚಿಕೆಗೇಡು. ಅವರೊಂದಿಗಿದ್ದೂ ಅವರನ್ನು ಅರಿಯದ ತಮ್ಮ ನೀಚತನವನ್ನು ಮುಚ್ಚಿಕೊಳ್ಳಲು ಇಲ್ಲಿಯೂ ಮುಸ್ಲಿಂರನ್ನು ಬಳಸುತ್ತಿದ್ದಾರೆ ಎಂದರೆ ತಪ್ಪೇನಿದೆ.

ಮಾಧ್ಯಮದ ಬಜರಂಗೀಭಟ್ಟರು!

ಕಾರ್ನಾಡರು ಸಾಧಾರ ಪೂರ್ವಕವಾಗಿಯೇ ನೈಪಾಲರ ಚಿಂತನೆಗಳನ್ನು ಟೀಕಿಸಿದ್ದಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವವರೂ ಬಹುತೇಕ ಎಲ್ಲಾ ಒಂದೇ ಬಣ್ಣದವರು, ಆರೆಸ್ಸೆಸ್ ಸ್ವಯಂಸೇವಕರೇ ಎಂಬುದೂ ಗಮನಾರ್ಹ. ಇದರಂತೆ ಕರ್ನಾಟಕದಲ್ಲಿಯೂ ಮಾಧ್ಯಮ ಕ್ಷೇತ್ರದ ಬಜರಂಗೀ ಚೆಡ್ಡಿ ಪಡೆ ಪೆನ್ನಿನ ವರಸೆಗೆ ಇಳಿದಿದೆ. ಹೊಸ ವಿನ್ಯಾಸದ ಹೆಸರಿನಲ್ಲಿ 'ಕನ್ನಡಪ್ರಭಕ್ಕೇ ನಾಮ ಇಟ್ಟ ವಿಶ್ವೇಶ್ವರಭಟ್ಟ' ತನ್ನ ಸಹಚರ ಪ್ರತಾಪಸಿಂಹನಂತಹ ಕೋಮುವಾದೀ ವೈರಸ್‌ನ ಮೂಲಕ ಚರ್ಚೆಯ ಹೆಸರಿನಲ್ಲಿ ಕಾರ್ನಾಡರ ವ್ಯಕ್ತಿಗತ ತೇಜೋವಧೆ, ವಿತಂಡವಾದದ ಮೂಲಕ ಅಕ್ಷರ ಗೂಂಡಾಗಿರಿಯನ್ನು ಆರಂಭಿಸಿದ್ದಾರೆ. ಸಮರ್ಥವಾದವಾದ, ವಾಸ್ತವದ ವಿಶ್ಲೇಷಣೆ ಮಾಡಲಾಗದ, ಸತ್ಯವನ್ನು ನೋಡಲಾಗದ ಹೇಡಿಗಳು ಇನ್ನೇನು ಮಾಡಿಯಾರು? ಇದು ಸಹ ಸಂಘಪರಿವಾರದ ಯುದ್ಧ ತಂತ್ರವಲ್ಲವೇ?

ಸೌಹಾರ್ದತೆ ರಕ್ಷಿಸುವಲ್ಲಿ

ಈ ಹಿನ್ನೆಲೆಯಲ್ಲಿ ಕಾರ್ನಾಡರ ನಿಲುವನ್ನು ನಾಡಿನ ಪ್ರಜ್ಞಾವಂತರು ಬೆಂಬಲಿಸಬೇಕಿದೆ. ಅದರಲ್ಲೂ ಕರ್ನಾಟಕವನ್ನು ಗುಜರಾತ್‌ನ ಫ್ಯಾಶಿಸ್ಟ್ ಮಾದರಿಯನ್ನಾಗಿಸುವ ಸಂಘಪರಿವಾರದ ಪ್ರಯತ್ನಗಳನ್ನು ಎದುರಿ ವಿಫಲಗೊಳಿಸುವುದು ಮಹತ್ವದ್ದಾಗಿದೆ ಕಾರ್ನಾಡರ ಬರಹ, ಅಭಿಪ್ರಾಯಗಳ ಬ ಪ್ರಗತಿಪರರಲ್ಲಿಯೂ ವಿವಿಧ ಅಭಿಪ್ರಾಯಗಳ ಇರಬಹುದು. ಆದರೆ ಈ ಪ್ರಸಂಗದಲ್ಲಿ ಅವ ನಿಲುವು ಸರಿಯಾಗಿದೆ. ಅವರು ಕೋಮುವಾದದ ವಿರುದ್ಧ ನಾಡಿನ ಹಲವಾರು ಹಿರಿ ಪ್ರಗತಿಪರರಂತೆ ಸದಾ ದೃಡವಾದ ನಿಲು ಪ್ರತಿಪಾದಿಸಿದವರು, ಆ ಕಾರಣದಿಂದ ಸಂಘಪರಿವಾರದ ಹಲವು ರೀತಿಯ ವಾಗ ಧಾಳಿಗೆ ಒಳಗಾದವರು. ಪ್ರಸಕ್ತವಾಗಿ ಕಾರ್ನಾಡರ ಇಂತಹ ಧ್ವನಿಯನ್ನು ಬೆಂಬಲಿ ಅಚಾರಿತ್ರಿಕ, ಅಸಾಂಸ್ಕೃತಿಕ ವೈಚಾರಿ ಧಾಳಿಗಳನ್ನು ಹಿಮ್ಮೆಟ್ಟಿಸುವುದು ಕರ್ನಾಕದ ವೈವಿಧ್ಯ ಸಂಸ್ಕೃತಿ, ಪರಂಪರೆ ಮತ ಸೌಹಾರ್ದತೆಯನ್ನು ಕಾಪಾಡುವ ದೆಶೆಯಲ್ಲಿ ಅತೀ ಅಗತ್ಯವಾಗಿದೆ.


ಒಂದಂತೂ ಸತ್ಯ. ನಮ್ಮ ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ, ಬೌದ್ಧಿಕ ವಲಯ ಪ್ರಧಾನವಾಗಿ ಕೋಮುವಾದಿಗಳ ನಿರಂತರ ಪ್ರಯತ್ನದ ನಂತರವೂ ಇನ್ನೂ ಪ್ರಜಾಪ್ರಭುತ್ವ ಧರ್ಮನಿರಪೇಕ್ಷತೆಗೆ ಬದ್ಧವಾಗಿ ನಿಂತಿ ಅದನ್ನೆದುರಿಸುತ್ತಿದೆ. ಇದು ಸಂಘಪರಿವಾರಕ್ಕೆ ಹತಾಶೆ ತಂದಿದೆ. ಆದ್ದರಿಂದ ಅದು ತನ್ನ ಪ್ರಯತ್ನಗಳನ್ನು ಸದಾ ಮಾಡುತ್ತಲೇ ಇರುತ್ತದೆ ಈ ಸಂದರ್ಭದಲ್ಲಿಯೂ ಪ್ರಗತಿಪರರು ಹೆಜ್ಜೆ ಹಿಂದೆ ಇಡಲು ಸಾಧ್ಯವೇ?

ಮೋದಿ ಪ್ರಧಾನಿಯಾದರೂ ಮುಸಲ್ಮಾನರು ಉಗ್ರರಾಗಬೇಕಾಗಿಲ್ಲ

ನಿತ್ಯಾನಂದ ಸ್ವಾಮಿ

"ಮುಸಲ್ಮಾನರ ನರಮೇಧ ನಡೆಸಿದ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಪ್ರಧಾನಿಯಾದರೆ ಮುಸಲ್ಮಾನರು ಭಯೋತ್ಪಾದಕರಾಗುವ ಸಾಧ್ಯತೆ ಇದೆ" ಎಂದು ಅಜ್ಮೀರ್ ದರ್ಗಾ ಷರೀಫ್ ಅಧ್ಯಕ್ಷ ಮಾನವ ಹಕ್ಕು ಹೋರಾಟಗಾರ ಖಾಜೀಮ್ ಸಯ್ಯದ್ ಸರ್ವಾರ್ ಚಿಸ್ತಿ ಎಚ್ಚರಿಸಿದ್ದಾರೆ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯು ಮಂಗಳೂರಿನಲ್ಲಿ ಏರ್ಪಡಿಸಿದ "ಯಾಕಾಗಿ ಪಾಪ್ಯುಲರ್ ಫ್ರಂಟ್" ಅಭಿಯಾನದಲ್ಲಿ ಅವರು ಮಾತನಾಡುತ್ತಿದ್ದರು ಎನ್ನಲಾಗಿದೆ.

ಅಜ್ಮೀರ್ ದರ್ಗಾ ಷರೀಫ್‌ನ ಅಧ್ಯಕ್ಷರಾಗಿರುವ ಖಾಜೀಮ್ ಸಯ್ಯದ್ ಸರ್ವಾರ್ ಚಿಸ್ತಿ ಮುಸಲ್ಮಾನ ಸಮುದಾಯದ ಅತ್ಯಂತ ಗೌರವಾನ್ವಿತ ಗಣ್ಯರಲ್ಲಿ ಒಬ್ಬರು. ಅವರ ಮಾತನ್ನು ಸಮಾಜ ಬಾಂಧವರು ತಳ್ಳಿಹಾಕುವುದಿಲ್ಲ, ಆದರೆ, ಅವರು ಮೇಲೆ ಉಲ್ಲೇಖಿಸಿದಂತೆ ಹೇಳಿದ್ದು ನಿಜವೇ ಆಗಿದ್ದರೆ ಅದು ಅತ್ಯಂತ ಕಳವಳಕಾರಿಯಾಗಿದೆ, ಖಂಡನೀಯವಾಗಿದೆ.



ಮೊದಲನೆಯದಾಗಿ ನರಹಂತಕ ನರೇಂದ್ರ ಮೋದಿ ದೇಶದ ಪ್ರಧಾನಿ ಆಗುವುದು ಸಾಧ್ಯವಿಲ್ಲ. ಮೋದಿ ಬ್ರ್ಯಾಂಡಿನ ಕೋಮುವಾದಿ ಉಗ್ರರು ಈ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದರು. ಆದರೆ ಅವರ್‍ಯಾರು ತಮ್ಮ ದುಷ್ಟ ಉದ್ದೇಶವನ್ನು ಸಾಧಿಸುವುದರಲ್ಲಿ ಯಶಸ್ವಿಯಾಗಿಲ್ಲ. ನಮ್ಮ ದೇಶದ ಬಹುಸಂಖ್ಯಾತರನ್ನು ಅವರ ಹಿಟ್ಲರ್‌ಶಾಹಿ ಸಿದ್ಧಾಂತಕ್ಕೆ ಒಲಿಸಿಕೊಳ್ಳುವ ಅವರ ಪ್ರಯತ್ನ ಫಲಕಾರಿಯಾಗಲಿಲ್ಲ. ಭಾರತ ದೇಶದಲ್ಲಿ ಬಹುಸಂಖ್ಯಾತರಾಗಿರುವ ಹಿಂದುಗಳಲ್ಲಿ ಮಧ್ಯಮ ವರ್ಗದ ಒಂದು ವಿಭಾಗ ಆರೆಸ್ಸೆಸ್ ಪ್ರತಿಪಾದಿಸುವ ಹಿಂದುತ್ವ ಸಿದ್ಧಾಂತದತ್ತ ಹೆಚ್ಚೆಚ್ಚು ವಾಲುತ್ತಿರುವುದು ನಿಜ. ಆದರೆ ಎಲ್ಲಾ ಹಿಂದುಗಳು ಹಿಂದುತ್ವವಾದಿಗಳಲ್ಲ. ಶತಮಾನಗಳಿಂದ ಅವರು ಮುಸಲ್ಮಾನರೊಂದಿಗೂ, ಕ್ರೈಸ್ತರೊಂದಿಗೂ, ಸಿಖ್ಖರೊಂದಿಗೂ ಅನ್ಯೋನ್ಯತೆಯಿಂದ ಬಾಳಿದ್ದಾರೆ. ಬಹುಸಂಖ್ಯಾತ ಹಿಂದುಗಳು ಹಿಂದುತ್ವವಾದಿಗಳಾಗಿದ್ದರೆ ದೇಶ ವಿಭಜನೆಯ ಸಮಯದಲ್ಲಿ ಭಾರತವೂ ಹಿಂದು ರಾಷ್ಟ್ರವಾಗುತಿತ್ತು, ಆದ್ದರಿಂದ ಮೋದಿ ಅಥವಾ ಮೋದಿಯಂತವರು ದೇಶದ ಪ್ರಧಾನಿಯಾಗುವ ಸಾಧ್ಯತೆ ತೀರಾ ಕಡಿಮೆ.

ಅಂತಹ ಪರಿಸ್ಥಿತಿ ಏನಾದರೂ ನಿರ್ಮಾಣವಾದರೆ ಈ ದೇಶದ ಎಲ್ಲ ಮಾನವತಾವಾದಿ ಹಿಂದುಗಳು ಮತ್ತು ಮುಸಲ್ಮಾನರು ಒಟ್ಟಾಗಿ ಸೇರಿ ಅದನ್ನು ತಡೆಯಬೇಕು.

ದೇಶದಲ್ಲಿ ಇಂದು ಮುಸಲ್ಮಾನ ಸಮುದಾಯದ ಮೇಲೆ ಹೆಚ್ಚುತ್ತಿರುವ ದಾಳಿ ದೌರ್ಜನ್ಯಗಳಿಂದ, ಆರೋಪ ಅನುಮಾನಗಳಿಂದ ಮುಸಲ್ಮಾನರು, ಮುಖ್ಯವಾಗಿ ವಿದ್ಯಾವಂತ ಮುಸಲ್ಮಾನರು ತೀವ್ರ ಆತಂಕಕ್ಕೆ ಒಳಗಾಗುತ್ತಿದ್ದಾರೆ. ದೇಶಕ್ಕೆ ತಮ್ಮ ನಿಷ್ಠೆಯನ್ನು ಸಾಬೀತು ಪಡಿಸಬೇಕಾದ ಸಂಕಟಕ್ಕೆ ಅವರು ಗುರಿಯಾಗುತ್ತಿದ್ದಾರೆ. 300 ವರ್ಷಗಳಿಂದ ಮುಸಲ್ಮಾನರು ನಮಾಜ್ ಮಾಡುತ್ತಿದ್ದ ಬಾಬರಿ ಮಸೀದಿಯನ್ನು ಹಿಂದುತ್ವ ಸಂಘಟನೆಗಳು ಧ್ವಂಸಮಾಡಿದಾಗ ಉಂಟಾದ ಆಘಾತದಿಂದ ಅವರು ಇನ್ನು ಚೇತರಿಸಿಕೊಂಡಿಲ್ಲ. ಆನಂತರವೂ ಅವರ ಮೇಲೆ ಆಘಾತಗಳ ಮೇಲೆ ಆಘಾತಗಳು ತಲೆದೋರುತ್ತಲೇ ಇವೆ. 1993 ರ ಮುಂಬೈ ಸರಣಿ ಬಾಂಬ್ ಸ್ಫೋಟದ ಸಂದರ್ಭದಲ್ಲಿ ಸಾವಿರಾರು ಜನ ಮುಸಲ್ಮಾನರ ಹತ್ಯೆಮಾಡಿದ ಕೊಲೆಗಡುಕರಿಗೆ ಇದುವರೆಗೂ ಶಿಕ್ಷೆಯಾಗಿಲ್ಲ. 2002 ರ ಗೋಧ್ರಾ ದುರಂತದ ಸೇಡಿನ ಹೆಸರಿನಲ್ಲಿ ನಡೆದ ಸರ್ಕಾರ ಪ್ರಾಯೋಜಿತ ಜನಾಂಗೀಯ ಹತ್ಯೆಗೆ ಮುಖ್ಯಮಂತ್ರಿ ಮೋದಿ ಕನಿಷ್ಠ ಪಶ್ಚಾತ್ತಾಪ ವ್ಯಕ್ತಪಡಿಸಲಿಲ್ಲ. ಕಾಶ್ಮೀರದಲ್ಲಿ ಉಗ್ರರನ್ನು ಪತ್ತೆಹಚ್ಚುವ ನೆಪದಲ್ಲಿ ಅಮಾಯಕ ಮುಸ್ಲಿಂ ಯುವಕರ ಬೇಟೆ ನಿಂತಿಲ್ಲ, ಅದನ್ನು ಪ್ರಶ್ನಿಸುವ ಅವರ ತಾಯಂದಿರ ಹಾಗು ಅಕ್ಕತಂಗಿಯರ ಮೇಲೆ ಅತ್ಯಾಚಾರ ಅವ್ಯಾಹತವಾಗಿ ನಡೆಯುತ್ತಾ ಇದೆ.

ಇಂತಹ ಬೆಳವಣಿಗೆಗಳಿಂದಾಗಿ, ಇಂದು ಭಾರತದ ಮುಸಲ್ಮಾನರಲ್ಲಿ ಪರಕೀಯ ಭಾವನೆಗಳು ಬೆಳೆಯುತ್ತಿವೆ. ತಮ್ಮ ಆಸ್ತಿಪಾಸ್ತಿಗಳಿಗೆ, ತಮ್ಮ ಧಾರ್ಮಿಕ ಮಂದಿರಗಳಿಗೆ, ತಮ್ಮ ಹೆಣ್ಣುಮಕ್ಕಳಿಗೆ, ತಮ್ಮ ಜೀವಕ್ಕೆ ಇಲ್ಲಿ ರಕ್ಷಣೆ ಇಲ್ಲದಂತಾಗಿದೆ ಎಂಬ ಆತಂಕ ಅವರನ್ನು ಆವರಿಸಿಕೊಳ್ಳುತ್ತಿದೆ. ಹೀಗಾಗಿ ಮುಸಲ್ಮಾನ ಯುವಕರಲ್ಲಿ ಹತಾಷಾ ಭಾವನೆಗಳು ಬೆಳೆಯುತ್ತಿವೆ. ಸೇಡು ತೀರಿಸಿಕೊಳ್ಳುವ ತವಕ ಅವರಲ್ಲಿ ಹೆಚ್ಚುತ್ತಿದೆ. ದೇಶದ ಗಡಿಯಾಚೆ ಕ್ರಿಯಾಶೀಲವಾಗಿರುವ ಭಯೋತ್ಪಾದಕ ಸಂಘಟನೆಗಳು ಇದನ್ನೇ ಕಾಯುತ್ತಿವೆ. ಅವರ ಸಂಪರ್ಕಕ್ಕೆ ಸಿಗುವ ಭಾರತದ ನೊಂದ ಮುಸಲ್ಮಾನ ಯುವಕರು ಉಗ್ರವಾದಿಗಳಾಗುತ್ತಾರೆ. ಆತ್ಮಹತ್ಯಾ ದಳಗಳಲ್ಲಿ ಸೇರ್ಪಡೆಯಾಗಲೂ ಹಿಂಜರಿಯುವುದಿಲ್ಲ. ಹೀಗೆ ಇಂದು ದೇಶದಲ್ಲಿ ಮುಸ್ಲಿಂ ಉಗ್ರವಾದ ಬೆಳೆಯುತ್ತಿದ್ದರೆ ಅದಕ್ಕೆ ಹಿಂದೂ ಕೋಮುವಾದವೇ ಪ್ರಮುಖ ಕಾರಣ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಜಾಗತಿಕ ಮಟ್ಟದಲ್ಲಿ ಮುಸ್ಲಿಂ ಉಗ್ರವಾದದ ಬೆಳವಣಿಗೆಗೆ ಅಮೇರಿಕ ಮತ್ತು ಅದರ ಮಿತ್ರದೇಶಗಳ ಜಾಗತಿಕ ಪ್ರಾಬಲ್ಯಕ್ಕಾಗಿ ನಡೆಸುತ್ತಿರುವ ಭಯೋತ್ಪಾದನೆಯೇ ಕಾರಣವಾಗಿದೆ. ತೈಲ ಸಮೃದ್ಧವಾಗಿರುವ ಅರಬ್ ರಾಷ್ಟ್ರಗಳ ಮೇಲೆ ತಮ್ಮ ಹಿಡಿತ ಸಾಧಿಸಲು, ಪ್ರಜಾಪ್ರಭುತ್ವ ಸ್ಥಾಪನೆಯ ಹೆಸರಿನಲ್ಲಿ ಅಮೇರಿಕ ನಡೆಸುತ್ತಾ ಬಂದಿರುವ ಆಕ್ರಮಣಕಾರಿ ಯುದ್ಧಗಳಿಂದ ಮುಸ್ಲಿಂ ಜಗತ್ತಿನಲ್ಲಿ ತೀವ್ರ ಆಕ್ರೋಶ ಬೆಳೆದಿದೆ. ಯುರೋಪ್-ಅಮೇರಿಕದ ದೇಶಗಳ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶಹೊಂದಿರುವ ಭಯಂಕರವಾದ ಉಗ್ರ ಸಂಘಟನೆಗಳು ಬೆಳೆದು ನಿಂತಿದ್ದು ವಿಶ್ವಾದ್ಯಂತ ತಮ್ಮ ಕರಾಳ ಜಾಲವನ್ನು ವಿಸ್ತರಿಸಿ ಕೊಂಡಿವೆ. ಅಂತಹ ಸಂಘಟನೆಗಳೊಂದಿಗೆ ಸಂಪರ್ಕಕ್ಕೆ ಬರುವ ನಮ್ಮ ದೇಶದ ಕೆಲವು ಮುಸ್ಲಿಂ ಯುವಕರು ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗುತ್ತಿರುವುದನ್ನು ಕಾಣುತ್ತೇವೆ. ಪಾಕಿಸ್ತಾನದಲ್ಲಿ ಇಂತಹ ಸಂಘಟನೆಗಳು ಕ್ರಿಯಾಶೀಲವಾಗಿರುವುದು ಗುಟ್ಟಿನ ವಿಷಯವೇನಲ್ಲ.

ಭಯೋತ್ಪಾದನೆ ಸರ್ವತಾ ಸಮರ್ಥನೀಯವಲ್ಲ:

ಭಯೋತ್ಪಾದನೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಹಿಂದುಗಳಲ್ಲಿಯೂ ಭಯೋತ್ಪಾದಕ ಸಂಘಟನೆಗಳು ಇವೆ. ಹಿಂದು ಯುವಕರನ್ನು ದಾರಿ ತಪ್ಪಿಸುವ ಕೆಲಸದಲ್ಲಿ ಅವುಗಳು ನಿರತವಾಗಿವೆ. ಆದರೆ, ಹಿಂದು ಭಯೋತ್ಪಾದನೆಯನ್ನಾಗಲಿ ಮುಸ್ಲಿಂ ಭಯೋತ್ಪಾದನೆಯನ್ನಾಗಲಿ ಇನ್ನಾವುದೇ ಭಯೋತ್ಪಾದನೆಯನ್ನಾಗಲಿ ಸಮರ್ಥಿಸಲಾಗದು. ಮನುಷ್ಯತ್ವ, ಮಾನವೀಯತೆಯನ್ನು ಪ್ರೀತಿಸುವವರು ಯಾರು ಭಯೋತ್ಪಾದನೆಯನ್ನು ಬೆಂಬಲಿಸಲು ಸಾಧ್ಯವಿಲ್ಲ. ನಮಗೆ ಯಾರಿಂದ ಎಷ್ಟೇ ಅನ್ಯಾಯ ಆಗಿದ್ದರೂ ನಾವು ಭಯೋತ್ಪಾದಕರಾಗಬೇಕಾಗಿಲ್ಲ.

ಭಯೋತ್ಪಾದಕ ಕೃತ್ಯಗಳಲ್ಲಿ ಅಮಾಯಕರು ಸಾಯುತ್ತಾರೆ. ಅವರು ಹಿಂದುಗಳು ಇರಬಹುದು ಅಥವ ಮುಸಲ್ಮಾನರು ಇರಬಹುದು. ಆದ್ದರಿಂದ ಭಯೋತ್ಪಾದಕರು ಹಿಂದುಗಳೂ ಆಗಿರುವುದಿಲ್ಲ, ಮುಸಲ್ಮಾನರೂ ಆಗಿರುವುದಿಲ್ಲ. ಅವರನ್ನು ಹಿಂದುಗಳೆಂದಾಗಲಿ, ಮುಸಲ್ಮಾನರು ಎಂದಾಗಲಿ ನಾವು ಸಮರ್ಥಿಸಬಾರದು. ಅವರನ್ನು ಎಲ್ಲರೂ ಖಂಡಿಸಬೇಕು. ಹಿಂದುಗಳು ಮತ್ತು ಮುಸಲ್ಮಾನರು, ಎಲ್ಲಾ ಶಾಂತಿಪ್ರಿಯ ಜನರು ಒಂದಾಗಿನಿಂತು ಈ ಭಯೋತ್ಪಾದನೆ ಎಂಬ ಪಿಡುಗನ್ನು ಹಿಮ್ಮೆಟ್ಟಿಸಬೇಕು.

ಹಿಂದುಗಳ ನಡುವೆ ಕಟ್ಟಿ ಬೆಳೆಸಲಾಗುತ್ತಿರುವ ಆರೆಸ್ಸೆಸ್, ಬಜರಂಗ ದಳ ಮುಂತಾದ ಫ್ಯಾಸಿಸ್ಟ್ ಭಯೋತ್ಪಾದಕ ಸಂಘಟನೆಗಳಂತೆ ಮುಸಲ್ಮಾನರ ನಡುವೆ ಜಮಾತ್.ಎ. ಇಸ್ಲಾಂ ಹಾಗೂ ಇತ್ತೀಚೆಗೆ ಪಾಪುಲರ್ ಫ್ರಂಟ್ ಆಫ್ ಇಂಡಿಯಾ ಅಂತಹ ಸಂಘಟನೆಗಳು ಬೆಳೆದು ಬರಲಾರಂಭಿಸಿವೆ. ಆರೆಸ್ಸೆಸ್ ಮಾದರಿಯಲ್ಲೇ ಪಿಎಫ್‌ಐ ಸಂಘಟನೆ ಮುಸ್ಲಿಂ ಯುವಕರ ಕೈಯಲ್ಲಿ ಲಾಠಿಗಳನ್ನು ಕೊಟ್ಟು, ಕವಾಯತು, ಪಥಚಲನ ಮಾಡಿಸುತ್ತಿದೆ. ಇದರ ಅಪಾಯವನ್ನು ನಮ್ಮ ಮುಸ್ಲಿಂ ಬಾಂಧವರು ಗ್ರಹಿಸಿಕೊಳ್ಳುವುದು ಅಗತ್ಯವಿದೆ. ಆರೆಸ್ಸೆಸ್ ಒಂದು ಹಿಟ್ಲರ್‌ಶಾಹಿ ಸಂಘಟನೆ ಎನ್ನುವುದಾದರೆ ಅದೇ ಮಾದರಿಯಲ್ಲಿ ಮುಸ್ಲಿಂ ಯುವಕರಿಗಾಗಿ ಪಿಎಫ್‌ಐ ಕಟ್ಟುವುದೂ ಸಹ ಹಿಟ್ಲರ್‌ಶಾಹಿ ಆಗುತ್ತದೆ. ಆರೆಸ್ಸೆಸ್ ನಮಗೆ ಮಾದರಿಯಲ್ಲ. ಆರೆಸ್ಸೆಸ್ ಹಿಂದು ಯುವಕರಲ್ಲಿ ಮುಸ್ಲಿಂ ದ್ವೇಷ ಬೆಳೆಸುತ್ತಿದ್ದಂತೆ ಪಿಎಫ್‌ಐ ಹಿಂದು ದ್ವೇಷ ಬೆಳೆಸುತ್ತದೆ. ಆರೆಸ್ಸೆಸ್ ಆಕ್ರಮಣವನ್ನು ತಡೆಯಲು ಅದೇ ಮಾದರಿಯ ಆಕ್ರಮಣಕಾರಿ ಸಂಘಟನೆ ಕಟ್ಟುವುದು ಪರಿಹಾರ ಆಗದು. ಇದರಿಂದ ಸ್ಪಷ್ಟವಾಗುವುದೇನೆಂದರೆ ಹಿಂದೂ ಭಯೋತ್ಪಾದನೆ ಮುಸ್ಲಿಂ ಭಯೋತ್ಪಾದನೆಯನ್ನು ಬೆಳೆಸುತ್ತದೆ ಮತ್ತು ಅದೇ ರೀತಿಯಲ್ಲಿ ಮುಸ್ಲಿಂ ಭಯೋತ್ಪಾದನೆ ಹಿಂದು ಭಯೋತ್ಪಾದನೆಯನ್ನು ಬೆಳೆಸುತ್ತದೆ.

ಹಿಂದುಗಳಿಗೆ, ಆರೆಸ್ಸೆಸ್ ಅಗತ್ಯವಿಲ್ಲ. ಹಾಗೆಯೇ ಮುಸಲ್ಮಾನರಿಗೆ ಪಿಎಫ್‌ಐ ಅಗತ್ಯವಿಲ್ಲ. ಎಲ್ಲ ವಿಧದ ಭಯೋತ್ಪಾದನೆಯನ್ನು ಎದುರಿಸಿ ಸೋಲಿಸಲು ಈ ದೇಶದಲ್ಲಿ

ಪುಟ 6 ಕ್ಕೆ

ಸಿಐಟಿಯು ಮುಖಂಡರ ಮೇಲೆ ಸುಳ್ಳು ಕೊಲೆ ಆರೋಪ AITUC ನಾಯಕರ ಸಂಚು

ವಿ.ಜೆ.ಕೆ ನಾಯರ್, ಅಧ್ಯಕ್ಷರು,
ಸಿಐಟಿಯು ರಾಜ್ಯ ಸಮಿತಿ

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಎಸ್. ಪ್ರಸನ್ನಕುಮಾರ್ ಮತ್ತು ಇತರರ ವಿರುದ್ಧ ಕೆಎಸ್ಆರ್‌ಟಿಸಿ ಬೆಂಗಳೂರು ಶಾಂತಿನಗರ ಕೇಂದ್ರ ವರ್ಕ್‌ಶಾಪ್‌ನಲ್ಲಿ ಕೆಲಸಮಾಡುತ್ತಿರುವ ಎಐಟಿಯುಸಿ ಸಂಘದ ಕಾರ್ಯಕರ್ತ ಮುನಿರೆಡ್ಡಿ ಎಂಬುವವರು ನೀಡಿರುವ ಸುಳ್ಳು ದೂರಿನ ಆಧಾರದಲ್ಲಿ ಪೊಲೀಸರು ಕೊಲೆ ಆರೋಪದ ಪ್ರಕರಣವೊಂದನ್ನು ದಾಖಲು ಮಾಡಿಕೊಳ್ಳಲಾಗಿರುವುದನ್ನು ಸಿಐಟಿಯು ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ನಮಗೆ ದೊರೆತಿರುವ ನಂಬಲರ್ಹವಾದ ಮಾಹಿತಿ ಪ್ರಕಾರ ಎಐಟಿಯುಸಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಎಚ್.ವಿ. ಅನಂತಸುಬ್ಬರಾವ್ ಅವರ ಸಹಾಯಕರಾಗಿರುವ ಕೆಎಸ್ಆರ್‌ಟಿಸಿಯ ಮಾಜಿ ನೌಕರ ಮುಖಂಡ ನಾಗರಾಜ್ ಎಂಬುವರು ಈ ಸುಳ್ಳು ದೂರು ನೀಡುವ ಪಿತೂರಿಯಲ್ಲಿ ಕ್ರಿಯಾಶೀಲ ಪಾತ್ರವಹಿಸಿದ್ದಾರೆ.

3 ನವೆಂಬರ್ 2012ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ, ಕೆಎಸ್ಆರ್‌ಟಿಸಿ ವರ್ಕ್‌ಶಾಪ್ ಹೊರಗಡೆ ಸಿಐಟಿಯು ಮುಖಂಡ ರೇವಪ್ಪ ಅವರ ನೇತೃತ್ವದಲ್ಲಿ ಆಗಮಿಸಿದ ಸಿಐಟಿಯು ಜಾಥದಲ್ಲಿದ್ದ ಮುಖಂಡರ ಮತ್ತು ಇತರರ ಮೇಲೆ ಮುನಿರೆಡ್ಡಿ ಮತ್ತು ಆತನ ಕೆಲವು ಅನುಯಾಯಿಗಳು ವಾಗ್ವಾದಕ್ಕಿಳಿದು ಹಲ್ಲೆಮಾಡುತ್ತಿದ್ದರು, ದುರದೃಷ್ಟವಶಾತ್ ಅದೇ ಹೊತ್ತಿನಲ್ಲಿ ಒಳಗಡೆ ಕೇಶವನ್ ಎಂಬ ನೌಕರನೊಬ್ಬ ಕುಸಿದು ಬಿದ್ದು ಹೃದಯಾಘಾತ ದಿಂದ ಮೃತಪಟ್ಟರು.

ಇತ್ತೀಚೆಗೆ ನಡೆದ ಕೆಎಸ್ಆರ್‌ಟಿಸಿ ನೌಕರರ 3 ದಿನಗಳ ಯಶಸ್ವಿ ಮುಷ್ಕರದ ಕೊನೆಯಲ್ಲಿ ಆದ ಒಪ್ಪಂದದಲ್ಲಿ ಎಐಟಿಯುಸಿ ಮುಖಂಡರಿಂದ ನೌಕರರಿಗೆ ಆಗಿರುವ ಅನ್ಯಾಯದ ಬಗ್ಗೆ ನೌಕರರಿಗೆ ತಿಳುವಳಿಕೆ ನೀಡಲು ಸಿಐಟಿಯು ಈ ಜಾಥವನ್ನು ಸಂಘಟಿಸಿತ್ತು. ಜಾಥದಲ್ಲಿ ಬಂದಿದ್ದ ನೌಕರರು ವರ್ಕ್‌ಶಾಪ್ ಎದುರು ಕರಪತ್ರಗಳನ್ನು ಹಂಚುತ್ತಿದ್ದಾಗ ಎಐಟಿಯುಸಿ ಬೆಂಬಲಿಗರು ಮುನಿರೆಡ್ಡಿ ನೇತೃತ್ವದಲ್ಲಿ ಆಕ್ಷೇಪ ವ್ಯಕ್ತಪಡಿಸುತ್ತಾ ಜಗಳಕ್ಕೆ ಬಂದರು.

ಮೃತಪಟ್ಟ ಕೇಶವನ್ ಎಬುವವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದವರಾಗಿದ್ದು ಕೆಲವು ದಿನಗಳ ರಜೆಯ ನಂತರ ಅಂದೇ ಕೆಲಸಕ್ಕೆ ಬಂದಿದ್ದರು. ವರ್ಕ್ ಶಾಪ್ ಗೇಟ್ ಬಳಿಯಲ್ಲಿ ದೊರೆತ ಸಿಐಟಿಯು ಕರಪತ್ರವನ್ನು ಓದುತ್ತಾ ತನ್ನ ಕೆಲಸದ ಸ್ಥಳಕ್ಕೆ ನಡೆದು ಹೋಗುತ್ತಿದ್ದಾಗ ವರ್ಕ್ ಶಾಪ್ ಒಳಗಡೆ ಅವರು ಕುಸಿದು ಬಿದ್ದರು. ಅವರನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಅಲ್ಲಿ ಅವರು ಸಾವನಪ್ಪಿದರು. ನೌಕರನೊಬ್ಬನ ಸಾವಿನ ಬಗ್ಗೆ ದುಃಖ ವ್ಯಕ್ತಪಡಿಸುವ ಬದಲಾಗಿ ಎಐಟಿಯುಸಿ ಮುಖಂಡರು ಈ ಅವಕಾಶವನ್ನು ಸಿಐಟಿಯು ವಿರುದ್ಧವಾಗಿ ಬಳಸಿಕೊಳ್ಳಲು ನಿರ್ಧರಿಸಿ ಆತನನ್ನು ಕೊಲೆಮಾಡಲಾಗಿದೆ ಎಂದು ಸುಳ್ಳು ಆರೋಪದ ದೂರು ನೀಡಿದ್ದಾರೆ. ಪ್ರಕರಣದಲ್ಲಿ ಜಾಥ ನೇತೃತ್ವ ವಹಿಸಿದ್ದ ರೇವಪ್ಪ ಅವರನ್ನು ಆರೋಪಿ ನಂ. 1, ಕೆಎಸ್ಆರ್‌ಟಿಸಿ ಸಿಐಟಿಯು ಸಂಘದ ಅಧ್ಯಕ್ಷರೂ ಆಗಿರುವ ಎಸ್. ಪ್ರಸನ್ನಕುಮಾರ್ ಆರೋಪಿ ನಂ 2 ಕೆಎಸ್ಆರ್‌ಟಿಸಿ ಸಿಐಟಿಯು ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಮಂಜುನಾಥ್ ಆರೋಪಿ ನಂ 3 ಮತ್ತು ಇತರರು ಎಂದು ದೂರು ದಾಖಲು ಮಾಡಿಸಲಾಗಿದ್ದು ತಮಗೆ ಬೇಕಾದಾಗ, ಬೇಕಾದವರನ್ನು ಸೇರ್ಪಡೆ ಮಾಡಲು ಅವಕಾಶ ಮಾಡಿಕೊಂಡಿದ್ದಾರೆ.

ನಿಜವಾಗಿ, ಕಾಮ್ರೆಡ್ ಪ್ರಸನ್ನಕುಮಾರ್ ಅಕ್ಟೋಬರ್ 31 ರಂದು ದೆಹಲಿಯಲಿದ್ದು ಅಖಿಲ ಭಾರತ ಸಿಐಟಿಯು ವಿಸ್ತೃತ ಕಾರ್ಯದರ್ಶಿ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿಂದ ನವೆಂಬರ್ 1 ರಂದು ಬೆಂಗಳೂರಿಗೆ ಬಂದು, ಅದೇ ದಿನ ರಾತ್ರಿ ಉ.ಕನ್ನಡದ ದಾಂಡೇಲಿಯ ಕಾರ್ಮಿಕರ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ನಂತರ 2ರ ರಾತ್ರಿ ಧಾರವಾಡ ದಿಂದ ಅವರು ಮೈಸೂರಿಗೆ ಬಸ್‌ನಲ್ಲಿ ಪ್ರಯಾಣ ಮಾಡಿ ನವೆಂಬರ್ 3 ರ ಬೆಳಗಿನ ಸಮಯದಲ್ಲಿ 9 ಗಂಟೆ ಸುಮಾರಿಗೆ ಮೈಸೂರ್ ಸಮೀಪಿಸುತ್ತಿರುವಾಗ ಬೆಂಗಳೂರು ಶಾಂತಿನಗರ ಕೆಎಸ್ಆರ್‌ಟಿಸಿ ವರ್ಕ್‌ಶಾಪ್ ಬಳಿ ನಡೆದ ಘಟನೆಯ ಮಾಹಿತಿ ಅವರಿಗೆ ದೊರೆಯಿತು. ಮೈಸೂರಿಗೆ ತಲುಪಿದ ಅವರು ಅಂಗನವಾಡಿ ನೌಕರರ ರಾಜ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ ರ‍್ಯಾಲಿಯಲ್ಲಿ ಭಾಗವಹಿಸಿದ್ದರು.

ರಸ್ತೆ ಸಾರಿಗೆ ನಿಗಮದಲ್ಲಿರುವ ನೌಕರರ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವತಃ ಸಿಐಟಿಯು ನೇತೃತ್ವದಲ್ಲಿ ರಚನೆಯಾದ ಸಂಘವೇ ಎಲ್ಲಾ ಇತರೆ ನೌಕರರ ಸಂಘಗಳನ್ನು ಒಗ್ಗೂಡಿಸಿ ಹೋರಾಟ ನಡೆಸುವ ಹಲವು ಯತ್ನಗಳನ್ನು

1. ಐಕ್ಯತೆಗೆ ಮಾರಕವಾದ ಸ್ವಾರ್ಥ ಸಾಧನೆ
2. CITU ಖಂಡನೆ
3. ಸಾವಿಗೀಡಾದ ಕಾರ್ಮಿಕ ಕುಂಟುಂಬಕ್ಕೆ ಸೂಕ್ತ ಪರಿಹಾರ ನೀಡಲು ಆಗ್ರಹ

ನಡೆಸಿತ್ತು. ಆದರೆ ಕೆಎಸ್ಆರ್‌ಟಿಸಿಯಲ್ಲಿರುವ ತಮ್ಮದೇ ದೊಡ್ಡ ಸಂಘವೆಂದು ಹೇಳಿಕೊಳ್ಳುತ್ತಿರುವ ಕಾಮ್ರೆಡ್ ಅನಂತಸುಬ್ಬರಾವ್ ಮತ್ತು ಅವರ ಸಹಾಯಕ ನಾಗರಾಜ್ ನೇತೃತ್ವದ ಎಐಟಿಯುಸಿ ಸಂಘವು ಸಿಐಟಿಯು ಸಂಘವೊಂದನ್ನು ಮಾತ್ರ ಹೊರಗಿಟ್ಟು ಇತರ ಸಂಘಗಳ ಕ್ರಿಯಾ ಸಮಿತಿಯನ್ನು ರಚಿಸಿತ್ತು. 3 ದಿನಗಳ ಮುಷ್ಕರದ ನಂತರ. ಸರ್ಕಾರ ಅನಂತ ಸುಬ್ಬರಾವ್ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದದ ಷರತ್ತುಗಳಿಂದಾಗಿ ನೌಕರರಿಗೆ ಸರ್ಕಾರ ಏಕಪಕ್ಷೀಯವಾಗಿ ಘೋಷಣೆ ಮಾಡಿದ ವೇತನ ಹೆಚ್ಚಳಕ್ಕಿಂತ ಸೌಲಭ್ಯಗಳು ಕಡಿಮೆಯಾಗಲಿವೆ.

ಅನಂತಸುಬ್ಬರಾವ್ ಅವರ ಒಪ್ಪಂದ ಜಾರಿಗೆ ಬಂದರೆ ತಮಗೆ ನಷ್ಟವಾಗಲಿದೆ ಎಂಬುದನ್ನು ಅರ್ಥಮಾಡಿಕೊಂಡ ಕೆಎಸ್ಆರ್‌ಟಿಸಿ ನೌಕರರು ತಮಗೆ ದ್ರೋಹ ಮಾಡಲಾಗಿದೆ ಎಂದು ತೀವ್ರ ಅಸಮಾಧಾನಗೊಂಡಿದ್ದಾರೆ. ಆದ್ದರಿಂದಲೇ ರಾಜ್ಯಾದ್ಯಂತ ಸಿಐಟಿಯು ಜಾಥಕ್ಕೆ ಅವರು ವ್ಯಾಪಕವಾಗಿ ಸ್ಪಂಧಿಸಿ ಕರಪತ್ರಗಳನ್ನು ಸ್ವೀಕರಿಸಿದ್ದಾರೆ. ಸಿಐಟಿಯು ಇದೇ ನವೆಂಬರ್ 9 ರಂದು ತುಮಕೂರಿನಲ್ಲಿ ಕೆಎಸ್ಆರ್‌ಟಿಸಿ ನೌಕರರ ವಿಭಾಗ ಮಟ್ಟದ ಸಮಾವೇಶವನ್ನು ಸಂಘಟಿಸಿದೆ. ತಮ್ಮ ಬೆಂಬಲಿಗರು ಸಿಐಟಿಯು ಸಂಘಕ್ಕೆ ಆಕರ್ಷಿತರಾಗಿ ಹೋಗಬಹುದೆಂಬ ಭೀತಿಗೆ ಒಳಗಾದ ಎಐಟಿಯುಸಿ ನಾಯಕತ್ವವು ತುಮಕೂರಿನಲ್ಲೇ ನವೆಂಬರ್ 8ರಂದು ಸಮಾವೇಶ ನಡೆಸುವುದಾಗಿ ಪ್ರಕಟಿಸಿದೆ. ಆದ್ದರಿಂದಲೇ, ಕಾಂ. ಪ್ರಸನ್ನಕುಮಾರ್ ಮತ್ತು ಇತರರ ಮೇಲೆ ಈ ಕೊಲೆ ಆರೋಪ ಮಾಡಿ ಅವರನ್ನು ಬಂಧನಕ್ಕೆ ಒಳಪಡಿಸುವ ಸಂಚು ರೂಪಿಸಿದೆ.

ಎಐಟಿಯುಸಿಯ ದ್ವಿಮುಖ ನೀತಿಯ ಬಗ್ಗೆ ಸಿಐಟಿಯುಗೆ ಆಕ್ಷೇಪವಿದೆ. ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ಮತ್ತು ಎಐಟಿಯುಸಿ ಜೊತೆಯಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಐಕ್ಯತೆ ಬೆಳೆದುಬರುತ್ತಿದೆ. ಐಎನ್‌ಟಿಯುಸಿ ಮತ್ತು ಬಿಎಂಎಸ್ ಸಹ ಈ ಜಂಟಿ ವೇದಿಕೆಯ ಭಾಗವಾಗಿದ್ದಾರೆ. ಬೆಲೆ ಏರಿಕೆ, ಗುತ್ತಿಗೀಕರಣ ವಿರೋಧಿಸಿ ಮತ್ತು ರೂ. 10,000 ಮಾಸಿಕ ಕನಿಷ್ಠ ವೇತನವನ್ನು ನಿಗದಿಪಡಿಸಬೇಕೆಂದು ಒತ್ತಾಯಿಸಿ ಬರುವ ಫೆಬ್ರವರಿ 20 ಮತ್ತು 21ರಂದು 2 ದಿನಗಳ ಜಂಟಿ ರಾಷ್ಟ್ರೀಯ ಮುಷ್ಕರಕ್ಕೆ ಸಿದ್ಧತೆಗಳು ಆರಂಭವಾಗಿದ್ದು ಇದೇ ನವೆಂಬರ್ 17 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಜಂಟಿ ಸಮಾವೇಶ ನಡೆಯಲಿದೆ. ಹೀಗಿರುವಾಗ, ರಾಜ್ಯ ಎಐಟಿಯುಸಿ ಮುಖಂಡತ್ವ ಸಿಐಟಿಯು ಅನ್ನು ವಿರೋಧಿಸುವ ಸ್ವಾರ್ಥ ಸಾಧನೆಯಲ್ಲಿ ತೊಡಗಿದೆ.

ಸಿಐಟಿಯು ಕಾರ್ಮಿಕ ವರ್ಗದ ಐಕ್ಯತೆಗೆ ಬದ್ಧವಾಗಿದ್ದು ರಾಜ್ಯ ಎಐಟಿಯುಸಿ ನಾಯಕತ್ವವು ಡಾಂಗೆವಾದಿ ದಾರಿಯನ್ನು ಅನುಸರಿಸುತ್ತಾ ಹೋದರೆ ಕಾರ್ಮಿಕ ವರ್ಗದ ಐಕ್ಯತೆ ಸಾಧಿಸಲು ಸಾಧ್ಯವಾಗದು ಎಂದು ಅಭಿಪ್ರಾಯ ಪಡುತ್ತದೆ. ಆದ್ದರಿಂದ, ತುರ್ತು ಪರಿಸ್ಥಿತಿ ಕಾಲದ ಹಳೆಯ ಜಾಡನ್ನು ಕೈಬಿಟ್ಟು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ಮತ್ತು ಜನ ವಿರೋಧಿ ನೀತಿಗಳನ್ನು ಸೋಲಿಸಲು ಕಾರ್ಮಿಕ ವರ್ಗವನ್ನು ಒಂದುಗೂಡಿಸಲು ಮುಂದಾಗುವಂತೆ ಸ್ಥಳೀಯ ನಾಯಕತ್ವಕ್ಕೆ ಎಐಟಿಯುಸಿ ಅಖಿಲ ಭಾರತ ಮುಖಂಡತ್ವ ಅಗತ್ಯ ಮಾರ್ಗದರ್ಶನ ನೀಡಬೇಕೆಂದು ಸಿಐಟಿಯು ಆಗ್ರಹಿಸುತ್ತದೆ.

ಸಾವಿಗೀಡಾದ ಕರ್ತವ್ಯನಿರತ ಕಾರ್ಮಿಕ ಕೇಶವನ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಸಿಐಟಿಯು ಆಗ್ರಯಿಸುತ್ತದೆ.

ಎಐಟಿಯುಸಿ ರಾಜ್ಯ ನಾಯಕತ್ವ ಸುಳ್ಳು ದೂರನ್ನು ಹಿಂತೆಗೆದುಕೊಳ್ಳಬೇಕೆಂದೂ, ಮಾಡಿದ ತಪ್ಪಿಗೆ ಖೇದ ವ್ಯಕ್ತಪಡಿಸಬೇಕೆಂದೂ ಮತ್ತು ಕೆಎಸ್ಆರ್‌ಟಿಸಿ ನೌಕರರ ಹಿತರಕ್ಷಣೆಗಾಗಿ ಅವರನ್ನು ಹೇಗೆ ಒಂದುಗೂಡಿಸಬಹುದು ಎಂಬುದನು ಸಿಐಟಿಯು ಮುಖಂಡರೊಂದಿಗೆ ಚರ್ಚಿಸಲು ಮುಂದಾಗಬೇಕೆಂದು ಒತ್ತಾಯಿಸುತ್ತದೆ.

....ಮುಸಲ್ಮಾನರು ಉಗ್ರರಾಗಬೇಕಾಗಿಲ್ಲ

ಪುಟ 5 ರಿಂದ

ಹಿಂದುಗಳು ಮತ್ತು ಮುಸಲ್ಮಾನರು ಕೈಜೋಡಿಸಲು ಸಾಧ್ಯವಾಗಬೇಕು. ಎಲ್ಲ ಹಿಂದುಗಳು ಆರೆಸ್ಸೆಸ್ ಅನುಯಾಯಿಗಳಲ್ಲ. ಹಾಗೆಯೇ ಎಲ್ಲ ಮುಸಲ್ಮಾನರು ಭಯೋತ್ಪಾದಕರಲ್ಲ. ದೇಶದಲ್ಲಿ ಹಿಂದು–ಮುಸ್ಲಿಂ ಐಕ್ಯತೆಯನ್ನು ಪ್ರತಿಪಾದಿಸುವ, ಅದಕ್ಕಾಗಿ ಶ್ರಮಿಸುವ ಪ್ರಗತಿಪರ, ಎಡಪಂಥೀಯ ಸಂಘಟನೆಗಳಿವೆ. ಅವುಗಳ ಶಕ್ತಿ ಚಿಕ್ಕದಿರಬಹುದು. ಆದರೂ, ಅವುಗಳನ್ನು ಬೆಂಬಲಿಸಿ ಬಲಪಡಿಸುವುದರಲ್ಲಿ ತಮ್ಮ ನಿಜವಾದ ಹಿತ ಅಡಗಿದೆ ಎಂಬುದನ್ನು ಅಲ್ಪಸಂಖ್ಯಾತ ಮುಸಲ್ಮಾನರು ಗಮನಿಸಬೇಕು. 1920ರ ದಶಕದಲ್ಲಿ ಭಾರತ ದೇಶದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದ ಪ್ರಮುಖರು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದರು ಎಂಬುದನ್ನು ಮರೆಯಲಾಗದು. ಅಂತಹ ಎಡಪಂಥೀಯ ಶಕ್ತಿಗಳನ್ನು ಬಲಪಡಿಸುವ ಮೂಲಕ ನಮ್ಮ ದೇಶದ, ಅದರ ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ಕಾಪಾಡಬೇಕಾಗಿದೆ.

ಆದ್ದರಿಂದ ಮೋದಿ ಎಂಬ ನರಹಂತಕನ ಭೀತಿಗೊಳಗಾಗಿ ಮುಸ್ಲಿಂ ಯುವಕರು ಉಗ್ರರಾಗಬೇಕಾಗಿಲ್ಲ. ಮುಸಲ್ಮಾನರಿಂದ ಹಿಂದುಗಳಿಗೆ ಅಪಾಯವಿದೆ ಎಂಬ ಸುಳ್ಳು ಅಪಪ್ರಚಾರಕ್ಕೆ ಕಿವಿಗೊಟ್ಟು ಹಿಂದುಗಳು ಹಿಟ್ಲರ್ ಪಡೆಯನ್ನೂ ಬಲಪಡಿಸಬೇಕಾಗಿಲ್ಲ.

ಕಾಂಗ್ರೆಸ್ ಪಕ್ಷದ ದಿಲ್ಲಿ 'ಮೆಗಾ ರ್‍ಯಾಲಿ'ಯಲ್ಲಿ "ಎಲ್ಲ ಹಗರಣಗಳ ಆಪಾದನೆಗಳ ವಿರುದ್ಧ ಹೋರಾಡುತ್ತೇವೆ" ಎಂದು ಕಾಂಗ್ರೆಸ್ ಅಧ್ಯಕ್ಷರು ಸಾರಿದರು; ಪ್ರಧಾನ ಕಾರ್ಯದರ್ಶಿ "ವ್ಯವಸ್ಥೆಯನ್ನು ಬದಲಿಸಬೇಕಾಗಿದೆ" ಎಂದು ಗುಡುಗಿದರು; "ಕೆಲವು ಮಂದಿ ಸಾರ್ವಜನಿಕರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ" ಎಂದರು ಪ್ರಧಾನ ಮಂತ್ರಿಗಳು. ಆದರೆ ನಿಜವಾಗಿ ನಮ್ಮನ್ನು ಮತ್ತು ದೇಶವನ್ನು ದಾರಿ ತಪ್ಪಿಸುತ್ತಿರುವವರು ಸ್ವತಃ ನೀವು ಮತ್ತು ಕಾಂಗ್ರೆಸ್ ಪಕ್ಷ ಎಂದು ಜನತೆ ಪ್ರಧಾನ ಮಂತ್ರಿಗಳಿಗೆ ಹೇಳಬೇಕಾಗಿದೆ. ವಿಶಾಲ ಜನಸಮೂಹಗಳ ಮೇಲೆ ಮತ್ತೆ-ಮತ್ತೆ ಹೊರೆಗಳನ್ನು ಹಾಕುತ್ತಿರುವುದರ ಬಗ್ಗೆ ಪಶ್ಚಾತ್ತಾಪದ ಲವಲೇಶವೂ ಇಲ್ಲದ ಈ ಕಾಂಗ್ರೆಸ್ ರ್‍ಯಾಲಿಯ ಭಾಷಣಗಳು ಈ ಸುಧಾರಣಾ ಧೋರಣೆಯ ದಿಕ್ಕಿನ ವಿರುದ್ಧ ಇನ್ನಷ್ಟು ಬಲಿಷ್ಟ ಹೋರಾಟಗಳನ್ನು ಹರಿಯ ಬಿಡಬೇಕೆಂಬ ಜನತೆಯ ನಿರ್ಧಾರವನ್ನು ದ್ವಿಗುಣಗೊಳಿಸಬೇಕಾಗಿದೆ.

ಜನತೆಯನ್ನು ತಪ್ಪು ದಾರಿಗೆಳೆಯುತ್ತಿರುವವರು ಪ್ರಧಾನ ಮಂತ್ರಿಗಳು ಮತ್ತು ಕಾಂಗ್ರೆಸ್ ಪಕ್ಷವೇ !

ಸೀತಾರಾಂ ಯೆಚೂರಿ

ಆಳುವ ಯುಪಿಎ-2 ಮೈತ್ರಿಕೂಟ ಸರಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷ ಕಳೆದ ಭಾನುವಾರ ದಿಲ್ಲಿಯಲ್ಲಿ ಒಂದು 'ಮೆಗಾರ್‍ಯಾಲಿ' ನಡೆಸಿದೆ. ಇದು ಯುಪಿಎ-2 ಸರಕಾರ ಮತ್ತು ಅದರ ಧೋರಣೆಗಳ ಬೆಂಬಲಾರ್ಥ ರ್‍ಯಾಲಿ ಎಂದು ಪ್ರಕಟಿಸಲಾಗಿತ್ತು. ಕಾಂಗ್ರೆಸ್ ಮತ್ತು ಯುಪಿಎ ಅಧ್ಯಕ್ಷೆ, ಕಾಂಗ್ರೆಸ್ ಪ್ರಧಾನ ಕರ್ಯದರ್ಶಿ ಮತ್ತು ಪ್ರಧಾನ ಮಂತ್ರಿಗಳ ಭಾಷಣಗಳು ಗಮನ ಕೇಂದ್ರೀಕರಿಸಿದ್ದು ಭ್ರಷ್ಟಾಚಾರದ ಪ್ರಶ್ನೆಗಳು ಮತ್ತು ನವ-ಉದಾರವಾದಿ ಆರ್ಥಿಕ ಸುಧಾರಣೆಗಳ, ಅದರಲ್ಲೂ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡಿರುವ ಕ್ರಮದ ಸಮರ್ಥನೆಯ ಮೇಲೆಯೇ. ಈ ಸರಕಾರ ನಮ್ಮ ದೇಶದ ವಿಶಾಲ ಜನಸಮೂಹಗಳ ಮೇಲೆ ಮತ್ತೆ-ಮತ್ತೆ ಹೊರೆಗಳನ್ನು ಹಾಕುತ್ತಿರುವುದರ ಬಗ್ಗೆ ಪಶ್ಚಾತ್ತಾಪದ ಲವಲೇಶವೂ ಈ ಯಾವ ಭಾಷಣದಲ್ಲೂ ಕಾಣ ಬರಲಿಲ್ಲ ಎಂಬುದು ಗಮನಾರ್ಹ ಸಂಗತಿ.

"ನಮ್ಮ ವಿರುದ್ಧ ಇರುವ ಎಲ್ಲ ಹಗರಣಗಳ ಆಪಾದನೆಗಳ ವಿರುದ್ಧ ಹೋರಾಡುತ್ತೇವೆ, ತಪ್ಪಿತಸ್ಥರೆಂದು ಕಂಡುಬಂದ ಯಾರನ್ನೂ ಕ್ಷಮಿಸುವುದಿಲ್ಲ" ಎಂದು ಭ್ರಷ್ಟಾಚಾರದ ಪ್ರಶ್ನೆಯ ಮೇಲೆ ಮಾತಾಡುತ್ತ ಯುಪಿಎ ಅಧ್ಯಕ್ಷರು ಹೇಳಿದರು. ಗಾಂಧಿ ವಂಶದ ಉತ್ತರಾಧಿಕಾರಿ ಮತ್ತು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ "ವ್ಯವಸ್ಥೆಯನ್ನು ಬದಲಿಸಬೇಕಾಗಿದೆ" ಎಂದು ಗುಡುಗಿದರು; "ನಾನು ಈ ವ್ಯವಸ್ಥೆಯನ್ನು ಎಂಟು ವರ್ಷಗಳಿಂದ ನೋಡುತ್ತಿದ್ದೇನೆ. ಸಮಸ್ಯೆಯೆಂದರೆ ಈ ವ್ಯವಸ್ಥೆಯೇ ಎಂದು ನಾನು ನಿಮಗೆ ಹೇಳಬಲ್ಲೆ" ಎಂದರು. ಏನೀ ಬದಲಾವಣೆ, ಅದನ್ನು ತರುವವರು ಯಾರು ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ನಮ್ಮ-ನಮ್ಮ ಊಹೆಗೆ ಬಿಟ್ಟಿದ್ದಾರೆ. ಕಳೆದ ಚಳಿಗಾಲದ ಅಧಿವೇಶನದಲ್ಲಿ ಲೋಕಪಾಲ ಮಸೂದೆಗೆ 'ಅಡ್ಡಿಯಾದದ್ದು ಪ್ರತಿಪಕ್ಷಗಳೇ' ಎಂದು ಆಪಾದಿಸಿದ ಅವರು "ನಾವದನ್ನು ಪಾಸು ಮಾಡಿಸುತ್ತೇವೆ, ಕಾದು ನೋಡಿ" ಎಂದರು.


ಕಳೆದ ಚಳಿಗಾಲದ ಅಧಿವೇಶನದಲ್ಲಿ ರಾಜ್ಯಸಭೆಯಲ್ಲಿ ಮಧ್ಯರಾತ್ರಿಯ ವೇಳೆಯಲ್ಲಿ ಲೋಕಪಾಲ ಮಸೂದೆ ಪಾಸಾಗದಂತೆ ಕಾಂಗ್ರೆಸ್ ಪಕ್ಷ ಎಂತಹ ಬುಡಮೇಲು ಕೃತ್ಯ ನಡೆಸಿತು ಎಂಬುದು ಇಡೀ ದೇಶಕ್ಕೇ ಗೊತ್ತಿದೆ, ಜನ ಟಿವಿಗಳಲ್ಲಿ ಅದನ್ನು ನೋಡಿದ್ದಾರೆ. ಈಗಲೂ ಈ ಮಸೂದೆ, ರಾಜ್ಯಸಭೆಯ ಮುಂದಿರುವ, ಅದನ್ನು ಬಲಪಡಿಸುವ, ಪರಿಣಾಮಕಾರಿಯಾಗಿಸುವ ತಿದ್ದುಪಡಿಗಳೊಂದಿಗೆ ಯಾವಾಗ ಸಂಸತ್ತು ಅಂಗೀಕರಿಸಬಹುದು ಎಂಬುದು ಕೂಡ ಊಹೆಗೆ ಬಿಟ್ಟಿರುವ ಸಂಗತಿಯೇ.

ಕಾಂಗ್ರೆಸ್ಸೇ ನಿರ್ಮಿಸಿದ 'ವ್ಯವಸ್ಥೆ'

'ವ್ಯವಸ್ಥೆಯ ಬದಲಾವಣೆ'ಯ ಭಾರೀ ಮಾತಿನ ಬಗ್ಗೆ ಹೇಳುವುದಾದರೆ, ಈಗಿರುವ ನವ-ಉದಾರವಾದಿ ಆರ್ಥಿಕದ ಮತ್ತು ಬೃಹತ್ ಭ್ರಷ್ಟಾಚಾರಗಳಿಗೆ ಇದುವರೆಗೆ ಕಾಣದ, ಊಹಿಸಲೂ ಸಾಧ್ಯವಾಗಿರದ ದಾರಿಗಳನ್ನು ತೆರೆದು ಕೊಟ್ಟಿರುವ ಸುಧಾರಣೆಗಳ ವ್ಯವಸ್ಥೆಯನ್ನು ನಿರ್ಮಿಸಿರುವುದು, ಅವರ ಕಾಂಗ್ರೆಸ್ ಪಕ್ಷವೇ ತಾನೇ ಎಂದು ಒತ್ತಿ ಕೇಳಬೇಕಾಗುತ್ತದೆ. ಈ ನವ-ಉದಾರವಾದಿ ದಿಕ್ಕು-ದಾರಿ ಅತ್ಯಂತ ಹೊಲಸು ಚಮಚಾ ಬಂಡವಾಳಶಾಹಿ ನಾಯಿಕೊಡೆಗಳಂತೆ ಹರಡಲು ಕಾರಣೀಭೂತವಾಗಿದೆ. ಫಲಿತಾಂಶವೆಂದರೆ ಲಕ್ಷ-ಲಕ್ಷ ಕೋಟಿ ರೂ.ಗಳಷ್ಟು ಹಣವನ್ನು ಲೂಟಿ ಹೊಡೆಯಲಾಗಿದೆ, ಮುಂದೆಯೂ ಲೂಟಿ ಮಾಡಲಾಗುತ್ತದೆ. ಈ ವ್ಯವಸ್ಥೆಯನ್ನು ಬದಲಿಸುವುದಿರಲಿ. ಮೂವರೂ ಭಾಷಣಕಾರರು ಈ ನವ-ಉದಾರವಾದಿ ಧೋರಣೆಯ ಸುಧಾರಣೆಗಳನ್ನು ಬೆಂಬಲಿಸಿದ್ದಾರೆ, ಅನುಮೋದಿಸಿದ್ದಾರೆ, ಇಂತಹ ಸುಧಾರಣೆಗಳಿಲ್ಲದೆ ಭಾರತದ ಬೆಳವಣಿಗೆ ಸಾಧ್ಯವಿಲ್ಲ ಎಂದಿದ್ದಾರೆ.

ಪ್ರಧಾನ ಮಂತ್ರಿಗಳಂತೂ ತಮ್ಮ ಭಾಷಣದಲ್ಲಿ ಆರ್ಥಿಕ ಸುಧಾರಣೆಗಳನ್ನು ಬಲವಾಗಿ ಸಮರ್ಥಿಸಿಕೊಂಡರು. ಅದು ಚುನಾವಣಾ ಪ್ರಚಾರ ಭಾಷಣವೇ ಅಗಿತ್ತು. "ಯಾವ ದೇಶವೂ ಆರ್ಥಿಕ ಬೆಳವಣಿಗೆಯಿಲ್ಲದೆ ತನ್ನ ಅತ್ಯಂತ ದೊಡ್ಡ ಸವಾಲುಗಳನ್ನು ಎದುರಿಸಲಾರದು" ಎನ್ನುತ್ತ ಆರ್ಥಿಕವನ್ನು ವಿದೇಶಿ ಬಂಡವಾಳಕ್ಕೆ ಮತ್ತಷ್ಟು ತೆರೆದರೆ ಯುವಜನರಿಗೆ ಮತ್ತಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದರು. ನಮ್ಮ ವಿಶಾಲ ಜನಸಮೂಹಗಳ ಮೇಲೆ ಹೇರಿರುವ ಹೊರೆಗಳನ್ನು ಸಮರ್ಥಿಸಿ ಕೊಳ್ಳುತ್ತ "ಹಲವು ಬಾರಿ, ಸುಲಭದ ದಾರಿ ಹಿಡಿಯುವುದಕ್ಕಿಂತ ಹೆಚ್ಚು ಕಷ್ಟಕರ ದಾರಿಯನ್ನು ಹಿಡಿಯಬೇಕಾಗುತ್ತದೆ, ಏಕೆಂದರೆ ಅದರಿಂದ ದೇಶದ ಭವಿಷ್ಯಕ್ಕೆ ಒಳಿತಾಗುತ್ತದೆ" ಎಂದರು.

ಅದೇ ಧಾಟಿಯಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಹೆಚ್ಚಿಸಿರುವುದನ್ನೂ ಅವರು ಸಮರ್ಥಿಸಿಕೊಂಡರು, ಸರಕಾರದ ಸಬ್ಸಿಡಿ ಮೊತ್ತ ಹೆಚ್ಚಿದರೆ, ಅದರ ಪರಿಣಾಮವಾಗಿ ಹೆಚ್ಚುವ ಹಣಕಾಸು ಕೊರತೆಯಿಂದ "ದೀರ್ಘಕಾಲದಲ್ಲಿ ಈ ದೇಶದ ಜನತೆಗೆ ತೊಂದರೆಯಾಗುತ್ತದೆ" ಎಂದರು. 'ಆ ದೀರ್ಘಕಾಲದಲ್ಲಿ ನಾವೆಲ್ಲರೂ ಸತ್ತಿರುತ್ತೇವೆ!' ಎಂದು ಹಿಂದೊಮ್ಮೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಜಾನ್ ಮೆನಾರ್ಡ್ ಕೀನ್ಸ್ ಟಿಪ್ಪಣಿ ಮಾಡಿದ್ದರು ಎಂಬುದು ಸ್ವತಃ ಆರ್ಥಿಕ ತಜ್ಞರಾಗಿರುವ ನಮ್ಮ ಪ್ರಧಾನ ಮಂತ್ರಿಗಳಿಗೂ ಗೊತ್ತಿರಬೇಕು.



ಪ್ರಧಾನಿಗಳ ಟೊಳ್ಳು ಮಾತು

ಹಣಕಾಸು ಹೆಚ್ಚುತ್ತಿರಲು ಕಾರಣವೇನು. ಬಡವರಿಗೆ ಕೊಡುವ ಸಬ್ಸಿಡಿ ಕಾರಣವಲ್ಲ, ಶ್ರೀಮಂತರಿಗೆ ಕಾರ್ಪೊರೇಟ್ ತೆರಿಗೆಗಳು ಮತ್ತು ಆದಾಯ ತೆರಿಗೆಗಳಲ್ಲಿ ಕೊಡಮಾಡುತ್ತಿರುವ ರಿಯಾಯ್ತಿಗಳು ಕಾರಣ ಎಂದು ಈ ಅಂಕಣದಲ್ಲಿ ಹಲವು ಬಾರಿ ಹೇಳಿದ್ದೇವೆ. ಕಳೆದ ಬಜೆಟ್ ದಸ್ತಾವೇಜುಗಳ ಪ್ರಕಾರ ಈ ಮೊತ್ತ ರೂ.5.28 ಲಕ್ಷ ಕೋಟಿ. ಈಗ ಪ್ರಧಾನಮಂತ್ರಿಗಳಿಗೆ ಆತಂಕ ಉಂಟು ಮಾಡಿರುವ ಹಣಕಾಸು ಕೊರತೆ ಜಿಡಿಪಿಯ 6.9ಶೇ. ವೆಂದಾದರೆ, ಅದರ ಮೊತ್ತ ರೂ.5.22ಲಕ್ಷ ಕೋಟಿ ರೂ.ಗಳು. ಅಂದರೆ ಶ್ರೀಮಂತರಿಗೆ ಅಂತಹ ಭಾರೀ ರಿಯಾಯ್ತಿ ಕೊಟ್ಟಿರದಿರುತ್ತಿದ್ದರೆ ಹಣಕಾಸು ಕೊರತೆಯೇ ಇರುತ್ತಿರಲಿಲ್ಲ. ಹಣಕಾಸು ಕೊರತೆ ಉಂಟಾಗಿರುವುದು ಶ್ರೀಮಂತರಿಗೆ ಹೀಗೆ ಕೊಟ್ಟ ಸಬ್ಸಿಡಿಗಳಿಂದ, ಆದರೆ ಈ ಕೊರತೆ ನೀಗಿಸಲು ಕಡಿತ ಮಾಡುವುದು ಬಡವರಿಗೆ ನೀಡುವ ಸಬ್ಸಿಡಿಗಳನ್ನು. ಕಡಿತ ಮಾಡುವುದರಿಂದ, ಆಮೂಲಕ ಅವರ ಮೇಲೆ ಹೊರೆಗಳನ್ನು ಹಾಕಿ ಅವರ ಸಂಕಟಗಳನ್ನು ಹೆಚ್ಚಿಸುವುದರಿಂದ! ಮಾನ್ಯ ಪ್ರಧಾನಿಗಳೇ, ಇದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ.

ಇಂತಹ ಸಮರ್ಥನೆಗಳ ಹಿನ್ನೆಲೆಯಲ್ಲಿ, ಆರ್ಥಿಕ ಬೆಳವಣಿಗೆ ಬಡವರನ್ನು, ಜನಸಾಮಾನ್ಯರನ್ನು ತಲುಪಬೇಕು ಎಂಬ ಅವರ ಕಳಕಳಿ, ಪ್ರತಿಯೊಬ್ಬರೂ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಲು ಆರ್ಥಿಕ ಬೆಳವಣಿಗೆಯಿಂದ ಸಾಧ್ಯವಾಗುತ್ತದೆ ಎಂಬ ಅವರ ಮಾತು ಟೊಳ್ಳಾಗಿ ಕಾಣುತ್ತದೆ.

ಪ್ರಧಾನ ಮಂತ್ರಿಗಳು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗಳಿಗೆ ಅವಕಾಶ ನೀಡಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ, ಇದು ಜನತೆಯ, ನಿರ್ದಿಷ್ಟವಾಗಿ ರೈತರ ಒಳಿತಿಗಾಗಿ ಎಂದಿದ್ದಾರೆ.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ವಿರೋಧ ಅದನ್ನು 2004-05ರ ಬಜೆಟಿನಲ್ಲಿ ಮೊದಲ ಬಾರಿಗೆ ಪ್ರಕಟಿಸಿದಾಗಲೇ ಬಂದಿತ್ತು. ಅಗ ಯುಪಿಎ-1 ಸರಕಾರ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿತ್ತು. ಎಡಪಕ್ಷಗಳ ದೃಢ ವಿರೋಧದಿಂದಾಗಿ ಆ ಪ್ರಸ್ತಾವ ಆಗ ಮೂಲೆಗುಂಪಾಯಿತು. ಎಡಪಕ್ಷಗಳು ಆಗ ಯುಪಿಎ-ಎಡಪಕ್ಷಗಳ ಸಮನ್ವಯ ಸಮಿತಿಗೆ ತಮ್ಮ ವಿರೋಧಕ್ಕೆ ಕಾರಣಗಳನ್ನು ವಿಷದಪಡಿಸುವ ಒಂದು ಟಿಪ್ಪಣಿಯನ್ನು ಸಲ್ಲಿಸಿದ್ದವು. ದೈತ್ಯ ಸೂಪರ್ ಮಾರ್ಕೆಟ್ ಕಂಪನಿಗಳ ಪ್ರವೇಶದಿಂದ ಬಳಕೆದಾರರಿಗೆ ಬೆಲೆಗಳು ಇಳಿಯುತ್ತವೆ, ಉದ್ಯೋಗಾವಕಾಶಗಳು ಹೆಚ್ಚುತ್ತವೆ, ರೈತರಿಗೆ ಮತ್ತು ಇತರ ಉತ್ಪಾದಕರಿಗೆ

ಪುಟ 15 ಕ್ಕೆ



ಅಭೂತಪೂರ್ವ ರ್‍ಯಾಲಿ

ಹೋರಾಟದ ಕಿಚ್ಚು, ಒಗ್ಗಟ್ಟಿನ ಸ್ಫೂರ್ತಿಗೆ ಸಾಕ್ಷಿಯಾದ ಸಮ್ಮೇಳನ

ಆರ್. ರಾಮಕೃಷ್ಣ

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರು ನಗರದಲ್ಲಿ ನವೆಂಬರ್ 3 ರಿಂದ 5 2012 ರವರೆಗೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯ 5 ನೇ ರಾಜ್ಯ ಸಮ್ಮೇಳನ. ಕರ್ನಾಟಕದ ಮೂಲೆಮೂಲೆಗಳಿಂದ ಬಂದ ಅಂಗನವಾಡಿ ನೌಕರರು ಒಂದು ಮೆರವಣಿಗೆ ತೆಗೆದರು. ಹತ್ತಾರು ವರ್ಷಗಳಿಂದ ಮೈಸೂರಿನಲ್ಲಿ ವಾಸವಿರುವ ಕೆಲವರು ಹೇಳಿದರು. ಕಳೆದ 25 ವರ್ಷದಲ್ಲಿ ಮೈಸೂರಿನಲ್ಲಿ ಅವರು ಅಷ್ಟು ದೊಡ್ಡ ಮಹಿಳಾ ರ್‍ಯಾಲಿಯನ್ನು ನೋಡಿಲ್ಲವಂತೆ.

ಅಂದು ಬೆಳಿಗ್ಗೆ ಗನ್ ಹೌಸ್‌ನಿಂದ ಹೊರಟ ನೌಕರರಲ್ಲಿ ಏನು ಶಿಸ್ತು. ಎಂತಹ ಉತ್ಸಾಹ. ಮೈಸೂರಿನ ನಾಗರೀಕರಿಗೆ ಕುತೂಹಲವೋ ಕುತೂಹಲ.

ಮೆರವಣಿಗೆಯ ಮುಂದೆ ಕೊಡಗಿನ ಕೊಡವ ಮಹಿಳೆಯರ ಶೈಲಿಯಲ್ಲಿ ಎಡದಿಂದ ಬಲಕ್ಕೆ ಸೆರಗು ಹೊದ್ದು ಸೀರೆ ಉಟ್ಟು, ಕೈಯಲ್ಲಿ 5 ದೊಡ್ಡ ಕೆಂಬಾವುಟಗಳನ್ನು ಹಿಡಿದು ದೃಢವಾದ ಹೆಜ್ಜೆ ಹಾಕುವ ಮಹಿಳೆಯ ದಂಡು. ಹಿಂದೆ ತಮ್ಮ ತಮ್ಮ ಜಿಲ್ಲೆಯ ಬ್ಯಾನರ್ ಮುಂದಿಟ್ಟುಕೊಂಡು ಸಾಲಾಗಿ ಸಾಗಿಬರುವ ಬಹುತೇಕ ಕೆಂಪು ಸೀರೆ ಉಟ್ಟ ಮಹಿಳೆಯರ ಹಿಂಡು. ಬಹುತೇಕ ಜನರ ಕೈಯಲ್ಲಿ ಕೆಂಬಾವುಟ. ಬಾಯಲ್ಲಿ ಗಟ್ಟಿ ಘೋಷಣೆ. "ಅಂಗನವಾಡಿ ನೌಕರರನ್ನು ಖಾಯಂ ಮಾಡಿ". "ವೇತನ ಕನಿಷ್ಟ 10,000 ಸಿಗಲೇ ಬೇಕು" "ಮೋಸದ ಪಿಂಚಣಿ ಯೋಜನೆ ಬೇಡವೇ ಬೇಡ"....

ಬೆಳಗಾಂ, ಬೀದರ್, ಗುಲಬರ್ಗಾಗಳಿಂದ 600–700 ಕಿ.ಮೀಗಳಷ್ಟು ದೂರಗಳಿಂದ ಸ್ವಂತ ವಾಹನಗಳನ್ನು ಮಾಡಿಕೊಂಡು ಪ್ರಯಾಣ ಮಾಡಿಬಂದವರಿಗೂ ಮೈಸೂರಿನ ಬೀದಿಗಳಲ್ಲಿ ಶಿಸ್ತುಬದ್ಧವಾದ ಮೆರವಣಿಗೆಯಲ್ಲಿ ಹೆಜ್ಜೆ ಹಾಕಲು ಆಯಾಸ ಅನಿಸಲಿಲ್ಲ.

ಈ ದೇಶ ಯಾರದೋ..

ಈ ದೇಶ ಯಾರದೋ... ಈ ದೇಶ ನಮ್ಮದೋ... ನೌಕರರು ಮೈದಾನದ ವಿಶಾಲ ಚಪ್ಪರದಡಿ ನೆರೆದರು. ವೇದಿಕೆಯಿಂದ ನೋಡದರೆ ಕಣ್ಣು ಹಾಯಿಸುವಷ್ಟು ಉದ್ದಕ್ಕೂ ಕೆಂಪು ಕೆಂಪು. ಕಾಂ. ಜಗದೀಶ್ ಸೂರ್ಯ ನೇತೃತ್ವದ ಎಸ್ಸೆಫೈನ ಸಂಗಾತಿಗಳ 'ಸಮೂಹ ಗಾನ' ಕೇಳುತ್ತಿತ್ತು. "ಈ ದೇಶ ಯಾರದೋ ?" ಸ್ವಾಗತ ಸಮಿತಿಯ ....ಸುನಂದ ವೇದಿಕೆ ಅತಿಥಿಗಳನ್ನು ಕರೆತಂದರೆ ಮೈಸೂರು ಜಿಲ್ಲೆಯ ಕಾವೇರಮ್ಮ ಅತಿಥಿಗಳನ್ನು ಸ್ವಾಗತಿಸಿದರು.

ನಿಮ್ಮ ಹೋರಾಟದ ಕೆಚ್ಚು ...

ಅಂಗನವಾಡಿ ನೌಕರರರ ಧೈರ್ಯ ಮತ್ತು ಹೋರಾಟದ ಕೆಚ್ಚು ಅದು ಇತರ ಹೋರಾಟಗಳಿಗೆ ಸ್ಫೂರ್ತಿ, ನಿಮ್ಮ ಚಳುವಳಿ ಒಂದು ಹೋರಾಟದ ಸಂಕೇತ.. ನಿಮ್ಮ ಹೋರಾಟ ಕಾರ್ಮಿಕರ ಒಗ್ಗಟ್ಟಿನ ಸಂಕೇತ. ಭಾರತದ ಮಹಿಳೆಯರ ಹೋರಾಟಕ್ಕೂ ಕೂಡ ಒಂದು ಸ್ಫೂರ್ತಿ ಎಂದು ಅಂಗನವಾಡ ನೌಕರರರ ರ್‍ಯಾಲಿಯನ್ನು ನೋಡಿ ತಾವೇ ಸ್ಫೂರ್ತಿಗೊಂಡವರಂತೆ ನುಡಿದವರು ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯೆ ಮಾಜಿ ಸಂಸದೆ ಕಾಂ. ಬೃಂದಾ ಕಾರಟ್, ದೇಶದ ಮಹಿಳಾ ಚಳುವಳಿಯ ಹಿರಿಯ ನಾಯಕಿ.

ಕಾಂಗ್ರೆಸ್–ಬಿಜೆಪಿಗಳು ಒಂದೇ ನಕಲಿ ನಾಣ್ಯದ ಎರಡು ಮುಖಗಳು

ಸದ್ಯ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಇದೆ. ಹಿಂದೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇತ್ತು. ಯುಪಿಎ– ಬಿಜೆಪಿ, ಅಕ್ಷರಗಳು ಮಾತ್ರವೇ ಬೇರೆ ಬೇರೆ...

ಈ ಪಕ್ಷಗಳ ಮುಖಂಡರ ಮುಖಗಳು ಮಾತ್ರ ಬೇರೆ ಬೇರೆ... ಆದರೆ ಶ್ರೀಮಂತರ ಕಾಲಿಗೆರಗಿ ಸಾಷ್ಟಾಂಗ ನಮಸ್ಕಾರ ಮಾಡುವುದರಲ್ಲಿ ಅವರೆಲ್ಲ ಒಂದೇ.... ಅವರಿಗೆ ಕಾರ್ಮಿಕರ–ಜನರ ಹಿತಾಸಕ್ತಿಗಳು ಬೇಕಿಲ್ಲ... ಅವರು ಭೂಗಳ್ಳರ ಭೂ ಮಾಫಿಯಾದ ಪರವಾದ ನೀತಿಗಳಿಗಾಗಿ ಕೆಲಸ ಮಾಡುತ್ತಿದ್ದಾರೆ. ಎಂದು ಕಾಂ. ಬೃಂದಾ ಗುಡುಗಿದರು.

ಯುಪಿಎ ಮತ್ತು ಬಿಜೆಪಿಗಳು ಒಂದೇ ನಕಲಿ ನಾಣ್ಯದ ಎರಡು ಮುಖಗಳು ಎಂದ ಬೃಂದಾ, ಮುಂದುವರೆದು ಅವರು ಎಲ್ಲರನ್ನೂ ಒಳಗೊಳ್ಳುವಂತಹ ಅಭಿವೃದ್ಧಿ ಸಾಧಿಸುವ ಮಾತನಾಡುತ್ತಿದ್ದಾರೆ. ಆದರೆ ಅವರು ದೆಹಲಿಯಲ್ಲಿರಲಿ ಅಥವಾ ಬೆಂಗಳೂರಿನಲ್ಲಿರಲಿ ದೊಡ್ಡ ದೊಡ್ಡ ಬಂಡವಾಳಗಾರರ ಸಂಸ್ಥೆಗಳ ಪರವಾಗಿ ಅಷ್ಟೆ ಕೆಲಸ ಮಾಡುತ್ತಿದ್ದಾರೆ.

ಯಾವ ದೇಶವು ಮಹಿಳೆಯರ ಪಾತ್ರವನ್ನು ನಿರ್ಲಕ್ಷ್ಯ ಮಾಡಿ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯ ಇಲ್ಲ.

ಸರ್ಕಾರ ಅಭಿವೃದ್ಧಿ ಯೋಜನೆಗಳ ಯೋಜನೆಗಳ ಜಾರಿಗೆ ಯಾರನ್ನು ಅವಲಂಬಿಸಿದೆ? ಮನಮೋಹನ ಸಿಂಗ್, ರಾಜ್ಯದ ಮುಖ್ಯಮಂತ್ರಿ ಯಾರೇ ಇರಲಿ ಯೋಜನೆಗಳಿಗೆ ತಮ್ಮ ಸ್ವಂತದ ಹಣವನ್ನು ಕೊಡುವುದಿಲ್ಲ... ಅವರು ಕೊಡುವುದು ಸಾರ್ವಜನಿಕರ ಹಣ. ಅಂಗನವಾಡಿ.. ಬಿಸಿಯೂಟ, ಆಶಾ, ಬಿಸಿಯೂಟ ಎಲ್ಲವೂ ಕೂಡ ಮಹಿಳೆಯರ ಶ್ರಮದಿಂದ ನಡೆಯುತ್ತಿವೆ.

ಬಜೆಟ್‌ನಲ್ಲಿ ಶ್ರೀಮಂತರು, ಬಂಡವಾಳ ಗಾರರಿಗೆ 5 ಲಕ್ಷ ಕೋಟಿ ರೂಪಾಯಿಗಳ ರಿಯಾಯಿತಿ ನೀಡಿದ ಕೇಂದ್ರ ಸರ್ಕಾರ ಅಂಗನವಾಡಿ ನೌಕರರಿಗೆ ಸಂಬಳ ಕೇಳಿದರೆ.... ಹಣ ಇಲ್ಲ...ಎನ್ನುತ್ತದೆ. ಈ ಮಹಿಳೆಯರ ಕೆಲಸವನ್ನು 6 ಗಂಟೆಯಿಂದ 8 ಗಂಟೆಗೆ ಅಂದರೆ 2 ಗಂಟೆ ಹೆಚ್ಚಿಸಲಾಗಿದೆ. ಮಹಿಳೆಯರು 8 ಗಂಟೆ ಕೆಲಸ ಮಾಡಲು ಹೆದರುವುದಿಲ್ಲ. ಆದರೆ ಈ ಮಹಿಳೆಯರಿಗೆ ತಮ್ಮ ಶ್ರಮಕ್ಕೆ ತಕ್ಕಂತೆ ಪೂರ್ಣ ಸಂಬಳ ಬೇಕು. ಅದನ್ನು ಕೊಡಿ... ಹೀಗೆ ಬೃಂದಾ ಕಾರಟ್ ತಮ್ಮದೇ ಶೈಲಿಯಲ್ಲಿ ಕೇಂದ್ರ ಯುಪಿಎ ಸರ್ಕಾರ ಹಾಗೂ ರಾಜ್ಯ ಜಿಜೆಪಿ ಸರ್ಕಾರಗಳ ಕಾರ್ಮಿಕ ದ್ರೋಹಿ–ಜನದ್ರೋಹಿ ಧೋರಣೆಗಳ ವಿರುದ್ಧ ಚಾಟಿ ಬೀಸಿದರು.



ಪಾರ್ಲಿಮೆಂಟರಿ ಸಮಿತಿ ಶಿಫಾರಸ್ಸಿಗೂ ಬೆಲೆ ಇಲ್ಲ

ಪಾರ್ಲಿಮೆಂಟಿನಲ್ಲಿ ನಾನು ಈ ಪ್ರಶ್ನೆ ಎತ್ತಿದೆ. ಚುನಾವಣೆ ಕೆಲಸ, ಮಂತ್ರಿಗಳು ಬಂದಾಗ, ಸಮೀಕ್ಷೆ ಕೆಲಸ ಮುಂತಾಗಿ 36 ರೀತಿಯ ಕೆಲಸಗಳನ್ನು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮಾಡುತ್ತಾರೆ. ಅವರನ್ನು ಸರ್ಕಾರಿ ನೌಕರರು ಅಂತ ಪರಿಗಣಿಸಿ. ಅವರಿಗೆ ಗೌರವವಧನ ಬೇಡ. ನಿಮ್ಮ ಗೌರವಧನ ನೀವೇ ಇಟ್ಟುಕೊಳ್ಳಿ, ಕನಿಷ್ಟ ವೇತನ 10,000 ಕೊಡಿ ಎಂದು ಕೇಳಿದೆ..

ನಿಮ್ಮ ಹೋರಾಟದ ಒತ್ತಡದಿಂದ ಅಂಗನವಾಡಿ ನೌಕರರ ಸಮಸ್ಯೆಗಳ ಬಗೆಗೆ ಪಾರ್ಲಿಮೆಂಟಿನ ಮಹಿಳಾ ಸಬಲೀಕರಣ ಸಮಿತಿಯಲ್ಲಿ ಚರ್ಚೆ ನಡೆಯಿತು. ಅಂಗನವಾಡಿ ನೌಕರರ ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ಹೇಮಲತಾ ಅವರು ಕೂಡ ಚರ್ಚೆಗೆ ಬಂದಿದ್ದರು. ಆ ಸಮಿತಿಯು 20, 30 ವರ್ಷ ಕೆಲಸ ಮಾಡಿದರೂ ಅಂಗನವಾಡಿ ನೌಕರರಿಗೆ ಪಿಂಚಣಿ ಇಲ್ಲ. ಅವರಿಗೆ ಪಿಂಚಣಿ ಕೊಡಿ, ಬೋನಸ್ ಕೊಡಿ, ಸರ್ಕಾರಿ ನೌಕರರು ಅಂತ ಪರಿಗಣಿಸಿ ಎಂದು ಶಿಫಾರಸ್ಸು ಮಾಡಿತು. ಅದೇನು ಸಿಪಿಐ(ಎಂ) ಪಕ್ಷದ ಸಮಿತಿಯಲ್ಲ. ಪಾರ್ಲಿಮೆಂಟರಿ ಸಮಿತಿ. ಸರ್ಕಾರ ಈ ಸಮಿತಿ ಶಿಫಾರಸ್ಸಿಗೆ ಬೆಲೆ ಕೊಡಲಿಲ್ಲ.

ನಾವು ಪಾರ್ಲಿಮೆಂಟಿನಲ್ಲಿ ಈ ಪ್ರಶ್ನೆ ಎತ್ತಿದಾಗ ಪಾರ್ಲಿಮೆಂಟಿನಲ್ಲಿ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಪಕ್ಷ ಬೆಂಬಲಕ್ಕೆ ಬರಲಿಲ್ಲ. ಅವರು ಬಾಯಿಗೆ ಬಟ್ಟೆ ಕಟ್ಟಿಕೊಂಡಿದ್ದರು. ಧೋರಣೆ, ನೀತಿಗಳ ವಿಷಯದಲ್ಲಿ ಕಾಂಗ್ರೆಸ್–ಬಿಜೆಪಿ ಎರಡೂ ಒಂದೇ ಆಗಿದ್ದಾರೆ.

ಈಗ ವರ್ಷಕ್ಕೆ 6 ಗ್ಯಾಸ್ ಸಿಲಿಂಡರ್ ಮಾತ್ರ ಎಂದು ಹೇಳುತ್ತಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ಅಡಿಗೆ ಮಾಡಲು ಸಾಧ್ಯವಾಗುತ್ತಿಲ್ಲ. ಅಂಗನವಾಡಿ ಕೇಂದ್ರಕ್ಕೆ ತಿಂಗಳಿಗೆ ಸೌದೆ ಖರ್ಚಿಗೆಂದು 100 ರೂಪಾಯಇ ಕೊಡುತ್ತಾರೆ. ಅದರಲ್ಲಿ ಎರಡು ಸಾರಿ ಅಡುಗೆ ಮಾಡಿ ಬಡಿಸುವುದು ಹೇಗೆ ? ಎಂದು ನೌಕರರ ಸಮಸ್ಯೆಯನ್ನು ಬೃಂದಾ ಬಿಡಿಸಿಟ್ಟರು.

ನೌಕರರು ತಮ್ಮ ಕೈಯಿಂದ ಹಣ ಖರ್ಚು

ಪುಟ 12 ಕ್ಕೆ

ಓಟು ಕೇಳಲು ಬಂದಾಗ ಪಟ್ಟು ಹಿಡಿದು ಕೇಳಿ–ಎಸ್.ವರಲಕ್ಷ್ಮಿ

ಕರ್ನಾಟಕ ರಾಜ್ಯದಲ್ಲಿ ಅಂಗನವಾಡಿ ನೌಕರರರು ಹಲವು ಸಮರಧೀರ ಹೋರಾಟಗಳನ್ನು ನಡೆಸುತ್ತಾ ಬಂದಿದ್ದೇವೆ. ಪೋಲಿಸರ ಏಟು ತಿಂದಿದ್ದೇವೆ, ಜೈಲು ವಾಸ ಅನುಭವಿಸಿದ್ದೇವೆ. ಇತ್ತೀಚೆಗೆ ನಾಲ್ಕು ರಾತ್ರಿಗಳ ಕಾಲ ಸಾವಿರಾರು ಜನ ಅಂಗನವಾಡಿ ಕಾರ್ಯಕರ್ತೆಯರು ಸಹಾಯಕಿಯರು ಬೆಂಗಳೂರಿನಲ್ಲಿ ನಡು ಬೀದಿಯಲ್ಲಿ ಮಲಗಿ ಹೋರಾಟ ನಡೆಸುತ್ತಿದ್ದಾಗ 224 ಶಾಸಕರಲ್ಲಿ ಯಾವ ಶಾಸಕರೂ, ಬಿಜೆಪಿ ಸರ್ಕಾರದ ಮಂತ್ರಿಗಳು ಅತ್ತ ತಲೆಹಾಕಲಿಲ್ಲ ಎಂದ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಆಳುವ ಜನರ ಕಾರ್ಮಿಕ ದ್ರೋಹಿ, ವಂಚಕತನವನ್ನು ಬಯಲಿಗೆಳೆದರು.

ಮುಂದುವರಿದು ಮಾತನಾಡಿದ ಅವರು ಮುಂದಿನ ಏಪ್ರಿಲ್ ಹೊತ್ತಿಗೆ ವಿಧಾನ ಸಭಾ ಚುನಾವಣೆಗಳು ಬರುತ್ತವೆ. ನಾವು ಹೋರಾಟದಲ್ಲಿದ್ದಾಗ, ಕಷ್ಟ ಕಾಲದಲ್ಲಿ ಇದ್ದಾಗ ಬರದೇ ಇದ್ದವರು ಆಗ ಸೀರೆ ಕೊಡುತ್ತೇವೆ.. ಬಳೆ ಕೊಡುತ್ತೇವೆ ಎಂದು ಬರುತ್ತಾರೆ. ಅವರು ಯಾಕೆ ಹಾಗೆ ಮಾಡುತ್ತಾರೆಂಬುದು ನಮಗೆ ಸರಿಯಾಗಿ ಅರ್ಥವಾಗಬೇಕು. ಅಂಗನವಾಡಿ ನೌಕರರ ಕಷ್ಟಗಳನ್ನು ಕೇಳದ ಬಗೆಗೆ ಅವರನ್ನು ಬಿಡದೆ ಪಟ್ಟು ಹಿಡಿದು ಪ್ರಶ್ನೆ ಮಾಡಬೇಕು. ಅಂಗನವಾಡಿ ನೌಕರರಿಗೆ ಕನಿಷ್ಟ ವೇತನ 10,000 ಇರಬೇಕು ಎಂಬುದನ್ನು ಬೆಂಬಲಿಸುವರಿಗೆ ಮಾತ್ರ ನಾವು ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮನೆ ನಿವೇಶನಗಳಿಗಾಗಿ – ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ
40 ಸಾವಿರ ಅರ್ಜಿದಾರರ ಬಂಧನ–ಬಿಡುಗಡೆ

ಸರ್ಕಾರ ಭರವಸೆಗಳ ಮೇಲೆ ಭರವಸೆ ನೀಡುತ್ತಿದೆಯೇ ಹೊರತು ನಿವೇಶನ, ಭೂಮಿ ನೀಡದೇ ನಿರ್ಲಕ್ಷಿಸುತ್ತಿದೆ. ಬೇಡಿಕೆಗಾಗಿ ಹೋರಾಟಕ್ಕೆ ಮುಂದಾದಾಗ ಬಂಧಿಸಿದೆ ನೂರಾರು ಜನರನ್ನು ಜೈಲಿಗೂ ತಳ್ಳಿದೆ. ಇದರ ವಿರುದ್ಧ ನಡೆದ ರಾಜ್ಯವ್ಯಾಪ್ತಿ ಚಳುವಳಿಯ ವರದಿ ಇಲ್ಲಿದೆ.


ದ. ಕನ್ನಡ

ಸ್ವಂತ ಮನೆ ನಿವೇಶನ ಇಲ್ಲದವರಿಗೆ ನಿವೇಶಗಳನ್ನು ವಿತರಣೆ ಮಾಡಬೇಕು, ಸರ್ಕಾರಿ ಜಾಗಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ಬಡವರಿಗೆ ಹಕ್ಕುಪತ್ರ ನೀಡಬೇಕು, ಕಂದಾಯ ಭೂಮಿ ಹಾಗೂ ಅರಣ್ಯ ಇಲಾಖೆಗೆ ಸೇರಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಹಲವಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಬಡ ರೈತ ಮತ್ತು ಭೂರಹಿತ ಕೃಷಿ ಕೂಲಿಕಾರರಿಗೆ ಸಾಗುವಳಿ ಚೀಟಿ ಕೊಡಬೇಕು ಎಂದು ಅಗ್ರಹಿಸಿ ಇದೇ ನವೆಂಬರ್ 5ರಂದು ಸರ್ಕಾರಿ ಕಛೇರಿಗಳಿಗೆ ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾಗಲು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ನೀಡಿದ ಕರೆಗೆ ರಾಜ್ಯಾದ್ಯಂತ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಲಭ್ಯ ಮಾಹಿತಿಗಳ ಪ್ರಕಾರ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ನಗರ ಬೆಂಗಳೂರು ಗ್ರಾಮಂತರ, ರಾಮನಗರ, ಮಂಡ್ಯ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಧಾರವಾಡ, ಹಾವೇರಿ, ಗದಗ, ಬೆಳಗಾವಿ, ಬಿಜಾಪುರ, ಕೊಪ್ಪಳ, ರಾಯಚೂರು, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಯಾದಗಿರಿ, ಮತ್ತು ಬೀದರ್, (24) ಜಿಲ್ಲೆಗಳ ಒಟ್ಟು 73 ತಾಲೂಕು ಕೇಂದ್ರಗಳಲ್ಲಿ ನಡೆದ ಪಿಕೆಟಿಂಗ್ ಚಳುವಳಿಯಲ್ಲಿ ಸುಮಾರು 40 ಸಾವಿರ ಅರ್ಜಿದಾರರು ಭಾಗವಹಿಸಿ ಬಂಧನಕ್ಕೆ ಒಳಗಾಗಿದ್ದಾರೆ. ಇವರಲ್ಲಿ 60% ಕ್ಕೂ ಹೆಚ್ಚು ಮಹಿಳೆಯರು, ರಾಯಚೂರ್ ಜಿಲ್ಲೆ ದೇವದುರ್ಗದಲ್ಲಿ ಬಂಧನಕ್ಕೆ ಒಳಗಾದ 500 ಪ್ರತಿಭಟನಾಕಾರರಲ್ಲಿ 30 ಮಂದಿಯನ್ನು ಮತ್ತು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿಯಲ್ಲಿ ಬಂಧನಕ್ಕೆ ಒಳಗಾದವರ ಪೈಕಿ 47 ಮಂದಿಯನ್ನು ಅವರ ವಿರುದ್ಧ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಲಾಗಿದೆ. ಹಗರಿಬೊಮ್ಮನಹಳ್ಳಿಯಲ್ಲಿ ಜೈಲಿಗೆ ಹೋದವರಲ್ಲಿ ಕಾಮ್ರೆಡ್ ಮಾಳಮ್ಮ ನೇತೃತ್ವದಲ್ಲಿ 24 ಜನ ದೇವದಾಸಿ ಮಹಿಳೆಯರಿದ್ದಾರೆ.

ಬಂಧಿತರ ಬೇಷರತ್ ಬಿಡುಗಡೆಗೆ ಆಗ್ರಹ:
ಮನೆ ಮತ್ತು ಭೂಮಿ ಅಂತಹ ಮೂಲಭೂತ ಬೇಡಿಕೆಗಳಿಗಾಗಿ ಶಾಂತಿಯುತವಾಗಿ ಹೋರಾಟ ನಡೆಸಿದವರನ್ನು ಪೋಲಿಸರು ಬಂಧಿಸಿ ಅವರ ವಿರುದ್ಧ ಸುಳ್ಳು ಕೇಸ್ ದಾಖಲು ಮಾಡಿ ಜೈಲಿಗೆ ಕಳುಹಿಸಿರುವ ಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘಗಳ ರಾಜ್ಯ ಸಮಿತಿಗಳು ತೀವ್ರವಾಗಿ ಖಂಡಿಸಿವೆ. ರಾಜ್ಯ ಸರ್ಕಾರ ಕೂಡಲೇ ಮಧ್ಯ ಪ್ರವೇಶಮಾಡಿ ಜೈಲಿನಲ್ಲಿರುವ ಮಹಿಳಾ ಮತ್ತು ಪುರುಷ ಹೋರಾಟಗಾರರನ್ನು ಕೂಡಲೇ ಯಾವುದೇ ಷರತ್ ವಿಧಿಸದೆ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿರುವ ಸಂಘಗಳು ರಾಜ್ಯಾದ್ಯಂತ ನಡೆದ ಈ ಹೋರಾಟದಲ್ಲಿ ಎತ್ತಲಾದ ಬೇಡಿಕೆಗಳನ್ನು ಇತ್ಯರ್ಥಪಡಿಸಲು ಕೂಡಲೇ ಮುಂದಾಗಬೇಕು ಎಂದು ಆಗ್ರಹಿಸಿವೆ. ನಿವೇಶನರಹಿತರಿಗೆ ನಿವೇಶನಗಳನ್ನು ವಿತರಿಸುವುದು, ಸರ್ಕಾರಿ ಜಾಗಗಳಲ್ಲಿ ಇರುವ ಬಡವರ ಮನೆಗಳನ್ನು ಸಕ್ರಮಗೊಳಿಸುವುದು ಮತ್ತು ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರಗಳನ್ನು ನೀಡುವ ಕುರಿತು ಸಂಪುಟ ಸಭೆಯಲ್ಲಿ ತುರ್ತಾಗಿ ಚರ್ಚಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ಮಾಡುವ ಕ್ರಮವನ್ನು ಬೆಳಗಾವಿ ಸುವರ್ಣ







ವಿಧಾನಸೌಧದಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ಕೈಗೊಳ್ಳಬೇಕೆಂದು ಸಂಘಗಳು ಒತ್ತಾಯಿಸಿದ್ದು, ಇದರ ಪೂರ್ವಭಾವಿಯಾಗಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಎರಡೂ ಸಂಘಗಳ ಮುಖಂಡರನ್ನು ಚರ್ಚೆಗೆ ಆಹ್ವಾನಿಸಬೇಕೆಂದು ಸಂಘಗಳು ಆಗ್ರಹಿಸಿವೆ. ಮನೆ ನಿವೇಶನ ಮತ್ತು ಭೂಮಿಯ ವಿಷಯದಲ್ಲಿ ಇದು ರಾಜ್ಯದ ಬಡವರು ಸರ್ಕಾರಕ್ಕೆ ನೀಡಿದ ಅಂತಿಮ ಎಚ್ಚರಿಕೆ. ಸರ್ಕಾರ ಇದನ್ನು ಕಡೆಗಣಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ರಾಜ್ಯದಲ್ಲಿ ಬಡವರಿಗೆ ಮನೆ ಇಲ್ಲದೆ ಬದುಕುವುದು ಅಸಾಧ್ಯವಾಗುತ್ತಿದೆ. ಹಾಗೆಯೇ ಭೂಮಿಗಾಗಿ ಅವರ ಹಸಿವು ಅಸಹನೀಯ ವಾಗುತ್ತಿದೆ. ಮುಂದಿನ ಚುನಾವಣೆಯಲ್ಲಿ ಇದು ಚರ್ಚೆಯ ಪ್ರಮುಖ ವಸ್ತುವಾಗಲಿದೆ. ರಾಜಕೀಯ ಪಕ್ಷಗಳ ಚುನಾವಣಾ ಭವಿಷ್ಯವನ್ನು ನಿರ್ಧರಿಸುವ ಪ್ರಶ್ನೆಯಾಗಲಿದೆ. ಪತ್ರಿಕೆಯು ಮುದ್ರಣಕ್ಕೆ ಹೋಗುವ ವೇಳೆಗೆ ದೊರೆತ ಹೋರಾಟದ ಸ್ಥಳಿಯ ಕೆಲವು ವರದಿಗಳು ಈ ಕೆಳಗಿನಂತಿವೆ.





ಉಡುಪಿ:

ಉಡುಪಿ ಸರ್ವಿಸ್ ಬಸ್‌ನಿಲ್ದಾಣದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆಯು ಕೆ.ಎಂ.ಮಾರ್ಗ, ಕೋರ್ಟ್ ರಸ್ತೆಯಲ್ಲಿ ಸಾಗಿ ಪ್ರತಿಭಟನಾಕಾರರು ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿ ರಸ್ತೆಯಲ್ಲೇ ಧರಣಿ ನಡೆಸಿದರು. ಒಂದುವರೆ ಸಾವಿರ ಮೀರಿದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ರಾಜ್ಯದಲ್ಲಿ ಒಟ್ಟು 16 ಲಕ್ಷ ನಿವೇಶನ ರಹಿತರು ಹಾಗೂ 14 ಲಕ್ಷ ವಸತಿ ರಹಿತರಿದ್ದಾರೆ. ಇವರಿಗೆಲ್ಲ ನೀಡುವಷ್ಟು ಸರಕಾರಿ ಭೂಮಿ ರಾಜ್ಯದಲ್ಲಿ ಇದೆ. ಆದರೆ

ಪುಟ 10 ಕ್ಕೆ



40 ಸಾವಿರ ಅರ್ಜಿದಾರರ ಬಂಧನ.....

ಪುಟ 9 ರಿಂದ

ಅವುಗಳೆಲ್ಲ ಶ್ರೀಮಂತರ, ಕೈಗಾರಿಕೋದ್ಯಮಿಗಳ, ಜಮೀನ್ದಾರರ ಅಧೀನದಲ್ಲಿವೆ. ಅವುಗಳನ್ನು ಸರಕಾರ ಕೂಡಲೇ ವಶಪಡಿಸಿಕೊಂಡು ನಿವೇಶನರಹಿತರಿಗೆ ಹಂಚಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿ ಮುಖಂಡರಾದ ವೆಂಕಟೇಶ್ ಕೋಣಿ, ದೋಗು ಸುವರ್ಣ, ವಿಠಲ ಪೂಜಾರಿ, ರಾಜೀವ ಪಡುಕೋಣೆ, ವಿಶ್ವನಾಥ ರೈ, ಕಾಪು ಲಕ್ಷ್ಮಣ ಮತ್ತಿತರರು ಭಾಗವಹಿಸಿದ್ದರು.

ಮಂಗಳೂರು:

ಕರ್ನಾಟಕ ಪ್ರಾಂತ ರೈತ ಸಂಘದ ಉಳ್ಳಾಲ, ಗುರುಪುರ ಮತ್ತು ಮೂಡಬಿದ್ರಿ ವಲಯ ಸಮಿತಿಗಳ ನೇತೃತ್ವದಲ್ಲಿ ಮಂಗಳೂರು ತಾಲೂಕು ಪಂಚಾಯತ್ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಐದು ನೂರರಷ್ಟು ನಿವೇಶನ ರಹಿತರು ಭಾಗವಹಿಸಿ ಬಂಧನಕ್ಕೊಳಗಾಗಿ ಬಳಿಕ ಬಿಡುಗಡೆಗೊಂಡರು.

65 ವರ್ಷಗಳ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಬಡವರಿಗೆ ಸ್ವಂತ ನಿವೇಶನ, ಅಲ್ಲೊಂದು ಪುಟ್ಟ ಮನೆ, ಹೊಟ್ಟೆ ತುಂಬಲು ಆಹಾರ, ಆರೋಗ್ಯದ ನಿರೀಕ್ಷೆಗಳಿದ್ದವು. ಬಡವರಿಗೆ ಕನಿಷ್ಠ ಜಾಗ ಹಾಗೂ ಮನೆಗಳನ್ನು ಒದಗಿಸದ ಸರಕಾರಗಳನ್ನು ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಹಿರಿಯ ರೈತ ಕಾರ್ಮಿಕ ಮುಖಂಡ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೆ.ಆರ್.ಶ್ರೀಯಾನ್ ಕಟುವಾಗಿ ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಉಪಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ವಾಸುದೇವ ಉಚ್ಚಿಲ್, ನೋಣಯ್ಯ ಗೌಡ, ನಿವೇಶನ ಹೋರಾಟ ಸಮಿತಿಯ ಉಳ್ಳಾಲ ವಲಯಾಧ್ಯಕ್ಷರಾದ ಅಶೋಕ್ ಶೆಟ್ಟಿ, ಕಾರ್ಮಿಕ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸದಾಶಿವದಾಸ್, ಹೋರಾಟ ಸಮಿತಿ ಕಾರ್ಮಿಕರಾದ ವಿಶ್ವನಾಥ ತೇವುಲ, ಜಯಂತ, ನಾರಾಯಣ ತಲಪಾಡಿ, ಕಿಶೋರ್ ಪೊರ್ಕೋಡಿ, ಗಿರಿಜ ಮೂಡಬಿದ್ರೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಐದು ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿ ಬಂಧನಕ್ಕೊಳಗಾದರು.

ಬಂಟ್ವಾಳ :

ಬಿ.ಸಿ.ರೋಡ್ ಮುಖ್ಯ ವೃತ್ತದಿಂದ ಸಾಗಿ ಬಂದ ಪ್ರತಿಭಟನಾಕಾರರು ಬಂಟ್ವಾಳ ತಾಲೂಕು ಕಚೇರಿಯ ಮುಂಭಾಗದಲ್ಲಿ ಸಮಾವೇಶ ಗೊಂಡರು. ಬಳಿಕ ತಾಲೂಕು ಕಚೇರಿಯ ಆವರಣಕ್ಕೆ ನುಗ್ಗಲೆತ್ನಿಸಿದ ಪ್ರತಿಭಟನಾಕಾರರನ್ನು ಪೋಲೀಸರು ಬಂಧಿಸಿ ಬಿಡುಗಡೆ ಗೊಳಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಬಂಟ್ವಾಳ ತಾಲೂಕು ಅಧ್ಯಕ್ಷ ಎ.ರಾಮಣ್ಣ ವಿಟ್ಲ, ಕಾರ್ಯದರ್ಶಿ ಬಿ.ನಾರಾಯಣ ಮಾತನಾಡಿದರು. ಸಂಘದ ಉಪಾಧ್ಯಕ್ಷ ಶೀನ ಬಂಗೇರ, ಕಾರ್ಮಿಕ ಸಂಘಟನೆಯ ಮುಖಂಡರಾದ ವಸಂತ ಆಚಾರಿ, ವಾಸುಗಟ್ಟಿ, ಸಂಜೀವ ಬಂಗೇರ, ವೈ.ಕೆ.ನಾರಾಯಣ, ಜಾನಕಿ ಶಂಭೂರು ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮುನ್ನೂರು ಮಂದಿ ಈ ಪ್ರತಿಭಟನೆಯಲ್ಲಿ ಭಾಗವಹಸಿ ಬಂಧನಕ್ಕೊಳಗಾದರು.

ಪುತ್ತೂರು:

ಪುತ್ತೂರಿನಲ್ಲಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 80 ಮಂದಿ ನಿವೇಶನ ರಹಿತರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು. ಬಳಿಕ ಅವರನ್ನು ಬಿಡುಗಡೆಗೊಳಿಸಲಾಯಿತು.

ಸಿಪಿಐ(ಎಂ) ಪುತ್ತೂರು ತಾಲೂಕು ಕಾರ್ಯದರ್ಶಿ ಪಿ.ಕೆ.ಸತೀಶನ್ ಮತ್ತು ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಶೇಖರ ಲಾಯಿಲ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಭಟನೆಗೆ ನೇತೃತ್ವ ನೀಡಿದರು. ರೈತ ಸಂಘದ ಕಾರ್ಯಕರ್ತರಾದ ಕೇಶವ ಕುಮಾರ್, ವಿಜಯ, ಜಯರಾಮ ಮಯ್ಯ, ಯೋಗೀಶ್, ಬೇಬಿ, ಸುಹಾಸಿನಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಬೆಳ್ತಂಗಡಿ:

ಬೆಳ್ತಂಗಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ಬಿ.ಎಂ.ಭಟ್, ಎಸ್.ಎಂ.ಶಿವಕುಮಾರ್, ರೈತ ಮುಖಂಡರಾದ ನೀಲೇಶ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಮೂರುರಸ್ತೆಯಿಂದ ಬಸ್‌ಸ್ಟೇಂಡಿನಿಂದಲಾಗಿ ತಾಲೂಕು ಕಚೇರಿಗೆ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಾಕಾರರು ತಾಲೂಕು ಕಚೇರಿಗೆ ಮುತ್ತಿಗೆ ನಡೆಸಿದಾಗ ಪೋಲೀಸರು ಅವರನ್ನು ಬಂಧಿಸಿ, ಬಳಿಕ ಬಿಡುಗಡೆಗೊಳಿಸಲಾಯಿತು.

ಪ್ರತಿಭಟನೆಯಲ್ಲಿ ಕೃಷಿಕೂಲಿಕಾರ ಸಂಘದ ಮುಖಂಡ ಅನಿಲ್, ಆದಿವಾಸಿ ಸಮನ್ವಯ ಸಮಿತಿಯ ವಸಂತ ನಡ ಹಾಗೂ ತಾಲೂಕು ರೈತ ಸಂಘದ ಮುಖಂಡರು ಉಪಸ್ಥಿತರಿದ್ದರು. ಸುಮಾರು ಇನ್ನೂರೈವತ್ತು ಜನ ಬಂಧನಕ್ಕೆ ಒಳಗಾಗಿದ್ದಾರೆ.

ಕೋಲಾರ:

ತಹಶೀಲ್ದಾರ್ ಕಛೇರಿ ಪಿಕೆಟಿಂಗ್ ಮತ್ತು ಜೈಲ್ ಭರೋ ಕಾರ್ಯಕ್ರಮವು ಕೋಲಾರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಉತ್ಸಾಹದಿಂದ ನಡೆದಿದೆ.

ಕೋಲಾರ ತಾಲ್ಲೂಕಿನಲ್ಲಿ 500ಕ್ಕೂ ಅಧಿಕ ಮಂದಿಯ ರ್‍ಯಾಲಿಯು ಎ.ಸಿ. ಕಛೇರಿ ಸಮೀಪದಿಂದ ಮೆರವಣಿಗೆ ಮೂಲಕ ಹೋಗಿ ತಹಶೀಲ್ದಾರ್ ಕಛೇರಿ ತಲುಪಲಾಯಿತು. ತಹಶೀಲ್ದಾರ್ ಕಛೇರಿ ಮುಂಭಾಗದಲ್ಲಿ ಸೇರಿದ್ದ ಜನಸ್ತೋಮವನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ ರಾಜ್ಯ ಸರ್ಕಾರ ಬಡವರ ಪರವಾದ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡದೇ ಸ್ವಾರ್ಥ ರಾಜಕೀಯದಲ್ಲಿ ಮುಳುಗಿದೆ. ರಾಜ್ಯದಲ್ಲಿ 20 ಲಕ್ಷ ಬಗರ್ ಹುಕುಂ ಅರ್ಜಿಗಳು ಬಾಕಿ ಇವೆ. ಅಲ್ಲದೇ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಲಕ್ಷಾಂತರ ಮಂದಿ ರೈತರಿಗೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿಲ್ಲ. ಇದರ ಜೊತೆಗೆ ಕೃಷಿ ಕೂಲಿಕಾರ್ಮಿಕರು, ಸಣ್ಣ ರೈತರು, ಕಾರ್ಮಿಕರು ಮನೆ ನಿವೇಶನ ಇಲ್ಲದ ಪರದಾಡುತ್ತಿದ್ದಾರೆ. ಈ ಬಗ್ಗೆ ಪ್ರಾಂತ ರೈತ ಸಂಘ ಕಳೆದ ಮೂರು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ, ಸರ್ಕಾರ ಈ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಈ ಬಗ್ಗೆ ಎಲ್ಲಾ ಬಡವರು ಸಂಘಟಿತರಾಗಿ ಹೋರಾಟ ಮಾಡಬೇಕಾಗಿದೆ ಎಂದು ತಿಳಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಜನವಾದಿ ಮಹಿಳಾ ಸಂಘಟನೆಯ ವಿ.ಗೀತಾ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ವಿಜಯಕೃಷ್ಣ, ಸಾಮಾಜಿಕ ಜನಾಂದೋಲನ ಸಂಘಟನೆಯ ರಾಜ್ಯ ಸಂಚಾಲಕ ಅಯ್ಯಪ್ಪಲ್ಲಿ ನಾರಾಯಣಸ್ವಾಮಿ ಮಾತನಾಡಿದರು.

ಪ್ರತಿಭಟನೆಯ ವಿಷಯವನ್ನು ಮುಂಚಿತವಾಗಿ ತಿಳಿಸಿದ್ದರೂ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಲಭ್ಯವಿರಲಿಲ್ಲ. ಇದರಿಂದ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ತಹಶೀಲ್ದಾರ್ ಕಛೇರಿಗೆ ನುಗ್ಗಲು ಪ್ರಯತ್ನಿಸಿದರು. ಈ ಹಂತದಲ್ಲಿ ಪೊಲೀಸರಿಗೂ ಮತ್ತು ಪ್ರತಿಭಟನಾಕಾರರ ನಡುವೆ ತಳ್ಳಾಟಗಳು ನಡೆಯಿತು. ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದ ಪೊಲೀಸರು 200 ಕ್ಕೂ ಅಧಿಕ ಮಂದಿಯನ್ನು ಬಂಧಿಸಿ ಗಲ್‌ಪೇಟೆ ಪೊಲೀಸ್ ಠಾಣೆಗೆ ಕರೆದೊಯ್ದರು. ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಇಲ್ಲವೇ ನಮ್ಮನ್ನು ಜೈಲಿಗೆ ಕಳುಹಿಸುವಂತೆ ಪ್ರತಿಭಟನಾಕಾರರು ಪೊಲೀಸ್ ಠಾಣೆ ಮುಂದೆ ಧರಣಿ ಕೂತರು. ಕೆಲ ಸಮಯ ಪೊಲೀಸ್ ಠಾಣೆಗೂ ಬೀಗ ಹಾಕಿ ಪ್ರತಿಭಟನೆ ನಡೆಸಲಾಯಿತು. ಸಂಜೆ 7 ಗಂಟೆಯ ಸಮಯ ದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಸ್ಥಳಕ್ಕೆ ಬಂದು ನಾಳೆ ತಹಶೀಲ್ದಾರ್ ಮತ್ತು ತಾ.ಪಂ.ರವರ ಜೊತೆಗೆ ಸಭೆ ಏರ್ಪಡಿಸುವು ದಾಗಿ ಹೇಳಿದರು. ನಂತರ ಪ್ರತಿಭಟನೆಯನ್ನು ಬಿಡಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಕೆಪಿಆರ್‌ಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಮುಖಂಡರಾದ ಕೃಷ್ಣೇಗೌಡ, ಗಂಗಮ್ಮ, ಬೀರಮಾನಹಳ್ಳಿ ರಮೇಶ್, ಎನ್.ಎನ್.ಶ್ರೀರಾಮ್, ವಿ.ನಾರಾಯಣರೆಡ್ಡಿ, ಕುಂಬಾರಹಳ್ಳಿ ನಾರಾಯಣಸ್ವಾಮಿ ಮತ್ತಿತರರು ವಹಿಸಿದ್ದರು.

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಪ್ರವಾಸಿ ಮಂದಿರದಿಂದ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ತಹಶೀಲ್ದಾರ್ ಕಛೇರಿ ತಲುಪಿದರು. ಕೆಪಿಆರ್‌ಎಸ್ ಜಿಲ್ಲಾಧ್ಯ ಪಿ.ಆರ್.ಸೂರ್ಯನಾರಾಯಣ ಮಾತನಾಡಿದರು ನಂತರ ಪ್ರತಿಭಟನಾಕಾರರು ತಹಶೀಲ್ದಾ ಕಛೇರಿ ನುಗ್ಗಲು ಪ್ರಯತ್ನ ನಡೆಸಿದರು ಪೊಲೀಸರೊಂದಿಗೆ ತಳ್ಳಾಟ ನಡೆಯಿತು ಪಿ.ಆರ್.ಸೂರಿ, ನವೀನ್ ಮತ್ತು ಇತರ ಪ್ರಮುಖ ಮುಖಂಡರನ್ನು ಮೊದಲಿಗ ಬಂಧಿಸಿದ ಪೊಲೀಸರು ನಂತರ ಪ್ರತಿಭಟನಾಕಾರನ್ನು ಠಾಣೆಗೆ ಕರೆದೊಯ್ದರು ಇಲ್ಲಿಯೂ ಸಹ ಸಮಸ್ಯೆಯನ್ನು ಬಗೆಹರಿಸಬೇಕು ಇಲ್ಲವೇ ನಮ್ಮನ್ನು ಜೈಲಿಗೆ ಕಳುಹಿಸುವಂತೆ ಪ್ರತಿಭಟನಾಕಾರರು ಪಟ್ಟು ಹಿಡಿದ ಠಾಣೆಯಲ್ಲಿಯೇ ಧರಣಿ ನಡೆಸಿದರು. ನವೆಂಬರ 6 ರಂದು ಅಧಿಕಾರಿಗಳೊಂದಿಗೆ ಸಭ ಏರ್ಪಡಿಸುವುದಾಗಿ ಹೇಳಿ ಪ್ರತಿಭಟನಾಕಾರರನು ಮನವೊಲಿಸಿ ಸಂಜೆ 7 ಗಂಟೆಯ ಸುಮಾರಿಗ ಬಿಡುಗಡೆ ಮಾಡಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಕೆಪಿಆರ್‌ಎಸ್‌ನ ಜಿಲ್ಲಾಧ್ಯ ಪಿ.ಆರ್.ಸೂರ್ಯ ನಾರಾಯಣ, ತಾಲ್ಲೂಕು ಅಧ್ಯ ವೀರಪ್ಪರೆಡ್ಡಿ, ಪಿ.ಆರ್.ನವೀನ್, ಆನಂದ ಮತ್ತಿತರರು ವಹಿಸಿದ್ದರು.

ಮಾಲೂರು ತಾಲ್ಲೂಕಿನಲ್ಲಿ ಡಿವೈಎಫ್ಐ ಮತ್ತು ರೈತ ಸಂಘದ ನೇತೃತ್ವದಲ್ಲಿ ಮತ್ತು ಬಂಗಾರಪೇಟೆ ತಾಲ್ಲೂಕಿನಲ್ಲಿ ಸಿಐಟಿಯು ಮತ್ತು ಜೆ.ಎಂ.ಎಸ್. ನೇತೃತ್ವದಲ್ಲಿ ಬಗರ್ ಹುಕುಂ ಸಾಗುವಳಿದಾರರು ಮತ್ತು ವಸತಿ ರಹಿತರನ್ನು ಸಂಘಟಿಸಿ ತಹಶೀಲ್ದಾರ್ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಅರ್ಜಿಗಳನ್ನು ಸಲ್ಲಿಸಲಾಯಿತು.

ಉತ್ತರ ಕನ್ನಡ: ಭೂಮಿ ಹೋರಾಟ ತೀವ್ರ

ಉತ್ತರ ಕನ್ನಡ ಜಿಲ್ಲೆಯ 9 ತಾಲೂಕುಗಳಲ್ಲಿ ನವೆಂಬರ್ 5 ರಂದು ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕಾಗಿ, ಮನೆ ನಿವೇಶನಕ್ಕಾಗಿ ಬಗುರ ಹುಕುಂ, ಸಾಗುವಳಿ ಜಮೀನು ಮಂಜೂರಿಗಾಗಿ ತೀವ್ರ ಹೋರಾಟ ನಡೆದು ಸಾವಿರಾರು ಜನರನ್ನು ಪೊಲೀಸರು ಬಂಧಿಸಿ ಬಿಡುಗಡೆಗೊಳಿಸಿದರು. ಕಾರವಾರ, ಅಂಕೋಲಾ ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ ಹಳಿಯಾಳ, ಮುಂಡಗೋಡ ಮತ್ತು ಜೋಯಿಡಾ ತಾಲೂಕ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ.

ಕಾರವಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ತಾಲೂಕ ರೈತ ಸಂಘದ ಅಧ್ಯಕ್ಷರಾದ ವಿಷ್ಣು ನಾಯ್ಕ, ಶ್ಯಾಮನಾಥ ನಾಯ್ಕ ನೇತೃತ್ವದಲ್ಲಿ ಸುಮಾರು 500 ಜನ ಪ್ರತಿಭಟನೆ ನಡೆಸಿದರು. ಅಂಕೋಲಾದಲ್ಲಿ ಸಾವಿರಕ್ಕು ಮೇಲ್ಪಟ್ಟು ಸೇರಿದ ಅರಣ್ಯ ಅತಿಕ್ರಮಣದಾರರು ತಹಶೀಲ್ದಾರ ಕಛೇರಿಗೆ ಮತ್ತಿಗೆ ಹಾಕಿ ಉಗ್ರವಾಗಿ ಪ್ರತಿಭಟಿಸಿ ದರು. ತಾಲೂಕ ಆಡಳಿತದ ಕೆಲಸ ಸ್ಥಗಿತ ಗೊಳಿಸಲು ಒತ್ತಾಯಿಸಿದಾಗ ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ತಾಲೂಕ ಸಮಿತಿ ಅಧ್ಯ ಗೌರೀಶ ನಾಯಕ, ಕಾರ್ಯದರ್ಶಿ ಗಿರೀಶ ಗೌಡ ರಮಾನಂದ ನಾಯಕ, ನಾಗರಾಜ ಹೆಗಡೆ ಮುಂತಾದವರು ನೇತೃತ್ವ ವಹಿಸಿದ್ದರು.

ಪುಟ 12

ಓಟು ಕೇಳುವ ಧೈರ್ಯ ಇಲ್ಲದವರು

ಬಿಜೆಪಿ ದರ್ಬಾರ್



ಆರ್. ರಾಮಕೃಷ್ಣ

ಓಟು ಕೇಳುವ ಧೈರ್ಯ ಇಲ್ಲದವರು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೇ ಮುಂದೂಡುವರು ಕರ್ನಾಟಕ ರಾಜ್ಯದಲ್ಲಿ ಏಳು ಮಹಾನಗರ ಪಾಲಿಕೆಗಳು ಸೇರಿದಂತೆ ಸುಮಾರು ಇನ್ನೂರಕ್ಕೂ ಹೆಚ್ಚು ನಗರ ಸಭೆ, ಪುರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಡಿಸೆಂಬರ್ ತಿಂಗಳಿನಲ್ಲಿ ನಡೆಯಬೇಕಾಗಿವೆ. ಅಂದರೆ ಈಗ ಅಲ್ಲಿರುವ ಚುನಾಯಿತ ಸಮಿತಿಗಳ ಅಧಿಕಾರಾವಧಿ ಮುಗಿಯಲಿದ್ದು ಆ ಜಾಗಕ್ಕೆ ಪ್ರಜಾಸತ್ತಾತ್ಮಕವಾಗಿ ಮತ್ತೆ ಚುನಾಯಿತ ಸಮಿತಿಗಳು ಅಧಿಕಾರ ವಹಿಸಿಕೊಂಡು ಜನರ ಅಗತ್ಯಗಳಿಗೆ ಸ್ಪಂದಿಸುವುದು ಸಾಧ್ಯವಾಗಬೇಕಿದೆ.

ಬಾಯಿ ಬಿಟ್ಟರೆ ಪ್ರಜಾಪ್ರಭುತ್ವ, ತುರ್ತು ಪರಿಸ್ಥಿತಿಯ ಕರಾಳತೆ ಬಗೆಗೆ ಮಾತನಾಡುವ ಘನಾಂಧಾರಿ ನೇತಾರರಿಂದಲೇ ತುಂಬಿರುವ ರಾಜ್ಯದ ಅಧಿಕಾರರೂಢ ಬಿಜೆಪಿ ಸರ್ಕಾರಕ್ಕೆ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಸುವ ಯಾವ ಉದ್ದೇಶವೂ ಇಲ್ಲ ಎಂಬುದು ಇದೀಗ ಸ್ಪಷ್ಟವಾಗಿದೆ.

ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದ ಸರ್ಕಾರದ ಈ ಧೋರಣೆ ವಿರುದ್ಧ ನ್ಯಾಯಾಲಯಕ್ಕೆ ಮೊರೆಹೋಗಲು ರಾಜ್ಯದ ಚುನಾವಣಾ ಆಯೋಗ ತೀರ್ಮಾನಕ್ಕೆ ಬಂದಿದೆ. ಚುನಾವಣಾ ಆಯೋಗವೇನೂ ಏಕಾಏಕಿ ಈ ತೀರ್ಮಾನಕ್ಕೆ ಬಂದಿಲ್ಲ. ನಗರ ಸ್ಥಳೀಯ ಸಂಸ್ಥೆಗಳ ಮೀಸಲಾತಿ ನಿಗದಿ ಪಡಿಸುವ ಅಧಿಕಾರ ತನಗೆ ಇಲ್ಲದ್ದರಿಂದ, ಅದು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಚುನಾವಣಾ ಆಯೋಗವು ಸರ್ಕಾರಕ್ಕೆ ಈ ಬಗೆಗೆ ಪತ್ರ ಬರೆದು ಬರೆದು ಸೂಕ್ತ ಪ್ರತಿಕ್ರಿಯೆ ಇಲ್ಲದೇ ಈ ತೀರ್ಮಾನಕ್ಕೆ ಬಂದಿದೆ.

. 2001ರ ಜನಗಣತಿ ಆಧಾರದಲ್ಲಿ ಮೀಸಲಾತಿ ನಿಗದಿಪಡಿಸಿ ಜೂನ್ 30 ರೊಳಗೆ ಪಡಿಸಿ ಮೀಸಲಾತಿ ಪಟ್ಟಿ ನೀಡುವಂತೆ ಏಪ್ರಿಲ್ ತಿಂಗಳಿನಲ್ಲಿಯೇ ಆಯೋಗ ಪತ್ರ ಬರೆದಿದೆ. ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಜೂನ್‌ನಲ್ಲಿ ಆಯೋಗ ಮತ್ತೊಂದು ಪತ್ರ ಬರೆದು 15 ದಿನದೊಳಗೆ ಪಟ್ಟಿ ನೀಡಿ ಎಂದರೂ ಸರ್ಕಾರದಿಂದ ಅದೇ ಪ್ರತಿಕ್ರಿಯೆ.

ಕೊನೆಗೆ ಈಗ ಸರ್ಕಾರ ಬಾಯಿ ಬಿಟ್ಟಿದೆ. 2011ರ ಜನಗಣತಿಯ ವಿವರಗಳ ಆಧಾರದಲ್ಲಿ ಚುನಾವಣೆ ನಡೆಸುವುದು ಒಳ್ಳೆಯದು. ಹಾಗಾಗಿ ಆ ವರದಿಗಾಗಿ ಕಾದು ಆಮೇಲೆ ಮೀಸಲಾತಿ ಪಟ್ಟಿ ಸಿದ್ಧಪಡಿಸಿಕೊಡಲಾಗುವುದು ಅಂಬುದು ಸರ್ಕಾರದ ಈಗಿನ ಅಂಬೋಣ. ಚುನಾವಣಾ ಆಯೋಗ ಎರಡು ಪತ್ರಗಳನ್ನು ಬರೆದಾಗಲೂ ಈ ಉತ್ತರವನ್ನು ಸರ್ಕಾರ ಕೊಡಬಹುದಾಗಿತ್ತಲ್ಲ? ಕೊಟ್ಟಿಲ್ಲ. ಏಕೆಂದರೆ ನಿಜ ಕಾರಣ ಅದಲ್ಲವೇ ಅಲ್ಲ.

ರಾಜ್ಯ ಬಿಜೆಪಿ ಸರ್ಕಾರದ ಸಚಿವರ ಹಗರಣಗಳು ದಿನಕ್ಕೊಂದರಂತೆ ಬಯಲಾಗುತ್ತಾ, ಸ್ಫೋಟಗೊಳ್ಳುತ್ತಾ ಜನತೆಗೆ ತಲೆ ಚಿಟ್ಟು ಹಿಡಿಸುತ್ತಾ ಹೊರಟಿವೆ. ಲೋಕಾಯುಕ್ತ ನ್ಯಾಯಾಲಯದಲ್ಲಿ ರಾಜ್ಯ ಬಿಜೆಪಿ ಸಚಿವರ ಹಗರಣಗಳ ವಿಚಾರಣೆ ನಡೆಸುವ ಸಲುವಾಗಿಯೇ ಒಂದು ಹೊಸ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು.... ಅಷ್ಟು ಪ್ರಕರಣಗಳು ಈಗಾಗಲೇ ದಾಖಲಾಗಿವೆ. ದಾಖಲಾಗುತ್ತಿವೆ. ಆಡಳಿತ ಎಂಬುದು ನೆಲಕಚ್ಚಿದೆ. ದಿನ ನಿತ್ಯ ಗುಂಪುಗಾರಿಕೆ ಚಟುವಟಿಕೆಗಳಲ್ಲಿ ಹಾಗೂ ಕಿತ್ತಾಟಗಳಲ್ಲಿ ಮುಳುಗಿರುವ ಬಿಜೆಪಿ ಮುಖಂಡರ ನೇತೃತ್ವದ ಸರ್ಕಾರದ



ದುರಾಡಳಿತದಿಂದ ಜನರು ರೋಸಿ ಹೋಗಿದ್ದಾರೆ. ರಾಜ್ಯದಲ್ಲಿ ಜನರ ಗೋಳು ಕೇಳಿ ಸ್ಪಂದಿಸಬೇಕಾದ ಸರ್ಕಾರ ಜನರ ಪಾಲಿಗೆ ಬಹುತೇಕ ಇಲ್ಲದಂತಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಅದೂ ಕೆಲವೇ ತಿಂಗಳಗಳಲ್ಲಿ ವಿಧಾನ ಸಭಾ ಚುನಾವಣೆಗಳು ಬರಲಿರುವ ಸಂದರ್ಭದಲ್ಲಿ ಚುನಾವಣೆ ನಡೆದರೆ ಜನರು ಬಿಜೆಪಿ ವಿರುದ್ಧ ತಮ್ಮ ಆಕ್ರೋಶವನ್ನು ಅಲ್ಲಿ ತೋರಿಸುತ್ತಾರೆ, ಅದು ವಿಧಾನ ಸಭಾ ಚುನಾವಣೆಯ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂಬ ಆತಂಕ ಈ ಆಳುವ ಬಿಜೆಪಿ ಜನರಿಗೆ ಇದೆ. ಅದರಿಂದಾಗಿಯೇ ಕುಂಟು ನೆಪಗಳನ್ನು ಸುಳ್ಳು ಸಬೂಬುಗಳನ್ನು ಹೇಳಿಕೊಂಡು ಚುನಾವಣೆ ಮುಂದೂಡಲು ಬಿಜೆಪಿ ಸರ್ಕಾರ ಇನ್ನಿಲ್ಲದ ಹೊಂಚು-ಸಂಚು ಮಾಡುತ್ತಾ ಕುಳಿತಿದೆ.

ಕೆಲವು ವರ್ಷಗಳ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧವಾಗಿ ಕೂಡ ಬಿಜೆಪಿ ಸರ್ಕಾರ ಚುನಾವಣೆ ನಡೆಸಲು ಎಷ್ಟೆಲ್ಲಾ ತಂತ್ರಗಾರಿಕೆ ಹೂಡಿ ವಿಳಂಬ ಮಾಡಿತು, ಕೊನೆಗೆ ತನಗೆ ಅನುಕೂಲಕರ ಸನ್ನಿವೇಶ ಸೃಷ್ಟಿ ಮಾಡಿಕೊಳ್ಳುವವರೆಗೆ ಚುನಾವಣೆ ಮುಂದೆ ತಳ್ಳಿ ಆಮೇಲೆ ಅಧಿಕಾರ ಬಳಸಿ-ಆಮಿಷ ತೋರಿಸಿ, ಜನರಿಗೆ ಇಲ್ಲದ ಸುಳ್ಳು ಭರವಸೆ ನೀಡಿ ಹೇಗೆ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದುಕೊಂಡಿತು ಮತ್ತು ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯಲ್ಲಿ ಬಿಜೆಪಿ ಯಾವ ಚಂದಕ್ಕೆ ಅಧಿಕಾರ ನಡೆಸುತ್ತಿದೆ ಎಂಬುದನ್ನು ಬೆಂಗಳೂರಿನ ಜನ ಮಾತ್ರವಲ್ಲ, ರಾಜ್ಯದ ಜನರೆಲ್ಲಾ ನೋಡಿದ್ದಾಗಿದೆ. ಬಿಜೆಪಿ ದರ್ಬಾರ್‌ನಲ್ಲಿ ಬಿಬಿಎಂಪಿ ಆಡಳಿತದ ಕೀರ್ತಿ ಮತ್ತು 'ಕಂಪು' ರಾಜ್ಯ-ದೇಶದ ಗಡಿ ದಾಟಿ ನ್ಯೂಯಾರ್ಕ್ ನಗರ ತಲುಪಿದೆ ಎಂದ ಮೇಲೆ ಎಂತಹ ಘನ ಆಡಳಿತ ಅಂತೀರಿ. ಅಲ್ಲವೇ ?

ಶಾಲೆ ಮುಚ್ಚುವ ಸರ್ಕಾರ

ರಾಜ್ಯದ ಜನರಿಗಾಗಿ ಏನಾದರೊಂದು ಮಾಡಿದ್ದೇವೆ... ಜನರ ಸಂಕಟ ಪರಿಹರಿಸುವಲ್ಲಿ ಇಂಥದ್ದೊಂದು ಸಹಾಯ ಮಾಡಿದ್ದೇವೆಂದು ಹೇಳಿಕೊಳ್ಳಲು ನೆಟ್ಟಗೆ ಒಂದೇ ಒಂದು ಕ್ರಮವನ್ನೂ ತೋರಿಸಲಾರದ ರಾಜ್ಯ ಬಿಜೆಪಿ ಸರ್ಕಾರ ಜನವಿರೋಧಿ ನೀತಿಗಳಲ್ಲಿ ಮತ್ತು ಅದನ್ನು ವಿರೋಧಿಸುವವರ ಮೇಲೆ ದೌರ್ಜನ್ಯ ದಬ್ಬಾಳಿಕೆ ನಡೆಸುವಲ್ಲಿ ಮಾತ್ರ ಮೈಲುಗಲ್ಲು ಎನಿಸುವಂತಹ ಭಾರಿ ಸಾಧನೆಯನ್ನೇ ಮಾಡಿ ಮುನ್ನಡೆಯುತ್ತಿದೆ.

ಕನ್ನಡ ಶಾಲೆಗಳಿಗೆ ಕಂಟಕವಾಗಿರುವ ಸರ್ಕಾರ ದೇಶದಲ್ಲಿ ಎಲ್ಲ ಕಡೆ ಈಗ ಶಿಕ್ಷಣದ ಹಕ್ಕು ಕಾಯ್ದೆಯ ವಿಚಾರ ಚರ್ಚೆಯಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿಯೂ ಈ ಬಗೆಗೆ ಚರ್ಚೆ ನಡೆಯುತ್ತಿದ್ದರೂ ರಾಜ್ಯ ಸರ್ಕಾರದ ಶಿಕ್ಷಣ ದ್ರೋಹಿ ಧೋರಣೆಯಿಂದಾಗಿ ಸಹಸ್ರಾರು ಶಾಲೆಗಳನ್ನು ಅದರಲ್ಲೂ ಕನ್ನಡ ಶಾಲೆಗಳನ್ನು ಮುಚ್ಚಿ ಮಕ್ಕಳಿಗೆ ಶಿಕ್ಷಣದ ಹಕ್ಕು ವಂಚಿಸಿ ಬೀದಿಪಾಲು ಮಾಡುವ ಕುತಂತ್ರದ ಯೋಜನೆಯನ್ನು ಜಾರಿ ಮಾಡುತ್ತಾ ಬರಲಾಗುತ್ತಿದೆ. ಜೊತೆಗೆ ಇಂತಹ ದಾರಿಯಲ್ಲಿ ಇನ್ನೆಷ್ಟು ಮತ್ತಷ್ಟು ಏನು ಮಾಡಬಹುದೆಂದು ಸಂಶೋಧಿಸಿ ಯೋಜಿಸಲಾಗುತ್ತಿದೆ.

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ನೆಪವನ್ನು ತೋರಿಸಿ ಮೊದಲ ಹಂತದಲ್ಲಿ ರಾಜ್ಯದಲ್ಲಿ ಸು.3,174 ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಯಿತು. ಈ ಬಗೆಗೆ ಸರ್ಕಾರವನ್ನು ಕೇಳಿದರೆ ಶಾಲೆಗಳನ್ನು ಮುಚ್ಚಲಾಗುತ್ತಿಲ್ಲ, ಅವುಗಳನ್ನು ಸಮೀಪದ ಮತ್ತೊಂದು ಶಾಲೆಯ ಜೊತೆ ವಿಲೀನಗೊಳಿಸಲಾಗುತ್ತಿದೆ ಎಂಬ ಪೊಳ್ಳು ಸಮಜಾಯಿಷಿ ನೀಡಲಾಯಿತು. ಶಾಲೆ ಮುಚ್ಚುವುದು ಎಂದು ಕರೆದರೂ, ಶಾಲೆಗಳ ವಿಲೀನ ಎಂದು ಕರೆದರೂ ಅದರ ಪರಿಣಾಮ ಮಾತ್ರ ಒಂದೇ. ತಮ್ಮ ಗ್ರಾಮ, ಹಟ್ಟಿ, ಹಾಡಿ, ತಾಂಡಾ, ಕಾಲೋನಿಗಳಿಗೆ ಅತ್ಯಂತ ಹತ್ತಿರದಲ್ಲಿದ್ದ ಶಾಲೆಗಳು ಮಕ್ಕಳು ಮತ್ತು ಪೋಷಕರ ಪಾಲಿಗೆ ಇಲ್ಲವಾಗುವುದು.

ಈ ನೀತಿಯು ತರಬಹುದಾದ ಪರಿಣಾಮಗಳ ಭೀಕರತೆ ಹೇಗಿರಬಹುದು ಎಂದು ತಿಳಿಯಲು ಇಲ್ಲೊಂದು ಉದಾಹರಣೆ ಇದೆ. ಹೊಸ ಕೋಟೆಯ ಗ್ರಾಮವೊಂದರಲ್ಲಿದ್ದ ಪ್ರಾಥಮಿಕ ಶಾಲೆಯನ್ನು ಮಕ್ಕಳ ಸಂಖ್ಯೆ ಕಡಿಮೆ ಎಂದು ಮುಚ್ಚಲಾಯಿತು. ಆ ಊರಿನ ಪ್ರಾಥಮಿಕ ಶಾಲೆಯ ಮಗು ಹೊಸಕೋಟೆಯ ಪಟ್ಟಣದ ಶಾಲೆಗೆ ಸೇರುವುದು ಅನಿವಾರ್ಯವಾಯಿತು. ಹೀಗೆ ಆ ಮಗು ಹೊಸಕೋಟೆ ಪಟ್ಟಣಕ್ಕೆ ಹೋಗಿ ಬರುವ ಮಾರ್ಗದಲ್ಲಿ ಕಳೆದ ತಿಂಗಳು ಅಪಘಾತಕ್ಕೆ ಸಿಲುಕಿ ಪ್ರಾಣವನ್ನೇ ಕಳೆದುಕೊಂಡಿತು.

ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೊಟ್ಟು ಶಾಲೆಗೆ ಬರಲು ಸಾಧ್ಯವಾಗದ ಮತ್ತು ದೂರದ ಖಾಸಗಿ ಶಾಲೆಗೆ ಹೋಗುವ ಮಕ್ಕಳನ್ನು ಅಲ್ಲಿಗೆ ಸೆಳೆಯುವುದು ಹೇಗೆ ಎಂಬುದು ಸರ್ಕಾರದ ಕಾಳಜಿ-ಕಾರ್ಯಕ್ರಮ ಆಗಬೇಕಾಗಿತ್ತು. ಆದರೆ ಅದಾಗಲಿಲ್ಲ. ಶಾಲೆಗಳನ್ನು ಮುಚ್ಚಲಾಯಿತು.

ಗಂಗಾವತಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಜೆಪಿ ಸರ್ಕಾರದ ಈ ಧೋರಣೆಯನ್ನು ವಿರೋಧಿಸಿದ ಎಸ್ಎಫ್ಐ ಮುಖಂಡರ ಮೇಲೆ ಬಿಜೆಪಿ ಸರ್ಕಾರದ ಪೋಲಿಸರು ದೌರ್ಜನ್ಯ ನಡೆಸಿ ಮೊಕದ್ದಮೆ ಹೂಡಿದ್ದರು. ಆದರೆ ಸರ್ಕಾರ ಹೂಡಿರುವ ಈ ಮೊಕದ್ದಮೆಗಳನ್ನು ನ್ಯಾಯಾಲಯ ಇತ್ತೀಚೆಗೆ ವಜಾ ಮಾಡಿ ವಿದ್ಯಾರ್ಥಿ ಮುಖಂಡರುಗಳನ್ನು ದೋಷಮುಕ್ತಗೊಳಿಸಿದೆ.

ಇಂತಹ ಯಾವ ತೀರ್ಪು-ಬೆಳವಣಿಗೆಗಳಿಂದ ಯಾವ ಪಾಠವನ್ನೂ ಕಲಿಯಲು ಸಿದ್ಧವಿಲ್ಲದ ಬಿಜೆಪಿ ಸರ್ಕಾರವು ಮತ್ತೆ ಅದೇ ಶಿಕ್ಷಣ ದ್ರೋಹಿ ನೀತಿಗಳ ಜಾಡಿನಲ್ಲಿ ಮುಂದುವರೆದಿದೆ. ರಾಜ್ಯ ಬಿಜೆಪಿ ಸರ್ಕಾರ ನೇಮಿಸಿದ್ದ ಪ್ರೊ. ಗೋವಿಂದ ಸಮಿತಿ ವರದಿ ಸಿದ್ಧಗೊಂಡು ಈಗ ಮತ್ತೊಂದು

ಮುಂದೆ 15 ಕ್ಕೆ

ಒಗ್ಗಟ್ಟಿನ ಸ್ಫೂರ್ತಿಗೆ ಸಾಕ್ಷಿಯಾದ ಸಮ್ಮೇಳನ

ಪುಟ 8 ರಿಂದ

ನವಾಡಿ ಅಂಗನವಾಡಿ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಸರ್ಕಾರ ಈ ಖರ್ಚನ್ನು ಲೆಕ್ಕ ಹಾಕಿ ಬಡ್ಡಿ ಸಮೇತ ವಾಪಸ್ ಮಾಡಬೇಕು ಎಂದು ಬೃಂದಾ ಕಾರಟ್ ಆಗ್ರಹಿಸಿದರು.

ರಾಜಕೀಯ ಜಾಗೃತಿ ಇರಲಿ

ಅಂಗನವಾಡಿ ನೌಕರರ ಹೋರಾಟ, ಅದು ಅಪೌಷ್ಟಿಕತೆ ವಿರುದ್ಧ ಹೋರಾಟ. ಇದು ನಿಮ್ಮ ಹೋರಾಟ ಮಾತ್ರವಲ್ಲ. ನಮ್ಮೆಲ್ಲರ ಹೋರಾಟ. ನೀವು ರಾಜಕೀಯ ಪಕ್ಷಗಳ ನೀತಿಗಳನ್ನು ಗಮನಿಸಿ. ಯಾರು ನಿಮ್ಮ ಹೋರಾಟವನ್ನು ಬೆಂಬಲಿಸುತ್ತಾರೋ ಅಂತಹ ರಾಜಕೀಯ ಪಕ್ಷವನ್ನು ಮಾತ್ರ ಬೆಂಬಲಿಸಿ ಜಾಗೃತರಾಗಿ ಎಂದು ಬೃಂದಾ ಕರೆ ನೀಡಿದರು.

ರಾಜ್ಯದ ಅಂಗನವಾಡಿ ಚಳುವಳಿಗೆ ಸಮರಧೀರ ಹೋರಾಟದ ಪರಂಪರೆ ಇದೆ. ಸರ್ಕಾರ ಅಂಗನವಾಡಿ ನೌಕರರ ಕೆಲಸವನ್ನು ನಿರ್ಲಕ್ಷ್ಯ ಮಾಡುತ್ತಿದೆ. ದುಡಿಯುವ ಕಾರ್ಯಕರ್ತೆಯರಿಗೆ ತಿಂಗಳಿಗೆ 3000, ರೂ. ಸಹಾಯಕಿಯರಿಗೆ 1500 ರೂ. ಕೊಡಲಾಗುತ್ತಿದೆ. ಅದರಲ್ಲಿ ಕುಟುಂಬ ನಿರ್ವಹಣೆ ಸಾಧ್ಯವಿಲ್ಲ.

ಹಿಂದೆ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಸಚಿವೆ ಸುಮಿತ್ರ ಮಹಾಜನ್ ಅವರು ವೇತನ ಹೆಚ್ಚಳ ಮಾಡಿ ಎಂಬ ಒತ್ತಾಯದ ಬಗೆಗೆ 50 ರೂಪಾಯಿ ವೇತನ ಹೆಚ್ಚಿಸಿದರೂ ಅದು ದೊಡ್ಡ ಮೊತ್ತವಾಗುತ್ತದೆ ಎಂದು ವಾದ ಮಾಡಿದರು. 58-60 ವರ್ಷ ಆದರೆ ನಿವೃತ್ತಿಗೆ ಕ್ರಮ ವಹಿಸುತ್ತಾರೆ. 30-35 ವರ್ಷ ಕೆಲಸ ಮಾಡಿದರೂ ಸರಿಯಾದ ಪಿಂಚಣಿ ಇಲ್ಲ. ಜಾರಿಕೊಳ್ಳುವ ಸರ್ಕಾರಗಳು ಡಾ||ಹೇಮಲತ ಟೀಕೆ.

ಸ್ವಾಲಂಬನೆ ಹೆಸರಿನಲ್ಲಿ ತರಲಾಗುತ್ತಿರುವ ಪಿಂಚಣಿ ಯೋಜನೆ ಬೇಡವೆಂದು ಎಲ್ಲ ಕಾರ್ಮಿಕ ಸಂಘಟನೆಗಳೂ ಹೇಳಿದರೂ ಸರ್ಕಾರ ಕಿವಿಗೊಡುತ್ತಿಲ್ಲ. ಅಂಗನವಾಡಿಗಳಿಗೆ ಸೂಕ್ತ ಸೌಲಭ್ಯ ಕೊಡದ ಸರ್ಕಾರ ಅಪೌಷ್ಟಿಕತೆ ಮುಂದುವರಿಯುತ್ತಿರುವುದರಿಂದ ಅದರ ನಿವಾರಣೆಗೆ ಅಂಗನವಾಡಿ ಅಲ್ಲದ ಬೇರೆ ಕ್ರಮಗಳ ಬಗೆಗೆ ಯೋಚಿಸಬೇಕಾಗುತ್ತದೆ ಎನ್ನುತ್ತಿದೆ. ಕೇಂದ್ರ ಸರ್ಕಾರಕ್ಕೆ ಈ ಬಗೆಗೆ ನಾಚಿಕೆಯಾಗಬೇಕು. ಅಂಗನವಾಡಿಗಳನ್ನು ಸ್ವಸಹಾಯ ಗುಂಪುಗಳಿಗೆ, ಎನ್.ಜಿ.ಓ. ಸಂಸ್ಥೆಗಳ ಕೈಗೆ ಒಪ್ಪಿಸಲು ಯೋಜಿಸಲಾಗುತ್ತಿದೆ. ಒರಿಸ್ಸಾ, ರಾಜಾಸ್ತಾನಗಳಲ್ಲಿ ಈಗಾಗಲೇ ಈ ನೀತಿ ಜಾರಿಗೆ ಬಂದಿದೆ. ಅಡಿಗೆ ಮಾಡಿ ಪೂರೈಸುವುದನ್ನು ನಾಂದಿ, ಏರಟೆಲ್, ಜೆಪಿ ಗುಂಪು, ಇಸ್ಕಾನ್, ತಾಯಂದಿರ ಸಮಿತಿ ಮುಂತಾದವುಗಳಿಗೆ ವಹಿಸಿ ಸರ್ಕಾರವು ಜವಾಬ್ದಾರಿಯಿಂದ ಜಾರಿಕೊಳ್ಳುವ ತಂತ್ರ ರೂಪಿಸಲಾಗಿದೆ ಎಂದು ಸಂಘಟನೆಯ ಅಖಿಲಭಾರತ ಅಧ್ಯಕ್ಷೆ(?) ಕಾಂ. ಹೇಮಲತಾ ಸರ್ಕಾರದ ನೀತಿಗಳನ್ನು ತೀವ್ರವಾಗಿ ಖಂಡಿಸಿದರು.

15 ಸಾವಿರ- 10 ಸಾವಿರ ವೇತನ ನೀಡಿ

ಸಹಾಯಕಿಯರಿಗೆ ಕನಿಷ್ಠ ಹತ್ತು ಸಾವಿರ, ಕಾರ್ಯಕರ್ತೆಯರಿಗೆ 15 ಸಾವಿರ ವೇತನ ತಿಂಗಳ ವೇತನ ನೀಡಬೇಕು ಎಂದು ತಮ್ಮ ತರ್ಕಬದ್ಧ ಮಾತುಗಳಲ್ಲಿ ವಿಚಾರ ಮಂಡಿಸಿದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ವಿಜೆಕೆ ನಾಯರ್‌ರವರು ದೂರದ ಅಮೇರಿಕಾದ ಕೂತಿರುವರ ಅಂದರೆ ವಿಶ್ವ ಬ್ಯಾಂಕು ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ಐಎಂಎಫ್‌ನವರ ನಿರ್ದೇಶನದ ಪ್ರಕಾರ ನೌಕರಿಗಳನ್ನು ಕಡಿಮೆ ಮಾಡುತ್ತಾ, ನೌಕರರನ್ನು ಕಡೆಗಣಿಸಿ ಗೌರವಧನದ ಆಧಾರದಲ್ಲಿ ಕೆಲಸ ಮಾಡಿಸಲಾಗುತ್ತಿದೆ. ಈ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಬೇಕು. ಫೆಬ್ರವರಿ 20-21 ರ ರಾಷ್ಟ್ರವ್ಯಾಪಿ ಮುಷ್ಕರವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಸರ್ಕಾರದ ಧೋರಣೆ ....ಅಳುವ ಮಗುವಿಗೆ ಉಪ್ಪು ಹಾಕಿದ ನೀರು ಕುಡಿಸಿ ಗೋತಾ ಹೊಡೆಸುವಂತಿದೆ-ಸಿ. ಬಸವ ಲಿಂಗಯ್ಯ

ಮೈಸೂರಿನಲ್ಲಿ ಅರಮನೆ-ಗುರುಮನೆ ಎಲ್ಲ ಇವೆ...ಆದರೆ ಕಳೆದ 25 ವರ್ಷದಿಂದ ಮಹಿಳೆಯರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದು ನೋಡಿದ್ದೇ ಇದೇ ಪ್ರಥಮ ಬಾರಿಗೆ ಎಂದೆ ಖ್ಯಾತ ರಂಗ ಕರ್ಮಿ, ನಾಟಕಕಾರ, ಸ್ವಾಗತ ಸಮಿತಿಯ ಗೌರವಾಧ್ಯಕ್ಷರೂ ಆದ ಸಿ. ಬಸವಲಿಂಗಯ್ಯ, ಮಗು ಅಳದೇ ತಾಯಿ ಕೂಡ ಮಗುವಿಗೆ ಹಾಲು ಕುಡಿಸುವುದಿಲ್ಲ. ಅಂಗನವಾಡಿ ನೌಕರರ ವಿಷಯದಲ್ಲಿ ಸರ್ಕಾರದ ಧೋರಣೆ ಮಗುವಿಗೆ ಹಾಲು ಕುಡಿಸುವಂತಿಲ್ಲ. ನೀರಲ್ಲಿ ಉಪ್ಪು ಹಾಕಿ ಕುಡಿಸಿ ಗೋತಾ ಹೊಡೆಸುವಂತಿದೆ.

10 ಕೋಟಿ ರೂಪಾಯಿಗಳು ಮೈಸೂರು ದಸರಾ ಮೋಜಿನಲ್ಲಿ ಕಳೆದು ಹೋಯಿತು. ಆದರೆ ಕಸ ತೆಗೆಯುವ ಪೌರ ಕಾರ್ಮಿಕರಿಗೆ ಸಂಬಳವನ್ನು ಕೊಡುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆಯ ಹೆಸರಲ್ಲಿ ಕುಡಿಯಲು 30 ರೂಪಾಯಿ ಕೊಟ್ಟು 100-150 ರೂಪಾಯಿಗಳನ್ನು ಹೊಡೆದುಕೊಂಡು ಮೋಸ ಮಾಡಲಾಗುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳ ಲೂಟಿಯಲ್ಲಿ, ಭ್ರಷ್ಟತೆಯಲ್ಲಿ ಕರ್ನಾಟಕ ತುಂಬಾ ಮುಂದೆ ಇದೆ. ನಮಗೆ ಹೋರಾಟವಿಲ್ಲದೇ ಬೇರೆ ಏನೂ ಗತಿ ಇಲ್ಲ ಎಂದು ಬಸವಲಿಂಗಯ್ಯ ಹೇಳಿದರು.

ಪಂಚೇಂದ್ರಿಯಗಳನ್ನು ಕಳೆದುಕೊಂಡ ಸರ್ಕಾರ -ಜಿ.ವಿ. ಶ್ರೀರಾಮ ರೆಡ್ಡಿ

37 ವರ್ಷಗಳಿಂದ ಹೋರಾಟ ಮಾಡುತ್ತಿದ್ದೀರಿ. ನಿಮ್ಮ ಬೇಡಿಕೆಗಳು ಈಡೇರಿಲ್ಲ. ಈ ಸರ್ಕಾರ ಪಂಚೇಂದ್ರಿಯಗಳನ್ನು ಕಳೆದುಕೊಂಡ ಸರ್ಕಾರ. ಇದಕ್ಕೆ ಕಣ್ಣೂ, ಕಿವಿ, ಸ್ಪರ್ಷದ ಅನುಭವ ಯಾವುದೂ ಇಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಎಲ್ಲಾ 'ಒಂದೇ. ನೀವು ಹೋರಾಟದಲ್ಲಿ ಕೆಂಬಾವುಟ ಹಿಡಿಯುವ ಜೊತೆಗೆ, ನಿಮ್ಮ ಹೋರಾಟಕ್ಕೆ ಸದಾ ಬೆಂಬಲವಾಗಿ ನಿಲ್ಲುವ ಕೆಂಬಾವುಟವನ್ನು ಚುನಾವಣೆಗಳ ಸಮಯದಲ್ಲಿಯೂ ಬೆಂಬಲಿಸಬೇಕು. ರಾಜ್ಯದ ಬಿಜೆಪಿ ಸರ್ಕಾರ ಕೋಮಾದಲ್ಲಿದೆ ಎಂದು ಹೇಳುತ್ತಾರೆ. ಅದು ಕೋಮಾದಲ್ಲಿಲ್ಲ. ವೆಂಟಿಲೇಟರ್‌ನಲ್ಲಿದೆ. ಯಡಿಯೂರಪ್ಪ ಬೆಂಬಲಿಗ ಶಾಸಕರು ಬೆಂಬಲ ಹಿಂತೆಗೆದು ಕೊಂಡರೆ ಅಂದರೆ ಈ ಕೃತಕ ಉಸಿರಾಟದ ವ್ಯವಸ್ಥೆ ತೆಗೆದರೆ ರಾಜ್ಯವನ್ನು ದಿವಾಳಿ ಎಬ್ಬಿಸಿದ ಈ ಸರ್ಕಾರ ಕೊನೆಯುಸಿರೆಳೆಯುತ್ತದೆ ಎಂದು ಮಾಜಿ ಶಾಸಕರು, ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಗಳೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.

ಸಿಐಟಿಯು ಮೈಸೂರು ಜಿಲ್ಲಾ ಮುಖಂಡರಾದ ಜಿ. ಜಯರಾಮ್ ರ್‍ಯಾಲಿಯನ್ನುದ್ದೇಶಿ ಮಾತನಾಡಿ ರಾಜ್ಯ ಬಿಜೆಪಿ ಸರ್ಕಾರದ ನೀತಿಗಳನ್ನು ಖಂಡಿಸಿದರು. ಸಿಐಟಿಯು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಬಸವರಾಜು ವೇದಿಕೆಯಲ್ಲಿದ್ದರು. ಮೀನಾಕ್ಷಿ ಸುಂದರಂ, ಹಾಗೂ ಪ್ರಸನ್ನ ಕುಮಾರ್ ಅವರು ಕ್ರಮವಾಗಿ ಬೃಂದಾ ಮತ್ತು ಹೇಮಲತಾ ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಕಾಂ. ಶಾಂತಾ. ಎಸ್. ಘಂಟೆಯವರು ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಐಸಿಡಿಎಸ್ ಯೋಜನೆ ಬಲಪಡಿಸಿ

ನವೆಂಬರ್ 4,5 ರಂದು ಮುಂದುವರೆದ ಸಮ್ಮೇಳನವು ಐಸಿಡಿಎಸ್ ಯೋಜನೆ ಬಲಪಡಿಸಿ, ಅಪೌಷ್ಠಿಕತೆ ಹೋಗಲಾಡಿಸಿ, ಬದುಕಿನ ಭದ್ರತೆಗಾಗಿ ಒತ್ತಾಯಿಸುವ, ರಾಜ್ಯದಾದ್ಯಂತ ಚಳುವಳಿ ಬಲಿಷ್ಟಗೊಳಿಸುವ, ಅಪೌಷ್ಟಿಕತೆ ಹೋಗಲಾಡಿಸಿ, ಶಾಲಾಪೂರ್ವ ಶಿಕ್ಷಣ ಮಕ್ಕಳ ಹಕ್ಕಾಗಿಸಲು, ಬೆಲೆ ಏರಿಕೆ ವಿರುದ್ಧ, ಆಹಾರ ಭದ್ರತೆಗಾಗಿ, ಕನಿಷ್ಠ ಕೂಲಿ, ಉದ್ಯೋಗ ಭದ್ರತೆಗೆ ಹೋರಾಡುವ ತೀರ್ಮಾನದೊಂದಿಗೆ ಮುಕ್ತಾಯಗೊಳಿಸಲಾಯಿತು.

ನೂತನ ಸಮಿತಿ

ರಾಜ್ಯ ಸಮಿತಿ ಅಧ್ಯಕ್ಷರಾಗಿ ಎಸ್. ವರಲಕ್ಷ್ಮಿ, ಕಾರ್ಯಾಧ್ಯಕ್ಷರಾಗಿ ಶಾಂತಾ ಎನ್. ಘಂಟೆ, ಪ್ರಧಾನ ಕಾರ್ಯದರ್ಶಿಯಾಗಿ ಸುನಂದಾ ಮೈಸೂರು, ಖಜಾಂಚಿಯಾಗಿ ಕಮಲಾ ಸರ್ವಾನುಮತದಿಂದ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಟಿ. ಲೀಲಾವತಿ, ಕೆ. ನಾಗರತ್ನ, ರಂಗಮ್ಮ, ಮುನಿರಾಜಮ್ಮ, ಮಂಜಮ್ಮ, ಮಂಜುಳಾರಾಜ್, ಸರಸ್ವತಿಮಠ, ಕಾರ್ಯದರ್ಶಿಗಳಾಗಿ ಯಮುನಾ ಗಾಂವ್ಕರ್, ಸರೋಜಾ, ಶ್ರೀದೇವಿ, ಗೌರಮ್ಮ ಪಾಟೀಲ, ಲಕ್ಷ್ಮಿ ದೇವಮ್ಮ, ದೊಡ್ಡವ್ವ ಪೂಜೇರಿ, ಸುಜಾತಾ ಆಯ್ಕೆಯಾದರು.

ಈ ರೀತಿಯಲ್ಲಿ 18 ಜನ ಪದಾಧಿಕಾರಿಗಳು, 43 ಜನ ರಾಜ್ಯ ಸಮಿತಿ ಸದಸ್ಯರು 154 ಜನರ ರಾಜ್ಯ ಕೌನ್ಸಿಲ್ ಸರ್ವಾನುಮತದಿಂದ ಆಯ್ಕೆಯಾಯಿತು.

ಗೌರವಾರ್ಪಣೆ :

ಕರ್ನಾಟಕದಲ್ಲಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುನ್ನುಗ್ಗಿದ ರೈತ-ಕಾರ್ಮಿಕ ಚಳುವಳಿಯನ್ನು ಕಟ್ಟಲು ಶ್ರಮವಹಿಸಿದವರ ಕುಟುಂಬದವರಿಗೆ 5ನೇ ರಾಜ್ಯ ಸಮ್ಮೇಳನದ ಸಮಾರೋಪದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಎಂ ರಾಜ್ಯ ಮಾಜಿ ಕಾರ್ಯದರ್ಶಿ, ರೈತ-ಕಾರ್ಮಿಕರ ನೈಜ ನಾಯಕ, ಮಾಜಿ ಎಂ.ಎಲ್.ಎ ಕಾಮ್ರೇಡ್ ಪಿ. ರಾಮಚಂದ್ರರಾವ್‌ರವರ ಪತ್ನಿ ಪಿ.ಲೀಲಾವತಿ ಯವರನ್ನು, ಮೈಸೂರಿನಲ್ಲಿ ರಾಜಸತ್ತೆಯ ವಿರುದ್ಧ ಪ್ರಜಾಪ್ರಭುತ್ವಕ್ಕೆ ಚಳುವಳಿ ನಡೆಸಿದ ಸ್ವಾತಂತ್ರ್ಯ ಹೋರಾಟಗಾರ ಕಾಮ್ರೇಡ್ ಎನ್. ಉಗ್ರಪ್ಪರವರ ಮಗ ಮೋಹನದಾಸ್ ಅವರಿಗೆ, ಮೈಸೂರು ಪ್ರಾಂತ್ಯದ ವಿವಿಧ ಕಾರ್ಮಿಕ ಚಳುವಳಿಗೆ ಮುಖಂಡರಾಗಿ, ವಿಮಾ ನೌಕರ ಮುಂದಾಳು ಕಾ. ಎನ್.ಎಸ್.ಪ್ರಭಾಕರ್ ರವರ ಪತ್ನಿ ಸತ್ಯವತಿ ರವರಿಗೆ, ಕರ್ನಾಟಕದ ಕಮ್ಯುನಿಷ್ಟ ಚಳುವಳಿಯ ಅಗ್ರಮಾನ್ಯ ನಾಯಕರಲ್ಲಿ ಓರ್ವರು, ಸ್ವಾತಂತ್ರ್ಯ ಚಳುವಳಿಗಾರರು, ಕರ್ನಾಟಕ ಏಕೀಕರಣದ ಮುಂದಾಳುಗಳೂ ಆದ ಕಾ. ಎನ್.ಕೆ.ಉಪಾಧ್ಯಾಯರವರ ಮಗಳು ಕಾ. ಸುಜಾತಾರವರನ್ನು, ಕಾರ್ಮಿಕರ ಜಂಟಿ ಚಳುವಳಿಗೆ ಮಹತ್ವದ ಕೊಡುಗೆ ನೀಡಿದ ವಿಮಾ ನೌಕರ ಸಂಘದ ಮುಂದಾಳು ಕೆ.ವಿ.ಶ್ರೀನಿವಾಸರ ಪತ್ನಿ ವಸಂತರವರನ್ನು, ಕ್ರಾಂತಿಕಾರಿ ಘೋಷಣೆಗಳ ಮಧ್ಯೆ ಗೌರವದಿಂದ ಸನ್ಮಾನಿಸಲಾಯಿತು. ತ್ಯಾಗ, ಬಲಿದಾನದಿಂದ ಕಟ್ಟಿದ ಚಳುವಳಿಯನ್ನು ಮುನ್ನಡೆಸಿಕೊಂಡು ಹೋಗುವ ತೀರ್ಮಾನ ಮಾಡಿದರು.

40 ಸಾವಿರ ಅರ್ಜಿದಾರರ ಬಂಧನ.....

ಪುಟ 10 ರಿಂದ

ಜೋಯಿಡಾದಲ್ಲಿ ರೈತ ಸಂಘದ ತಾಲೂಕ ಅಧ್ಯಕ್ಷ ನಾರಾಯಣ ವೇಳಿಪ, ಕಾರ್ಯದರ್ಶಿ ಪ್ರೇಮಾನಂದ ವೇಳಿಪ, ರಾಜೇಶ ಗಾವುಡ, ದಿಗಂಬರ ದೇಸಾಯಿ, ಬಾಳಸು ವೇಳಿಪ ನೇತೃತ್ವದಲ್ಲಿ ನೂರಾರು ಜನ ತಾಲೂಕು ಕಛೇರಿಗೆ ಮುತ್ತಿಗೆ ಹಾಕಿದಾಗ ಪೋಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಬಿಡುಗಡೆ ಗೊಳಿಸಿದರು. ಹೊನ್ನಾವರದಲ್ಲಿ ತಿಲಕ್ ಗೌಡ, ತಿಮ್ಮಪ್ಪ ಗೌಡ, ಗಣೇಶ ಭಂಡಾರಿ, ಮಂಜುನಾಥ ನಾಯ್ಕ ಮುಂತಾದವರ ನೇತೃತ್ವದಲ್ಲಿ 500ಕ್ಕೂ ಹೆಚ್ಚಿನ ಅರಣ್ಯ ಅತಿಕ್ರಮಣದಾರರು ತಾಲೂಕ ಕಛೇರಿ ಮುತ್ತಿಗೆ ಹಾಕಿದಾಗ ಹೋರಾಟ ಗಾರರನ್ನು ಬಂಧಿಸಿ ಬಿಡುಗಡೆಗೊಳಿಸಲಾಯಿತು.

ಹಳಿಯಾಳದಲ್ಲಿ ನೂರಾರು ರೈತರು ಆರ್.ಎಂ. ಮುಲ್ಲಾ, ಹರೀಶ ನಾಯ್ಕ, ಶ್ಯಾಮಸನ್ ಮುಂತಾದವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು. ಶಿರಸಿಯಲ್ಲಿ ಬಂಗಾರೇಶ್ವರ ಗೌಡ, ನಾಗಪ್ಪ ನಾಯ್ಕ ಮುಂತಾದವರ ನೇತೃತ್ವದಲ್ಲಿ ಮನೆ ನಿವೇಶನಗಳಿಗಾಗಿ ಪ್ರತಿಭಟನೆ, ಸ್ಥಳ ಗುರುತಿಸಲು ಕಾರ್ಯಕ್ರಮ ನಡೆಸಲಾಯಿತು. ಹುಸರಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ನಡೆಸಲಾಯಿತು. ಮುಂಡಗೋಡದಲ್ಲಿ ಕೃಷಿ ಕೂಲಿಕಾರರು, ರೈತರು ನೂರಾರು ಸಂಖ್ಯೆಯಲ್ಲಿ ಭೀಮಣ್ಣ ಭೋವಿ, ಬಸವರಾಜ ಧಾರವಾಡ ಮುಂತಾದವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು. ಭಟ್ಕಳದಲ್ಲಿ ಸುಭಾಶ ಕೊಪ್ಪಿಕರ, ಮಾದೇವ ಶಿರಾಲಿ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಒಟ್ಟಾರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೇ ದಿನ 9 ಕಡೆ ಪ್ರತಿಭಟನೆ ನಡೆಸಿದ್ದು ಗಮನಾರ್ಹವಾದದ್ದು. ಜಿಲ್ಲಾಡಳಿತದ ಗಮನ ಸೆಳೆಯಲು ಯಶಸ್ವಿಯಾಗಿದೆ.

ಏಳಿ, ಎದ್ದೇಳಿ, ಹೂಡಿಕೆಗಳಿಗೆ ಅನುಕೂಲವಾಗುವಂತೆ ಕೆಲಸ ಮಾಡಿ! ಸಂಪುಟ ಸಹಯೋಗಿಗಳಿಗೆ ಪ್ರಧಾನಿ 'ಸಮರ ಕರೆ'



ವೇದರಾಜ ಎನ್.ಕೆ.

ಯುಪಿಎ-2 ಸರಕಾರ ಈಗ ಸಮರ ಸನ್ನದ್ಧವಾಗುತ್ತಿದೆಯಂತೆ. ಒಂದೆಡೆ ಬೃಹತ್ ಭ್ರಷ್ಟಾಚಾರಗಳು, ಚವುಚಾ ಬಂಡವಾಳಶಾಹಿಯನ್ನು ಪೋಷಿಸುವ ಆಪಾದನೆಗಳು, ಇನ್ನೊಂದೆಡೆ ಜಾಗತಿಕ ಹಣಕಾಸು ಬಂಡವಾಳಿಗರ ಟೀಕೆಗಳು, ಇವೆರಡರ ನಡುವೆ ನಜ್ಜುಗುಜ್ಜಾದ ಯುಪಿಎ-2 ಸರಕಾರ ರಭಸದ ದಾಳಿಗಳನ್ನು ಪುನರಾರಂಭಿಸಿ ಕಳೆದ ಸಂಚಿಕೆಯಲ್ಲಿ ಹೇಳಿದಂತೆ ಕಾರ್ಪೊರೇಟ್ ಹಿತಗಳನ್ನು ಪೋಷಿಸುವ ಸಂಪುಟ ರಚನೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಈಗ ಪ್ರತಿದಾಳಿಯೇ ತನ್ನ ಮೇಲಿನ ದಾಳಿಗಳನ್ನು ಎದುರಿಸುವ ಏಕೈಕ ದಾರಿಯೆಂಬ ತೀರ್ಮಾನಕ್ಕೆ ಬಂದಂತಿದೆ.

ಪುನರ್ರಚಿತಗೊಂಡ ಸಂಪುಟದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿಗಳು ಹೆದರದಿರಿ, ಹಿಂಜರಿಯದಿರಿ ಎಂದು ತಮ್ಮ ಸಹಯೋಗಿಗಳಿಗೆ ಕರೆ ನೀಡಿದ್ದಾರೆ. ಆಡಳಿತ ವೈಖರಿಯನ್ನು ಉತ್ತಮಪಡಿಸಿ, ಬೆಳವಣಿಗೆಗೆ ಉತ್ತೇಜನೆ ನೀಡಲು ಹೂಡಿಕೆಗಳು ಬರುವಂತೆ ಐಕ್ಯತೆಯಿಂದ ಕೆಲಸ ಮಾಡಿ, ಆಮೂಲಕ ಮೂಲರಚನೆಗಳಿಗೆ, ಸಾಮಾಜಿಕ ವಲಯಗಳಿಗೆ ಹಣ ಸಿಗುವಂತೆ ಮಾಡಿ ಎಂದು ಕಿವಿಮಾತು ಹೇಳಿದ್ದಾರೆ. ನಾವು ಒಂದು ರಾಜಕೀಯ ಕ್ಯಾಲೆಂಡರನ್ನು ಎದುರಿಸುತ್ತಿದ್ದೇವೆ, ಆದರೆ ಹೆದರಬೇಡಿ, 'ದೇಶಕಟ್ಟುವ ಕೆಲಸದಲ್ಲಿ' ನೀವೂ ತೊಡಗಿದ್ದೀರಿ ಎಂಬುದನ್ನು ಎಂದೂ ಮರೆಯಬೇಡಿ ಎಂದು ಧೈರ್ಯ ತುಂಬಿದ್ದಾರಂತೆ.


ನಂತರ ದೆಹಲಿಯಲ್ಲಿ ಕಾಂಗ್ರೆಸಿನ ಒಂದು 'ಮೆಗಾರ್‍ಯಾಲಿ' ನಡೆದಿದೆ. ಅಲ್ಲಿ ಕಾಂಗ್ರೆಸ್ ಮತ್ತು ಯುಪಿಎ ಅಧ್ಯಕ್ಷೆ, ಕಾಂಗ್ರೆಸಿನ ಯುವರಾಜ ಮತ್ತು ಸ್ವತಃ ಪ್ರಧಾನಮಂತ್ರಿಗಳು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಎಂತಹ ಮಹಾ ವರದಾನವಾಗಬಲ್ಲದು ಎಂದು ಯಾವುದೇ ಮುಲಾಜಿಲ್ಲದೆ ರೀಲು ಬಿಟ್ಟಿದ್ದಾರೆ(ಈ ಬಗ್ಗೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಲೇಖನವನ್ನು ನೋಡಿ). ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ದೆಹಲಿ ಸಮೀಪದ ಸೂರಜ್‌ಕುಂಡ್‌ನಲ್ಲಿ ನವಂಬರ್ 9ರಂದು 'ಸಂವಾದ್ ಬೈಠಕ್' ನಡೆಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಇದರಲ್ಲಿ ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರು, ಎಲ್ಲ ರಾಜ್ಯಗಳ ಪಕ್ಷದ ವ್ಯವಹಾರಗಳನ್ನು ನೋಡಿಕೊಳ್ಳುವವರು, ಕೇಂದ್ರ ಸಂಪುಟ ಮಂತ್ರಿಗಳು ಮತ್ತು ಸ್ವತಂತ್ರ ಇಲಾಖೆಗಳನ್ನು ಪಡೆದಿರುವ ಕಿರಿಯ ಮಂತ್ರಿಗಳು ಭಾಗವಹಿಸುತ್ತಿದ್ದಾರಂತೆ. ಪಕ್ಷದ ಮುಂದೆ, ಯುಪಿಎ ಮುಂದೆ ಬೃಹದಾಕಾರವಾಗಿ ನಿಂತಿರುವ ಸವಾಲುಗಳನ್ನು ಹೇಗೆ ಎದುರಿಸುವುದು ಎಂದು ತಲೆಕೆರೆದುಕೊಳ್ಳಲು.

ಅತ್ತ ಪ್ರಧಾನಿಗಳು ತಮ್ಮ ಸಂಪುಟ ಸಹಯೋಗಿಗಳಿಗೆ ಬೆಳವಣಿಗೆಗೆ ಉತ್ತೇಜನೆ ನೀಡಲು ಹೂಡಿಕೆಗಳು ಬರುವಂತೆ ಐಕ್ಯತೆಯಿಂದ ಕೆಲಸ ಮಾಡಿ ಎಂದು ಕರೆ ನೀಡುತ್ತಿದ್ದಾಗಲೇ, ಇತ್ತ ಯುಪಿಎ-2 ಹಣಕಾಸು ಮಂತ್ರಾಲಯ ಮತ್ತು ರಿಝರ್ವ್ ಬ್ಯಾಂಕ್ ನಡುವೆ 'ಬೆಳವಣಿಗೆ' ಮುಖ್ಯವೋ, ಹಣದುಬ್ಬರದ ಮೇಲೆ ಹತೋಟಿ ಮುಖ್ಯವೋ ಎಂಬ ವಾಗ್ವಾದ ನಡೆದಿದೆ. ರಿಝರ್ವ್ ಬ್ಯಾಂಕ್ ಮುಖ್ಯಸ್ಥರಿಗೆ ಹಣದುಬ್ಬರದಮೇಲೆ ಹತೋಟಿ ಮುಖ್ಯ ಸಂಗತಿ ಎಂದನಿಸಿದರೆ, ಯುಪಿಎ-2 ಹಣಕಾಸು ಮಂತ್ರಿಗಳಿಗೆ ಅದು ಮುಖ್ಯವಲ್ಲ, 'ಬೆಳವಣಿಗೆ' ಮುಖ್ಯ ಸಂಗತಿಯಾಗಿದೆ, ಇದಕ್ಕನುಗುಣವಾಗಿ ರಿಝರ್ವ್ ಬ್ಯಾಂಕ್ ಕ್ರಮಗಳನ್ನು ಕೈಗೊಂಡಿಲ್ಲ, ಆದರೂ ಪರವಾಯಿಲ್ಲ, ನಾವು ಒಂಟಿಯಾಗಿ ಸಾಗುತ್ತೇವೆ(ಹಣದುಬ್ಬರದ ಹೊರೆಯನ್ನು ಜನಸಾಮಾನ್ಯರೇ ಹೊರಲಿ!) ಎಂದು ಕುಪಿತರಾಗಿ ಪ್ರತಿಕ್ರಿಯಿಸಿದ್ದಾರೆ. ಕಾರ್ಪೊರೇಟ್ ವಲಯವೂ ಇದಕ್ಕೆ ದನಿಗೂಡಿಸಿದೆ.

ಮಾಹಿತಿ ಹಕ್ಕು ಮೊಟಕು ಸದ್ಯಕ್ಕಿಲ್ಲ

ಮಾಹಿತಿ ಹಕ್ಕು ತನ್ನ ಮಹಾಸಾಧನೆ ಎಂದು ಸದಾ ತುತ್ತೂರಿ ಊದುವ ಯುಪಿಎ ಸರಕಾರ, ಅದನ್ನು ಜಾರಿಗೆ ತಂದದ್ದು 2005ರಲ್ಲಿ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಎಡಪಕ್ಷಗಳ ಒತ್ತಡದಿಂದಾಗಿ ರೂಪಿಸಿದ ಕನಿಷ್ಟ ಕಾರ್ಯಕ್ರಮದ ಭಾಗವಾಗಿ. ಆದರೆ ಮರುವರ್ಷದಿಂದಲೇ ಅದನ್ನು ಮೊಟಕು ಮಾಡುವ ಪ್ರಯತ್ನವನ್ನೂ ಆರಂಭಿಸಿತ್ತು.

ಸಾಮಾಜಿಕ ಮತ್ತು ಅಭಿವೃದ್ಧಿ ಪ್ರಶ್ನೆಗಳನ್ನು ಬಿಟ್ಟು ಬೇರಾವ ವಿಷಯದಲ್ಲಿಯೂ ಸರಕಾರದ ಕಡತಗಳಲ್ಲಿನ ಟಿಪ್ಪಣಿಗಳನ್ನು ಬಹಿರಂಗ ಪಡಿಸಲು ಅವಕಾಶವಿಲ್ಲ ಎಂಬ ತಿದ್ದುಪಡಿಯನ್ನು ತರಬೇಕೆಂಬುದು ಸರಕಾರದ ಆಶಯವಾಗಿತ್ತು. ಆದರೆ ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾದ್ದರಿಂದಾಗಿ ಅದು ಕಾರ್ಯರೂಪಕ್ಕೆ ಬರಲಿಲ್ಲ. ಯುಪಿಎ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ 'ರಾಷ್ಟ್ರೀಯ ಸಲಹಾ ಮಂಡಳಿ'ಯ ಸದಸ್ಯರೇ ಈ ತಿದ್ದುಪಡಿಯನ್ನು ಬಲವಾಗಿ ವಿರೋಧಿಸಿದ್ದರು.



ಈಗಾರು ವರ್ಷಗಳ ವಿಫಲ ಪ್ರಯತ್ನದ ನಂತರ ಕೇಂದ್ರ ಸಂಪುಟ ಆ ತಿದ್ದುಪಡಿಯನ್ನು ತರದಿರಲು ನಿರ್ಧರಿಸಿದೆಯಂತೆ. ಇದರಿಂದಾಗಿ ರಾಷ್ಟ್ರೀಯ ಭದ್ರತೆ, ಖಾಸಗಿತ್ವ ಮತ್ತು ವಾಣಿಜ್ಯ ಹಿತರಕ್ಷಣೆಯ ವಿಷಯಗಳನ್ನು ಬಿಟ್ಟು ಬೇರೆ ಎಲ್ಲ ವಿಷಯಗಳ ಮೇಲೂ ಯಾವುದೇ ಮಾಹಿತಿಗಳನ್ನು ಕೇಳಿದರೆ ಅವನ್ನು ಒದಗಿಸಬೇಕು.

ಕಾಮನ್ವೆಲ್ತ್ ಕ್ರೀಡೆಗಳ ಪ್ರಾಜೆಕ್ಟುಗಳಲ್ಲಿ 1000 ಕೋಟಿ ರೂ.ಗಳ ತೆರಿಗೆ ವಂಚನೆ ಪತ್ತೆ

ಕಾಮನ್ವೆಲ್ತ್ ಕ್ರೀಡಾಕೂಟಕ್ಕೆ ಸಂಬಂಧಪಟ್ಟ ಕಾಮಗಾರಿಗಳಲ್ಲಿ ಸರಕಾರೀ ಇಲಾಖೆಗಳು ಮತ್ತು ಖಾಸಗಿ ಕಂಪನಿಗಳು ಸುಮಾರು 1000 ಕೋಟಿ ರೂ.ಗಳ ತೆರಿಗೆ ವಂಚನೆ ಮಾಡಿವೆ ಎಂದು ಕೇಂದ್ರೀಯ ಜಾಗ್ರತಾ ಆಯೋಗ(ಸಿವಿಸಿ) ಪತ್ತೆ ಮಾಡಿದೆ. ಈ ಹಗರಣದ ತನಿಖೆ ನಡೆಸಲು ಆಯೋಗ ರಚಿಸಿದ್ದ ಬಹುವ್ಯಾಪ್ತಿಯ ತನಿಖಾ ವ್ಯವಸ್ಥೆಯ ಮೂಲಕ ಇದನ್ನು ಪತ್ತೆ ಮಾಡಲಾಗಿದೆ ಎಂದು ಜಾಗ್ರತ ಆಯುಕ್ತರು ಹೇಳಿದ್ದಾರೆ.

ಈ ಕ್ರೀಡಾಕೂಟದ 9000 ಸಾರ್ವಜನಿಕ ನಿಧಿಯಿಂದ ಕೈಗೊಂಡ ಪ್ರಾಜೆಕ್ಟುಗಳಲ್ಲಿ ಸರಕಾರದ 37 ಸರಕಾರೀ ಇಲಾಖೆಗಳು 15,000 ಕೋಟಿ ರೂ.ಗಳನ್ನು ಖರ್ಚು ಮಾಡಿವೆಯಂತೆ. ಇವುಗಳ ತನಿಖೆಯಲ್ಲಿ ಕಂಡು ಬಂದ ಒಂದು ಮುಖ್ಯ ಸಂಗತಿಯೆಂದರೆ ಆದಾಯ ತೆರಿಗೆ, ಸೇವಾ ತೆರಿಗೆ , ವ್ಯಾಟ್ ಮುಂತಾದವುಗಳನ್ನು ತೆರದೆ ತಪ್ಪಿಸಿಕೊಳ್ಳಲಾಗಿದೆ. ಇದರ ಮೊತ್ತ ರೂ.1000 ಕೋಟಿಯಷ್ಟಾಗ ಬಹುದು. ಇದರಲ್ಲಿ 100 ಕೋಟಿ ರೂ.ಗಳಷ್ಟನ್ನು ನೋಟೀಸು ವಗೈರೆ ನೀಡಿ ವಸೂಲಿ ಮಾಡಲಾಗಿದೆ, ಉಳಿದವನ್ನೂ ವಸೂಲಿ ಮಾಡಲಾಗುವುದು ಎಂದು ಜಾಗ್ರತಾ ಆಯುಕ್ತರು ಹೇಳಿದ್ದಾರೆ.

ಕೇಂದ್ರೀಯ ಜಾಗ್ರತಾ ಆಯೋಗ ಕಾಮನ್ವೆಲ್ತ್ ಕ್ರೀಡಾಕೂಟದ ಹಗರಣದಲ್ಲಿ ಸರಕಾರೀ ನಾಗರಿಕ ಮತ್ತು ನಿರ್ಮಾಣ ಸಂಸ್ಥೆಗಳನ್ನು ಒಳಗೊಂಡಿರುವ ಒಟ್ಟು 53 ಕೇಸುಗಳ ತನಿಖೆ ನಡೆಸುತ್ತಿದೆ.

ಹಣಕಾಸು ಮಂತ್ರಿ ಪುತ್ರನನ್ನು ಟೀಕಿಸಿದ್ದಕ್ಕೆ ಇ-ಮೇಲ್ ದೂರಿನ ಮೇಲೆಯೇ ಬಂಧನ!

ಯುಪಿಎ-2 ಹಣಕಾಸು ಮಂತ್ರಿಗಳ ಸುಪುತ್ರ ಯುಪಿಎ ಅಧ್ಯಕ್ಷೆಯ ಅಳಿಯನಿಗಿಂತ ಹೆಚ್ಚು ಸಂಪತ್ತನ್ನು ಗುಡ್ಡೆ ಹಾಕಿದ್ದಾರೆ ಎಂದು ತನ್ನ ಅಂತರ್ಜಾಲ 'ಟ್ವಿಟರ್'ನಲ್ಲಿ ಹೇಳಿರುವ ಒಬ್ಬ ವ್ಯಕ್ತಿಯನ್ನು ಮಾಹಿತಿ ತಂತ್ರಜ್ಞಾನ ಕಾನೂನಿನ ಅಡಿಯಲ್ಲಿ ಬಂಧಿಸಿರುವುದು ವ್ಯಾಪಕ ಟೀಕೆಗೆ ಒಳಗಾಗಿದೆ.

ವಿಶೇಷವೆಂದರೆ ಹಣಕಾಸು ಮಂತ್ರಿಗಳ ಪುತ್ರ ಇ-ಮೇಲ್ ಮೂಲಕ ನೀಡಿದ ಒಂದು ದೂರಿನ ಆಧಾರದ ಮೇಲೆಯೇ ಒಂದು ದೊಡ್ಡ ಪೋಲೀಸ್ ಪಡೆ ಈ ಐಎಸಿ(ಭ್ರಷ್ಟಾಚಾರ ವಿರೋಧಿ ಭಾರತ) ಕಾರ್ಯಕರ್ತನ ಮನೆಗೆ ನಸುಕಿನಲ್ಲಿಯೇ ನುಗ್ಗಿ ಆತನನ್ನು ನಿದ್ದೆಯಿಂದೆಬ್ಬಿಸಿ ಎಳೆದೊಯ್ದಿರುವುದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ಇಲೆಕ್ಟ್ರಾನಿಕ್ ಸ್ವರೂಪದಲ್ಲಿ(ಅಂದರೆ ಸೈಬರ್ ತಾಣಗಳಲ್ಲಿ) ವಿಮರ್ಶಾತ್ಮಕ ಅಭಿಪ್ರಾಯಗಳು ಪ್ರಸಾರಗೊಳ್ಳದಂತೆ ತಡೆಯಲು ಯುಪಿಎ ಸರಕಾರ 2008ರಲ್ಲಿ ಮಾಹಿತಿ ತಂತ್ರಜ್ಞಾನ ಕಾನೂನಿಗೆ ಒಂದು ತಿದ್ದುಪಡಿ (ಸೆಕ್ಷನ್ 66ಎ) ತಂದಿತು. ಇದರ ಪ್ರಕಾರ 'ಅತ್ಯಂತ ಅವಹೇಳನಕಾರಿ', 'ಪಿಡುಗಿನ ಸ್ವರೂಪದ', 'ನೋವು' ಅಥವ 'ಅನಾನುಕೂಲತೆ' ತರುವ ಯಾವುದೇ ಲೇಖನ, ಟಿಪ್ಪಣಿ ಇತ್ಯಾದಿ ಕ್ರಿಮಿನಲ್ ಅಪರಾಧವಾಗುತ್ತದೆ. ಆಳುವ ಸರಕಾರಗಳು ಇತ್ತೀಚೆಗೆ ಇದನ್ನು ಬಹಳಷ್ಟು ಬಳಸುತ್ತಿವೆ. ಇದನ್ನು ಬಳಸಿ ಪಶ್ಚಿಮ ಬಂಗಾಲದಲ್ಲಿ ಜಾಧವಪುರ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು ಮತ್ತು ಅವರ ನೆರೆಯವರ ಬಂಧನ ಮತ್ತು ಮುಂಬೈಯಲ್ಲಿ ಒಬ್ಬ ವ್ಯಂಗ್ಯಚಿತ್ರಕಾರರ ಬಂಧನವೂ ವ್ಯಾಪಕ ಖಂಡನೆಗೆ ಒಳಗಾಗಿತ್ತು. ಪಶ್ಚಿಮ ಬಂಗಾಲದ ಮಾನವ ಹಕ್ಕು ಆಯೋಗ ಪೋಲೀಸರು ಇಬ್ಬರು ವ್ಯಕ್ತಿಗಳಿಗೆ ಕಿರುಕುಳ ಕೊಟ್ಟು ತಪ್ಪು ಮಾಡಿದೆ, ಅದಕ್ಕೆ ಪರಿಹಾರ ಕೊಡಬೇಕು ಎಂದು ತೀರ್ಪಿತ್ತಿದೆ. ಆದರೂ ಯುಪಿಎ ಸರಕಾರ ಈ ಕಾನೂನಿನ ಪರಾಮರ್ಶೆಯ ಬಗ್ಗೆ ಯೋಚಿಸಲಿಲ್ಲ. ಈಗ ಸ್ವತಃ ತನ್ನ ಪರವಾಗಿ ಅದನ್ನು ಬಳಸಿಕೊಂಡಿದೆ. ವಾಸ್ತವವಾಗಿ ಈ ತಿದ್ದುಪಡಿಯೇ ಅಸಂವಿಧಾನಿಕ ಎಂದು ತಜ್ಞರ ಅಭಿಪ್ರಾಯ.

ಹೈದ್ರಾಬಾದ್ ಕರ್ನಾಟಕದಲ್ಲಿ ವಿಶಿಷ್ಟ ಸಮಾವೇಶ

ದಶಕದ ಕಥಾ ಸಾಹಿತ್ಯದ ಅವಲೋಕನ

ಇಲ್ಲಿ ಚಿಂತನೆ ಮತ್ತು ಚಳುವಳಿಗಳನ್ನು ಸೃಜನಾತ್ಮಕವಾಗಿ ರೂಪಿಸುವ, ರೂಢಿಸುವ ಕನಸುಗಳ ಹೊತ್ತ ಮನಸುಗಳ ಸಮಾವೇಶಗೊಂಡಿದ್ದವು. ಇಲ್ಲಿ ನಡೆದ ವೈಚಾರಿಕ ಮಂಥನ ವಿಶಿಷ್ಟವಾದುದು.

ಸಾಹಿತ್ಯ ಮತ್ತು ಚಳುವಳಿಯ ನಡುವಿರುವ ಸಂಬಂಧದ ಬಗ್ಗೆ ಇಲ್ಲಿ ಚರ್ಚೆ ಪ್ರಧಾನವಾಗಿ ಬಂದಿದೆ. ನಮ್ಮ ಕಾಲದ (ಜಾಗತೀಕರಣ ದಂತಹ) ಸಂದಿಗ್ಧಗಳು, ಬಿಕ್ಕಟ್ಟುಗಳು ಮತ್ತು ತಲ್ಲಣಗಳನ್ನು ತಮ್ಮ ಕೃತಿಗಳಲ್ಲಿ ದಾಖಲೆ ಮಾಡುವುದು ಮಾತ್ರವಲ್ಲದೆ, ಅದಕ್ಕೆ ಪ್ರತಿಭಟನೆ ಪ್ರತಿರೋಧ ತೋರುವುದು ಲೇಖಕರ ಜವಾಬ್ದಾರಿ. ಇದು ಮುಂದೆಂದಾದರೂ ಮುನ್ನೆಲೆಗೆ ಬಂದು ಚಳುವಳಿಗಳು ಜಡವಾಗದಂತೆ ಮರುರೂಪಿಸಬಹುದು ಸೃಜನಶೀಲವಾಗಿಸಬಹುದು ಎಂಬ ಕನಸು ಹೊತ್ತು ಲೇಖಕರು ಇಂದು ಬರೆಯಬೇಕಾಗಿದೆ ಎಂದು ಖ್ಯಾತ ಕತೆಗಾರ ಅಮರೇಶ್ ನುಗಡೋಣಿಯವರು ಮಾರ್ಮಿಕವಾಗಿ ಹೇಳಿದರು. ಅವರು ಸಾಹಿತ್ಯ ಸಮುದಾಯ ಗುಲ್ಬರ್ಗದಲ್ಲಿ ನವಂಬರ್ 3 ರಂದು ಹಮ್ಮಿಕೊಂಡಿದ್ದ 'ದಶಕದ ಕಥಾಸಾಹಿತ್ಯ: ಅವಲೋಕನ' ಎಂಬ ವಿಚಾರಸಂಕಿರಣದ ಸರ್ವಾಧ್ಯಕ್ಷತೆ ವಹಿಸಿದ್ದು ಸಮಾರೋಪ ಭಾಷಣ ಮಾಡುತ್ತಿದ್ದರು.



ಕನ್ನಡ ಸಾಹಿತ್ಯ ಪರಿಷತ್ತಿನ ಗುಲ್ಬರ್ಗ ಜಿಲ್ಲಾ ಘಟಕದ ಸಹಕಾರದಲ್ಲಿ ಯೋಜಿಸಲಾಗಿದ್ದ ದಶಕದ ಕಥಾಸಾಹಿತ್ಯದ ಮೇಲಿನ ವಿಚಾರ ಸಂಕಿರಣದಲ್ಲಿ 500ಕ್ಕೂ ಹೆಚ್ಚು ಲೇಖಕರು, ಸಾಹಿತ್ಯಾಸಕ್ತರು, ಸ್ನಾತಕೋತ್ತರ/ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಎರಡು ಗೋಷ್ಠಿಗಳಿದ್ದವು. ಮೊದಲ ಗೋಷ್ಠಿ ಕನ್ನಡ ಕಥಾಸಾಹಿತ್ಯದ ಅವಲೋಕನಕ್ಕೆ ತೊಡಗಿದರೆ, ಎರಡನೇ ಗೋಷ್ಠಿ ತನ್ನ ವಿಶಿಷ್ಟ ಛಾಪು ಮೂಡಿಸಿರುವ ಹೈದರಾಬಾದ್ ಕರ್ನಾಟಕದ ಕಥಾಸಾಹಿತ್ಯದ ಅವಲೋಕನಕ್ಕೆ ಮೀಸಲಾಗಿತ್ತು. ಎರಡೂ ಗೋಷ್ಠಿಗಳಲ್ಲಿ ದಶಕದ ಕಥೆಗಳಲ್ಲಿ 'ಜಾಗತೀಕರಣ ಮತ್ತು ಸ್ಥಳೀಯತೆಯ ಮುಖಾಮುಖಿ' ಮತ್ತು 'ದಮನಿತ ಬದುಕಿನ ವ್ಯಾಖ್ಯಾನ' ಎಂಬ ಎರಡು ವಿಷಯಗಳ ಮೇಲೆ ಪ್ರಬಂಧ ಮಂಡಿಸಲಾಗಿತ್ತು. ಮೊದಲ ಗೋಷ್ಠಿಯಲ್ಲಿ ಡಾ.ಎಂ.ಡಿ.ಒಕ್ಕುಂದ ಮತ್ತು ಡಾ.ಮಲ್ಲಿಕಾರ್ಜುನ ಮೇಟಿ, ಹಾಗೂ ಎರಡನೇ ಗೋಷ್ಠಿಯಲ್ಲಿ ಡಾ.ಲಿಂಗಾರೆಡ್ಡಿ ಶೇರಿ ಮತ್ತು ಡಾ.ವಿಕ್ರಂ ವಿಸಾಜಿ ಪ್ರಬಂಧ ಮಂಡಿಸಿದರು. ಪ್ರತಿ ಪ್ರಬಂಧಕ್ಕೆ ಒಬ್ಬ ಸಂವಾದಕರ ಪ್ರತಿಕ್ರಿಯೆ ಮತ್ತು ಚರ್ಚೆ ಹಮ್ಮಿಕೊಳ್ಳಲಾಗಿತ್ತು. ಸರ್ವಾಧ್ಯಕ್ಷತೆ ವಹಿಸಿದ್ದ ಅಮರೇಶ ನುಗಡೋಣಿ ಅವರು ಉದ್ಘಾಟನಾ ಗೋಷ್ಠಿಯಲ್ಲಿ ಆಶಯನುಡಿ ನೀಡಿದ್ದಲ್ಲದೆ, ಸಮಾರೋಪ ಭಾಷಣವನ್ನೂ ಮಾಡಿದರು.

ಮುಖಾಮುಖಿಗಿಂತಲೂ ಹೆಚ್ಚಾಗಿ ನಡೆಯುತ್ತಿರುವುದು, ಜಾಗತೀಕರಣ ಸ್ಥಳೀಯತೆಯ ಮೇಲೆ ನಡೆಸುತ್ತಿರುವ ದಾಳಿ, ಭೀಕರ ಆಕ್ರಮಣ. ಈ ದಶಕದ ಕಥೆಗಳು ಈ ಆಕ್ರಮಣ ಉಂಟು ಮಾಡಿರುವ ಸಾವಿರಾರು ಆಕ್ರಂದನಗಳನ್ನು ದಾಖಲು ಮಾಡಿವೆ ಎಂದು ಡಾ.ಒಕ್ಕುಂದ ಅವರು ಆರಂಭಿಸಿದರು. ಜಾಗತೀಕರಣ ಮತ್ತು ಸ್ಥಳೀಯತೆಯ ಪರಿಭಾಷೆಗಳನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ನಿರ್ವಚಿಸಿದ ಅವರು ಅವಕ್ಕೆ ಸ್ಪಂದಿಸಿದ ಕಥೆಗಳನ್ನು ವಿಶ್ಲೇಷಿಸಿ ಅವುಗಳ ಪ್ರಮುಖ ಧ್ವನಿಯ ಆಧಾರದ ಮೇಲೆ ನಾಲ್ಕು ಪ್ರಮುಖ ಪ್ರಕಾರಗಳನ್ನು ಗುರುತಿಸಿದರು. ಕಂಪನಿ ಕಥೆಗಳು, ಗಣಿ ಕಥೆಗಳು, ಸೌಹಾರ್ದ ಕಥೆಗಳು, ಚಳುವಳಿ ಕಥೆಗಳು ಅವರು ಗುರುತಿಸಿದ ಕೆಲವು ಪ್ರಕಾರಗಳು. 'ಹುಲಿ ಸವಾರ", ಹಕೂನ ಮಾಟಾ' ಕಥೆಗಳ ಉದಾಹರಣೆಗಳೊಂದಿಗೆ ಜಾಗತೀಕರಣವನ್ನು ಪ್ರತಿನಿಧಿಸುವ ಕಂಪನಿಗಳ ಒಳಗಿನ ಕ್ರೌರ್ಯ, ತುಮುಲಗಳನ್ನು ಕಂಪನಿ ಕಥೆಗಳು ಕಥಿಸಿದ ಬಗೆಯನ್ನು ವಿಶ್ಲೇಷಿಸಿದರು. 'ದಾಳಿ' (ನುಗಡೋಣಿ), 'ಗಣಿ ಸ್ಟೇಶನ್' (ಮೊಗಳ್ಳಿ), 'ಕೆಂಪು ಗಿಣಿ' (ವಸುಧೇಂದ್ರ) ಕಥೆಗಳ ಉದಾಹರಣೆಗಳೊಂದಿಗೆ ಗಣಿಗಾರಿಕೆಗೆ ವಿವಿಧ ನೆಲೆಗಳಿಂದ ಸ್ಪಂದಿಸಿದ 12 ಗಣಿ ಕಥೆಗಳ ಅದ್ಭುತವಾದ ಅನುಭವ ಲೋಕವನ್ನೂ ಬಿಚ್ಚಿಟ್ಟರು. ಕಳೆದ ಎರಡು ದಶಕಗಳ ಭೀಕರ ಕೋಮುವಾದೀಕರಣಕ್ಕೆ ಪ್ರತಿಕ್ರಿಯಿಸಿದ ಸೌಹಾರ್ದ ಕಥೆಗಳನ್ನು 'ಒಂದು ತುಂಡು ಗೋಡೆಯ ಕಥೆ' (ಬೋಳುವಾರು), ತಾಯ್ತನ (ನಾಗವೇಣಿ), ಕೊಂದಹರುಳಿದರೆ (ನೀಲಾ) – ಇವುಗಳ ಉದಾಹರಣೆಯೊಂದಿಗೆ ಚರ್ಚಿಸಿದರು. ಕೊನೆಯದಾಗಿ, ಈ ಕಾಲಘಟ್ಟದಲ್ಲಿ ಚಳುವಳಿಗಾರರ ವೈಯಕ್ತಿಕ ತುಮುಲಗಳು, ಅವರ ಕನಸುಗಳು ತಾತ್ವಿಕತೆಗಳು, ಚಳುವಳಿ ವಿಫಲಗೊಳಿಸಲು ಚಳುವಳಿಗಾರರರನ್ನು ಭ್ರಷ್ಟಗೊಳಿಸಲು ವ್ಯವಸ್ಥೆಯ ಹುನ್ನಾರಗಳ ಹಲವು ಆಯಾಮಗಳನ್ನು ತೆರೆದಿಡುವ ಚಳುವಳಿ ಕಥೆಗಳನ್ನು ವಿಶ್ಲೇಷಿಸಿದರು. ಈ ಸಕಾರಾತ್ಮಕ ಸ್ಪಂದನಗಳ ನಡುವೆಯೇ, ವೈಚಾರಿಕತೆ ಬಿಟ್ಟು ಕೊಟ್ಟು ಮೌಢ್ಯ, ಸಾಂಪ್ರದಾಯಿಕತೆ, ಮತೀಯತೆಯ ಜತೆ ಹೊಂದಾಣಿಕೆಯ ಶರಣಾಗತಿಯ ನಕಾರಾತ್ಮಕ ನಡೆಯನ್ನೂ ಈ ದಶಕದ ಕತೆಗಳಲ್ಲಿ ಡಾ. ಒಕ್ಕುಂದ ಗುರುತಿಸಿದರು. ಈ ದಶಕದ ಅವಧಿಯಲ್ಲಿ ಯಾವುದೇ ಸಾಹಿತ್ಯಿಕ ಚಳುವಳಿಗಳಿಲ್ಲ ಎನ್ನುವ ಮಾತಿಗೆ ಪ್ರತಿಕ್ರಿಯಿಸುತ್ತಾ, ಕಥಾ ಸಾಹಿತ್ಯದಲ್ಲಂತೂ ಹಿಂದಿನ ಮೂರೂ ಸಾಹಿತ್ಯಿಕ ಚಳುವಳಿಗಳ ಮುಖ್ಯ ಲಕ್ಷಣಗಳನ್ನು ಮೈಗೂಡಿಸಿಕೊಂಡದ್ದು ಮತ್ತು ಹೊಸ ಚಳುವಳಿಯೊಂದು ಹರಳುಗಟ್ಟುತ್ತಿರುವುದು ಕಾಣಿಸುತ್ತದೆ ಎಂದರು. ನವೋದಯದ ಉದಾರವಾದ, ನವ್ಯದ ವ್ಯಕ್ತಿನಿಷ್ಟತೆ ಮತ್ತು ಬಂಡಾಯ–ದಲಿತದ ಸಮಾಜವಾದ/ ಸಮಾನತಾವಾದ ಈ ಎಲ್ಲವೂ ಹೆಚ್ಚಿನ ಕೃತಿಗಳು ಮೈಗೂಡಿಸಿಕೊಂಡಿರುವುದು ಕಂಡು ಬರುತ್ತದೆ ಎಂದರು.

ಡಾ.ಮಲ್ಲಿಕಾರ್ಜುನ ಮೇಟಿ 'ದಮನಿತರು ಯಾರು? ಅವರ ಲಕ್ಷಣಗಳೇನು?' ಎಂದು ಕೇಳಿಕೊಂಡು ಅದನ್ನು ಉತ್ತರಿಸುವ ಮೂಲಕ ತಮ್ಮ ವಿಷಯ ಮಂಡನೆ ಆರಂಭಿಸಿದರು. ಜಾತಿ, ಲಿಂಗ, ಪ್ರದೇಶ ಮುಂತಾದ ಹಲವು ಆಯಾಮಗಳ ಅಸಮಾನತೆಯ ಮೇಲೆ ಆಧಾರಿತ ದಮನಕ್ಕೊಳಗಾದ ದಮನಿತರ ಲಕ್ಷಣಗಳನ್ನು ವಿವರಿಸಿ, ಈ ದಶಕದ ಕಥೆಗಳಲ್ಲಿ ವಿಸ್ತೃತವಾಗಿ ಬಂದಿರುವ ದಮನಿತರ ಬದುಕಿನ ವ್ಯಾಖ್ಯಾನವನ್ನು ಹಲವು ಕಥೆಗಾರರ ಕಥೆಗಳ ಉದಾಹರಣೆಗಳೊಂದಿಗೆ ವಿಶ್ಲೇಷಿಸಿದರು. ಅವರು ಈ ದಶಕದಲ್ಲಿ ಪ್ರಕಟವಾದ ಸುಮಾರು 500 ಕಥಾಸಂಕಲನಗಳಲ್ಲಿ 40ನ್ನು ಆರಿಸಿ ವಿಶ್ಲೇಷಣೆಗೆ ಒಡ್ಡಿದ್ದಾರೆ. ಮುಖ್ಯವಾಗಿ ಕಳೆದ ದಶಕದಲ್ಲಿ ಬರೆಯಲು ಆರಂಭಿಸಿದ ಕಥೆಗಾರರ ಕಥೆಗಳ ಮೇಲೆ ಒತ್ತುಕೊಟ್ಟ ಅವರು, ಲಿಂಗ ಮತ್ತು ಜಾತಿ ದಮನಿತರ ಕಥನಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದರು. 'ದಮನಿತರು ಮಾತನಾಡಬಲ್ಲರೇ? ಹೌದು. ಆದರೆ ದಮನಿತರ ಮಾತನ್ನು ಕೇಳಲು ನಾವು ಸಿದ್ಧರಾಗಿದ್ದೇವೆಯೇ " ಎಂಬ ಹೇಳಿಕೆಗೆ ಉತ್ತರವಾಗುವಂತೆ ಈ ದಶಕದ ಕಥೆಗಳಲ್ಲಿ ದಮನಿತರ ಬದುಕಿನ ವ್ಯಾಖ್ಯಾನ ಬಂದಿದೆ ಎಂದು ಉದಾಹರಣೆಗಳ ಮೂಲಕ ವಿವರಿಸಿದರು. 'ಖಾಸಗಿ" ಎಂದು ಹೇಳಲಾಗುವ ಕಥೆಗಳು ತೀರಾ ಕಡಿಮೆ ಆಗಿವೆ ಎಂದು ಗುರುತಿಸಿದ ಅವರು ನಮ್ಮ ಬದುಕಿನಲ್ಲಿ ಖಾಸಗಿ ಎನ್ನುವುದು ನಮ್ಮ ಮಲ ಮಾತ್ರ ಎಂಬ ಇಟಾಲಿಯನ್ ಲೇಖಕರ ಉದ್ಗಾರವನ್ನು ನೆನಪಿಸಿಕೊಂಡರು. ಡಾ.ಅಪ್ಪಗೆರೆ ಸೋಮಶೇಖರ್, ಡಾ. ಮೇಟಿಯವರ ಪ್ರಬಂಧಕ್ಕೆ ಪ್ರತಿಕ್ರಿಯಿಸಿದರು.

ಇದೇ ಎರಡು ವಿಷಯಗಳ ಮೇಲೆ ಹೈದರಾಬಾದ್ ಕರ್ನಾಟಕದ ಮೇಲೆ ಒತ್ತು ಕೊಟ್ಟು ಡಾ.ಲಿಂಗಾರೆಡ್ಡಿ ಶೇರಿ ಮತ್ತು ಡಾ.ವಿಕ್ರಂ ವಿಸಾಜಿ ಅವರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಡಾ.ಬಸವರಾಜ ಬಲ್ಲೂರು ಮತ್ತು ಬಿ.ಪೀರಭಾಷಾ ಈ ಪ್ರಬಂಧಗಳಿಗೆ ಪ್ರತಿಕ್ರಿಯಿಸಿದರು. ಸಾಹಿತ್ಯ ಪರಿಷತ್ ಗುಲ್ಬರ್ಗ ಜಿಲ್ಲಾ ಘಟಕದ ಅಧ್ಯಕ್ಷ ಮಹಿಪಾಲರೆಡ್ಡಿ ಮನ್ನೂರ್ ಸ್ವಾಗತ ಮಾಡಿದರು. ಸಾಹಿತ್ಯ ಸಮುದಾಯದ ಡಾ.ವಿಠ್ಠಲ ಭಂಡಾರಿ ದಶಕದ ಕಥಾಸಾಹಿತ್ಯದ ಅವಲೋಕನ ಮಾತ್ರವಲ್ಲ ಈಗಾಗಲೇ ಹಮ್ಮಿಕೊಂಡಿರುವ ಇತರ ಸಾಹಿತ್ಯ ಪ್ರಕಾರಗಳ ಅವಲೋಕನದ ಯೋಜನೆಯನ್ನು ಪರಿಚಯಿಸುತ್ತಾ ಪ್ರಸ್ತಾವನೆಯ ಮಾತುಗಳನ್ನು ಆಡಿದರು. ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಎನ್.ಶಿವಮೂರ್ತಿಯವರು ಉದ್ಘಾಟಿಸಿದರು. ಸಮುದಾಯದ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಸಮಾರೋಪದ ನುಡಿಗಳನ್ನಾಡಿದರು. ಎರಡೂ ಸಂಘಟನೆಗಳ ವಿವಿಧ ಪದಾಧಿಕಾರಿಗಳು ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು.

ಇತರ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ವೈಚಾರಿಕ ಕ್ಷೇತ್ರಗಳಲ್ಲಿ ಕಳೆದ ದಶಕದ ನಡೆಗಳ ಅವಲೋಕನ ಮಾಡುವ ವಿಚಾರ ಸಂಕಿರಣಗಳನ್ನು ಸಾಹಿತ್ಯ ಸಮುದಾಯ ಶಿವಮೊಗ್ಗ, ಮಂಗಳೂರು, ಧಾರವಾಡ, ಮೈಸೂರು/ಬೆಂಗಳೂರುಗಳಲ್ಲಿ ಹಮ್ಮಿಕೊಳ್ಳಲಿದೆ.

ಎನ್.ಕೆ.ವಸಂತರಾಜ

ಪತ್ರಕರ್ತ ನವೀನ್ ಸುರಿಂಜೆರವರ ಬಂಧನ : SFI-DYFI-JMS ಖಂಡನೆ

ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಬಂಧಿಸಿರುವ ಪತ್ರಕರ್ತ ನವೀನ್ ಸುರಿಂಜೆರವರನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕು. ಅವರ ಮೇಲೆ ಹಾಕಿರುವ ಎಲ್ಲಾ ಸುಳ್ಳು ಮೊಕದ್ದಮೆಗಳನ್ನು ತಕ್ಷಣ ವಾಪಸ್ ಪಡೆಯಬೇಕು ಹಾಗೂ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಯಲ್ಲಿ ವಿದ್ಯಾರ್ಥಿಗಳು ಹಾಗೂ ಯುವತಿಯರ ಮೇಲೆ ಧಾಳಿನಡೆಸಿರುವ ಹಿಂದೂ ಜಾಗರಣ ವೇದಿಕೆ ಸದಸ್ಯರನ್ನು ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸಲು ಆಗ್ರಹಿಸಿ ನವೆಂಬರ್ 09ರಂದು ಎಸ್.ಎಫ್.ಐ, ಡಿವೈಎಫ್ಐ, ಜೆಎಂಎಸ್ ಸಂಘಟನೆಗಳು ರಾಜ್ಯವಾಪಿ ಪ್ರತಿಭಟನೆಗೆ ಕರೆ ನೀಡಿವೆ. ನಾಳೆ ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಬೆಳಿಗ್ಗೆ 11.30ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಮಂಗಳೂರಿನ ಪಡೀಲ್‌ನಲ್ಲಿರುವ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಯಲ್ಲಿ ವಿದ್ಯಾರ್ಥಿಗಳು ಹಾಗೂ ಯುವತಿಯರ ಮೇಲೆ ಸಂಘಪರಿವಾರದ ಹಿಂದೂ ಜಾಗರಣ ವೇದಿಕೆ ಸದಸ್ಯರು ನಡೆಸಿದ ದೈಹಿಕ ಹಲ್ಲೆ ಅಮಾನುಷ ಧಾಳಿಯನ್ನು ವಸ್ತುನಿಷ್ಠವಾಗಿ ವರದಿ ಮಾಡಿದ ಕಸ್ತೂರಿ ಕನ್ನಡ ವಾಹಿನಿಯ ವರದಿಗಾರರಾದ ನವೀನ್ ಸುರಿಂಜೆರವರನ್ನು ಬಂಧಿಸುವ ಮೂಲಕ ಸಂವಿಧಾನಬದ್ಧ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಹರಣ ಮಾಡಲು ಹೊರಟಿರುವ ರಾಜ್ಯ ಬಿ.ಜೆ.ಪಿ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಜೆಎಂಎಸ್) ರಾಜ್ಯ ಸಮಿತಿಗಳು ತೀವ್ರವಾಗಿ ಖಂಡಿಸುತ್ತಿವೆ.

ರಾಜ್ಯ ಬಿ.ಜೆ.ಪಿ ಸರ್ಕಾರ ಈಗಾಗಲೇ ವ್ಯಾಪಕ ಭ್ರಷ್ಟಾಚಾರ ನಡೆಸಿ ಜನರ ಮಧ್ಯೆ ತನ್ನ ವರ್ಚಸ್ಸನ್ನು ಕಳೆದುಕೊಂಡಿದೆ. ಅಲ್ಲದೇ ರಾಜ್ಯದ ನೈಸರ್ಗಿಕ ಸಂಪತ್ತು ಹಾಗೂ ಜನರ ತೆರಿಗೆ ಹಣವನ್ನು ಸರ್ಕಾರದ ಸಚಿವರು ಲೂಟಿ ಹೊಡೆದಿದ್ದಾರೆ. ಇಂತಹ ಸಂದರ್ಭದಲ್ಲಿ ಹೋಂ ಸ್ಟೇ ಧಾಳಿ ನಡೆದಿದ್ದು ಇದನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅಲ್ಲದೇ ಧಾಳಿಕೋರರನ್ನು ರಕ್ಷಿಸಲು ಸಂಘಪರಿವಾರ ಹಾಗೂ ಅದರ ಕೈಗೊಂಬೆಯಾಗಿರುವ ಮಂಗಳೂರಿನ ಪೋಲೀಸರು ಮುಂದಾಗಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ. ಅಲ್ಲದೇ ಧಾಳಿ ಮಾಡಿದ ಹಿಂದೂ ಜಾಗರಣ ವೇದಿಕೆಯ ಸದಸ್ಯರನ್ನು ಬಂಧಿಸುವ ಬದಲಾಗಿ ಧಾಳಿಯ ಕುರಿತು ವಸ್ತುನಿಷ್ಠ ವರದಿ ಮಾಡಿದ ನವೀನ್ ಸುರಿಂಜೆರವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕುವ ಮೂಲಕ ಮಾಧ್ಯಮದವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಹಾಗೂ ಪೋಲೀಸ್ ಇಲಾಖೆ ಮುಂದಾಗಿರುವುದನ್ನು ಎಸ್.ಎಫ್.ಐ, ಡಿವೈಎಫ್ಐ, ಜೆಎಂಎಸ್ ಸಂಘಟನೆಗಳು ಬಲವಾಗಿ ವಿರೋಧಿಸುತ್ತವೆ.

ಬಾಟು ಕೇಳುವ ಧೈರ್ಯ ಇಲ್ಲದವರು...

ಪುಟ 11 ರಿಂದ

ಅಪಾಯದ ಕತ್ತಿ ರಾಜ್ಯದ ಶಿಕ್ಷಣರಂಗದ ಮೇಲೆ ತೂಗುತ್ತಿದೆ. ಶಿಕ್ಷಕರ ನೇಮಕಾತಿ, ಶಾಲೆಗಳ ಕಟ್ಟಡ ನಿರ್ಮಾಣ, ಮೂಲಭೂತ ಸೌಲಭ್ಯಗಳ ಪೂರೈಕೆಗಾಗಿ ಖರ್ಚು ಮಾಡಬೇಕಾದ ಹಣದಲ್ಲಿ ದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಲು ಅನುಕೂಲವಾಗುವಂತೆ ಒಂದು ವರದಿ ಕೊಡಿ ಅಂತ ಕೇಳಿದರೆ ಒಂದು ಸಮಿತಿ ಏನು ಶಿಫಾರಸ್ಸು ಮಾಡಬಹುದೋ ಅದಕ್ಕೆ ತಕ್ಕಂತೆ ವರದಿ ಇದೆ.

ವರದಿಯಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದಾರೆಂಬ ಹೆಸರಿನಲ್ಲಿ 12,740 ಶಾಲೆಗಳನ್ನು ಮುಚ್ಚಲು ಶಿಫಾರಸ್ಸು ಮಾಲಾಗಿದೆ. ಇದಲ್ಲದೇ 22,718 ಶಾಲಾ ಕೊಠಡಿಗಳು ಬೇಕೆಂಬ ಕಡೆ ಕೇವಲ 5,208 ಶಾಲೆಗಳು ಸಾಕು ಎನ್ನುತ್ತಿದೆ. ಶಿಕ್ಷಕರ ನೇಮಕಾತಿ ಪ್ರಶ್ನೆಯಲ್ಲೂ ಇದೇ ರೀತಿಯಾಗಿ ಸಮಿತಿ ದೊಡ್ಡ ಕಡಿತವನ್ನು ಸೂಚಿಸುತ್ತಿದೆ.

ರಾಜ್ಯದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಗೋವಿಂದ ಸಮಿತಿಯು ಅಧಿಕೃತವಾಗಿ ಇನ್ನೂ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿಲ್ಲ, ಮತ್ತು ರಾಜ್ಯ ಸರ್ಕಾರವು ಶಾಲೆಗಳನ್ನು ಮುಚ್ಚುವ ತೀರ್ಮಾನ ಕೈಗೊಳ್ಳುವುದಿಲ್ಲ, ಅಗತ್ಯವಿದ್ದರೆ ಹೊಸ ಶಾಲೆಗಳನ್ನು ತೆರೆಯಲಾಗುವುದು ಎಂದು ಹೇಳಿಕೆ ನೀಡಿದ್ದಾರೆ.

ಆದರೆ ಬಿಜೆಪಿ ಸರ್ಕಾರದ ಇಂತಹ ಹೇಳಿಕೆಗಳನ್ನು ಅಷ್ಟು ಸುಲಭವಾಗಿ ನಂಬುವುದು ಸಾಧ್ಯವಿಲ್ಲ. ಈ ಹಿಂದೆಯೂ ಬೇರೆ ಸರ್ಕಾರಗಳೂ ಕೂಡ ರಾಜ್ಯದಲ್ಲಿ ಪಿಯುಸಿ ಮತ್ತು ಪದವಿ ಕಾಲೇಜುಗಳ ಪ್ರತ್ಯೇಕೀಕರಣ ಮಾಡುತ್ತೇವೆ ಎನ್ನುತ್ತಾ ಬದಲಿ ಪಿಯುಸಿ ಕಾಲೇಜು ಸ್ಥಾಪನೆ ಮಾಡದೇ ಸಹಸ್ರಾರು ಜನ ವಿದ್ಯಾರ್ಥಿಗಳು ಓದುವ ಪಿಯುಸಿ ಕಾಲೇಜುಗಳನ್ನು ನಿರ್ದಯವಾಗಿ ಮುಚ್ಚಿದ ಉದಾಹರಣೆ ಇದ್ದೇ-ಇದೆ. ಪ್ರಶ್ನಿಸಿದವರಿಗೆ ಆಗಲೂ ಮುಚ್ಚಲಾಗಿದ್ದ ಪಿಯು ಕಾಲೇಜನ್ನು ಮತ್ತೊಂದು ಕಾಲೇಜಿನೊಂದಿಗೆ ವಿಲೀನ ಗೊಳಿಸಲಾಗಿದೆ, ಮುಚ್ಚಲಾಗಿಲ್ಲವೆಂಬ ಸುಳ್ಳು ಸಮಜಾಯಿಷಿಯೇ ಸಿಕ್ಕಿತ್ತು. ಬಿಜೆಪಿ ಸರ್ಕಾರ ಈ ಕುತಂತ್ರದ ಧೋರಣೆ ಈ ಪ್ರವೃತ್ತಿಗೆ ಹೊಸ ಆಯಾಮವನ್ನೇ ನೀಡಲು ಹೊರಟಂತೆ ಕಾಣುತ್ತದೆ.

ಈ ಗೋವಿಂದ ಸಮಿತಿಯ ಮೂಲಕ ರಾಜ್ಯ ಬಿಜೆಪಿ ಸರ್ಕಾರವು ತನ್ನ ಖಜಾನೆಗೆ ಹಣ ಉಳಿಸುವ 'ಸ್ಕೀಂ'ನ ಭಾಗವಾಗಿಯೇ ಈ ವರದಿಯನ್ನು ಪಡೆದುಕೊಂಡಿರಬಹುದು ಎಂಬ ದಟ್ಟ ಅನುಮಾನಕ್ಕೆ ಇಲ್ಲಿ ಸಂಪೂರ್ಣ ಅವಕಾಶ ಇದೆ. ಮುಖ್ಯಮಂತ್ರಿಗಳಾಗಲೀ ಇತರ ಮಂತ್ರಿಗಳಾಗಲಿ ಸಮಿತಿ ಇಂತಹ ಶಿಫಾರಸ್ಸು ನೀಡಲು ಕಾರಣವಾದ ಹಿನ್ನೆಲೆ ಬಗೆಗೆ ವಿವರಣೆ ನೀಡಿದ್ದು ಹೆಚ್ಚಾಗಿ ಎಲ್ಲೂ ಕಂಡು ಬಂದಿಲ್ಲ. ಈ ಘನ ಶಿಕ್ಷಣ ತಜ್ಞರನ್ನು ಬಿಜೆಪಿ ಸರ್ಕಾರ ನೇಮಕ ಮಾಡುವಾಗ ಸಮಿತಿ ಅಧ್ಯಯನಕ್ಕೆ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ಹಾಕಿಕೊಟ್ಟ ಮಾರ್ಗದರ್ಶಿ ಚೌಕಟ್ಟೇನು? ನಿರ್ದೇಶನಗಳೇನು ಎಂದು ಸರಿಯಾಗಿ ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಶಿಕ್ಷಣ ತಜ್ಞರ ಆಲೋಚನೆಯ ದಾಟಿ, ಅವರ ಚಿಂತನೆ, ತತ್ವ ಸಿದ್ಧಾಂತ ಯಾವುದನ್ನೂ ಪರಿಗಣಿಸದೇ ಮುಗ್ಧವಾಗಿ ಈ ಬಿಜೆಪಿ ಸರ್ಕಾರ ಸದರಿ ವ್ಯಕ್ತಿಯನ್ನು ನೇಮಕ ಮಾಡಿಬಿಟ್ಟಿತು ಎಂದರೆ ಆ ಮಾತನ್ನು ಬಿಜೆಪಿ-ಆರೆಸ್ಸೆಸ್‌ಗಳ ಭಟ್ಟಂಗಿಗಳು ಮಾತ್ರ ನಂಬಬೇಕಷ್ಟೆ ಶಿಕ್ಷಣ ಪ್ರೇಮಿಗಳು ಮತ್ತು ಜನತೆ ಅದನ್ನು ನಂಬುವುದು ಸಾಧ್ಯವಿಲ್ಲ.

ಕನ್ನಡ ಶಾಲೆಗಳನ್ನು ಮುಚ್ಚುವ ಸರ್ಕಾರದ ಶಿಕ್ಷಣ ವಿರೋಧಿ ನೀತಿಯನ್ನು ವಿರೋಧಿಸಿ ನವೆಂಬರ್ ಒಂದರ ಕನ್ನಡ ರಾಜ್ಯೋತ್ಸವದಂದು ಬೆಂಗಳೂರಿನ ಸಮಾರಂಭದಲ್ಲಿ ಪ್ರತಿಭಟನೆ ನಡೆಸಿದ ಎಸ್ಸೆಫೈ-ಡಿವೈಎಫ್ಐ ಮುಖಂಡರು ಕಾರ್ಯಕರ್ತರನ್ನು ರಾಜ್ಯ ಬಿಜೆಪಿ ಸರ್ಕಾರ ನಡೆಸಿಕೊಂಡ ರೀತಿಯೇ ಸರ್ಕಾರದ ಧೋರಣೆಯನ್ನು ಎತ್ತಿ ತೋರಿಸುತ್ತಿದೆ. ಪ್ರತಿಭಟನೆ ನಡೆಸಿದವರನ್ನು ಚರ್ಚೆಗೆ ಆಹ್ವಾನಿಸಿ ಮಾತುಕತೆಗೆ ಕರೆಯುವ ಬದಲಿಗೆ ಬಿಜೆಪಿ ಸರ್ಕಾರದ ಪೋಲಿಸರು ಮುಖಂಡರ ಮೇಲೆ ಮೊಕದ್ದಮೆ ಜಡಿದು ಜೈಲಿಗಟ್ಟಲಾಯಿತು. ಎಬಿವಿಪಿ ಪ್ರತಿಭಟನೆಯ ನಾಟಕವಾಡಿದರೂ ಸಾಕು ಸಚಿವರೊಂದಿಗೆ ಸುದೀರ್ಘ ಮಾತುಕತೆ ನಡೆದು ತೀರ್ಮಾನಗಳ ಘೋಷಣೆ ಆಗುತ್ತದೆ. ಇತ್ತೀಚೆಗೆ ಸಚಿವ ಸಂಪುಟದ ಸಭೆಯಲ್ಲಿ ಎಬಿವಿಪಿ ಮುಖಂಡರ ಮೇಲಿನ ಮೊಕದ್ದಮೆ ವಾಪಸ್ ಪಡೆಯುವ ತೀರ್ಮಾನ ಕೈಗೊಳ್ಳಲಾಗಿದೆ. ಶಾಲೆ ಮುಚ್ಚುವ ಸರ್ಕಾರದ ಯೋಜನೆಗೆ ಮೌನ ಸಮ್ಮತಿ ನೀಡುತ್ತಿರುವುದಕ್ಕಾಗಿ ಬಿಜೆಪಿ ಸರ್ಕಾರ ಎಬಿವಿಪಿಗೆ ಕೊಟ್ಟ ಬಹುಮಾನವೇ ಇರಬಹುದೇನೋ ಇದು.

ಜನತೆಯನ್ನು ತಪ್ಪು ದಾರಿಗೆಳೆಯುತ್ತಿರುವ ಪ್ರಧಾನ ಮಂತ್ರಿ....

ಪುಟ 7 ರಿಂದ

ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಗಳು ಸಿಗುತ್ತವೆ ಎಂಬುದೆಲ್ಲ ಕೇವಲ ಮಿಥ್ಯೆಗಳು ಎಂಬುದನ್ನು ವಿಶ್ವಾದ್ಯಂತ ದಾಖಲಾಗಿರುವ ಅನುಭವಗಳ, ಅಧ್ಯಯನಗಳ ಆಧಾರದಲ್ಲಿ ಆ ಟಿಪ್ಪಣಿಯಲ್ಲಿ ವಿವರಿಸಲಾಗಿತ್ತು.

ತಪ್ಪು ಮಾಹಿತಿಗಳೇಕೆ?

ಈಗ ಗಂಭೀರ ಆರ್ಥಿಕ ಬಿಕ್ಕಟ್ಟು ಮತ್ತು ಇಮ್ಮಡಿ ಇಳಿಕೆಯ ಆರ್ಥಿಕ ಹಿಂಜರಿತದಿಂದಾಗಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಲಾಭ ಪೇರಿಸಿಕೊಳ್ಳಲು ಹೊಸ ದಾರಿಗಳು ಬೇಕಾಗಿವೆ. ಭಾರತದ ಚಿಲ್ಲರೆ ವ್ಯಾಪಾರ ವಲಯ ಇದಕ್ಕೊಂದು ಬಹಳ ಆಕರ್ಷಕ ಅವಕಾಶ. ಆದ್ದರಿಂದ ಯುಪಿಎ-2 ಸರಕಾರದ ಈ ನಿರ್ಧಾರ ಭಾರತೀಯ ಜನತೆ ಮತ್ತು ಆರ್ಥಿಕವನ್ನು ಬಲಿಗೊಟ್ಟು ಈ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರಿಗೆ ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅವಕಾಶ ನೀಡುತ್ತದಷ್ಟೇ.

ಇದೀಗ ವಾಸ್ತವ ಸಂಗತಿ. ಆದರೆ ಕಾಂಗ್ರೆಸ್ ಪಕ್ಷ ಮತ್ತು ಯುಪಿಎ-2 ಸರಕಾರ ಇದನ್ನು ಗುರುತಿಸಲು ನಿರಾಕರಿಸುತ್ತದೆ ಮತ್ತು ಜನಗಳನ್ನು ದಾರಿ ತಪ್ಪಿಸಲು ತಪ್ಪು ಮಾಹಿತಿಗಳನ್ನು ಹರಡುತ್ತಿದೆ. ಆದರೆ ಕಾಂಗ್ರೆಸಿನ 'ಮೆಗಾರ್‍ಯಾಲಿ'ಯ ಮೂರೂ ಭಾಷಣಗಳು ಪ್ರತಿಪಕ್ಷಗಳು ಜನಗಳನ್ನು ದಾರಿ ತಪ್ಪಿಸುತ್ತಿವೆ ಎಂದೇ ಆಪಾದಿಸಿವೆ. "ಕೆಲವು ಮಂದಿ ಸಾರ್ವಜನಿಕರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ" ಎಂದಿದ್ದಾರೆ ಪ್ರಧಾನ ಮಂತ್ರಿಗಳು. ಆದರೆ ನಿಜವಾಗಿ ನಮ್ಮನ್ನು ಮತ್ತು ದೇಶವನ್ನು ದಾರಿ ತಪ್ಪಿಸುತ್ತಿರುವವರು ಸ್ವತಃ ನೀವು ಮತ್ತು ಕಾಂಗ್ರೆಸ್ ಪಕ್ಷ ಎಂದು ಜನತೆ ಪ್ರಧಾನ ಮಂತ್ರಿಗಳಿಗೆ ಹೇಳಬೇಕಾಗಿದೆ.

ಸರಳ ಸಂಗತಿಯೆಂದರೆ, ನಮ್ಮ ಬಹುಪಾಲು ಜನತೆಯ ಹಿತಗಳನ್ನು ಬಲಿಗೊಟ್ಟು ದೇಶದ ಸಂಪನ್ಮೂಲಗಳನ್ನು ಮತ್ತು ಮಾರುಕಟ್ಟೆಗಳನ್ನು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತೀಯ ದೊಡ್ಡ ಬಂಡವಾಳಿಗರ ಲೂಟಿಗೆ ಮತ್ತು ಅವರ ಲಾಭಗಳನ್ನು ಗರಿಷ್ಟಗೊಳಿಸಲಿಕ್ಕೆ ಇನ್ನಷ್ಟು ತೆರೆದು ಕೊಡಲಾಗುತ್ತಿದೆ. ಆದ್ದರಿಂದ ಈ ಧೋರಣೆಯ ದಿಕ್ಕನ್ನು ಬದಲಿಸಬೇಕಾಗಿದೆ. ನಮ್ಮ ದೇಶದ ಮತ್ತು ಜನತೆಯ ಹಿತದೃಷ್ಟಿಯಿಂದ 'ವ್ಯವಸ್ಥೆಯ ಬದಲಾವಣೆ' ಆಗಬೇಕಾಗಿದೆ. ಈ ಕಾಂಗ್ರೆಸ್ ರ್‍ಯಾಲಿಯ ಭಾಷಣಗಳು ಈ ಸುಧಾರಣಾ ಧೋರಣೆಯ ದಿಕ್ಕಿನ ವಿರುದ್ಧ ಇನ್ನಷ್ಟು ಬಲಿಷ್ಟ ಹೋರಾಟಗಳನ್ನು ಹರಿಯ ಬಿಡಬೇಕೆಂಬ ಜನತೆಯ ನಿರ್ಧಾರವನ್ನು ದ್ವಿಗುಣಗೊಳಿಸಬೇಕಾಗಿದೆ.

ಕೃಪೆ: 'ಪೀಪಲ್ಸ್ ಡೆಮಾಕ್ರಸಿ'
ಸಂಪಾದಕೀಯದಿಂದ



ಜಿ.ಎಸ್.ನಾಗರಾಜ್ 13

ಪರಾಧೀನತೆಯ ವಿರುದ್ಧ ದೇಶವ್ಯಾಪಿ ಮಹತ್ವದ ಚಳುವಳಿ – ಮೇ 4

ಇಡೀ ಚೀನಾ ಒಂದು ಕುದಿತದ ಪ್ರಕ್ರಿಯೆಗೊಳಗಾಗಿತ್ತು. ಈ ಲೇಖನ ಮಾಲೆಯನ್ನು ಗಮನಿಸುತ್ತಾ ಬಂದವರಿಗೆ ಅದು ತಂತಾನೆ ತಿಳಿಯುವಂತಿದೆ. ಅದರ ಕೆಲವು ಲಕ್ಷಣಗಳ ಬಗ್ಗೆ ಹಿಂದಿನ ಲೇಖನಗಳಲ್ಲಿ ಪ್ರಾಸಂಗಿಕವಾಗಿ ವಿವರಿಸಲಾಗಿದೆ. ಒಂದುಕಡೆ ಸಾಮ್ರಾಜ್ಯಶಾಹಿ ಶಕ್ತಿಗಳ ಆಟಾಟೋಪ-ಅದರಲ್ಲೂ ಮುಖ್ಯವಾಗಿ ಜಪಾನಿನ ಆಕ್ರಮಣಕಾರಿ ನಡೆಗಳು ಹಾಗೂ ಯುದ್ಧಕೋರ ಪಾಳೆಯಗಾರರ ಶೋಷಣೆ ಮತ್ತುಅವರ ದಮನಕಾರಿ ನೀತಿಗಳು. ಮತ್ತೊಂದು ಕಡೆ ಜನತೆಯ ಅದರಲ್ಲಿಯೂ ಯುವಜನತೆಯಲ್ಲಿ ಹೆಚ್ಚುತ್ತಿದ್ದ ತಿಳುವಳಿಕೆ ಹಾಗೂ ರಾಜಕೀಯ ಪ್ರಜ್ಞೆ, ಅದರಿಂದಾಗಿ ಇವುಗಳ ವಿರುದ್ಧ ಬಿರುಸಾಗುತ್ತಾ ಸಾಗಿದ್ದ ಜನರ ಆಕ್ರೋಶ ಹಾಗೂ ಹೋರಾಟಗಳು.

ಚೀನಾ ಯವುದೇ ದೇಶದ ವಸಾಹತು ದೇಶವಾಗಿರಲಿಲ್ಲ.ಸುಮಾರು ಆರು ದೇಶಗಳು ಚೀನಾವನ್ನು ಹರಿದು ಹಂಚಿಕೊಂಡು ತಿನ್ನುತ್ತಿದ್ದವು. 19ನೆಯ ಶತಮಾನದಲ್ಲಿ ಬ್ರಿಟನ್, ರಷ್ಯಾ, ಫ್ರಾನ್ಸ್, ಜರ್ಮನಿಗಳು ತಮ್ಮ ಅಧಿಪತ್ಯವನ್ನು ಚೀನಾದ ವಿವಿಧ ಪ್ರದೇಶಗಳ ಮೇಲೆ, ವಿವಿಧ ಕೈಗಾರಿಕೆಗಳ ಮೇಲೆ ಹೇರಿದ್ದರು. ಇಪ್ಪತ್ತನೆಯ ಶತಮಾನದ ಆರಂಭದಿಂದ ಅಮೇರಿಕ, ಜಪಾನುಗಳು ಬಲಿಷ್ಟವಾಗಿ ತಮ್ಮ ಅಧಿಪತ್ಯವನ್ನು ಹೇರಲು ಬಲವಾಗಿ ಪ್ರಯತ್ನ ನಡೆಸಿದ್ದರು. ಇದರಿಂದಾಗಿ ಈ ದೇಶಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಅದೇ ಸಮಯದಲ್ಲಿ ಚೀನಾವನ್ನು ದೋಚುವುದರಲ್ಲಿ ಅವರೆಲ್ಲರೂ ಒಗ್ಗಟ್ಟಾಗಿ ನಿರ್ಬಂಧಗಳನ್ನು ಹೇರುತ್ತಿದ್ದರು.

1911ರಲ್ಲಿ ಸಾಮ್ರಾಟರನ್ನು ಕಿತ್ತೊಗೆದ ನಂತರ ಸನ್ ಯಾತ್ ಸೆನ್‌ರ ನೇತೃತ್ವದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅವಕಾಶ ಕೊಡದೆ 1860ರ ತೈಪಿಂಗ್ ದಂಗೆಯ ಸಮಯದಿಂದ ಪ್ರಬಲರಾಗಿದ್ದ ಯುದ್ಧಕೋರ ಪಾಳೆಯಗಾರರ ಕೈಗೆ ಅಧಿಕಾರ ಸಿಗುವಂತೆ ಸಂಚು ಮಾಡಿ ಯಶಸ್ವಿಯಾಗಿದ್ದರು. ಆ ಸಮಯದಲ್ಲಿ ಅಧಿಕಾರಕ್ಕೆ ಬಂದ ಯುವಾನ್ ಶಿ ಕಾಯ್ ಸಾಮ್ರಾಜ್ಯಶಾಹೀ ದೇಶಗಳು ಎಸೆಯುವ ಹಣದಾಸೆಗೆ ಇಡೀ ಚೀನಾವನ್ನೇ ಒತ್ತೆ ಹಾಕುತ್ತಿದ್ದ.

ಜಪಾನಿನ ದಬ್ಬಾಳಿಕೆ

ಅದರಲ್ಲಿಯೂ ಜಪಾನು ನೆರೆಯ ದೇಶವಾಗಿ ಹಾಗೂ ಹೊಸದಾಗಿ ಬಲಿಷ್ಠವಾದ ದೇಶವಾಗಿ ಅನೇಕ ರೀತಿಯ ಶೋಷಣೆಯನ್ನು ಮಾಡತೊಡಗಿತ್ತು. ಈ ಹಿನ್ನೆಲೆಯಲ್ಲಿ 1915ರಲ್ಲಿ ಜಪಾನು ಚೀನಾದ ಮಂಚೂರಿಯ, ಒಳ ಮಂಗೋಲಿಯಾ, ಶಾಂಡುಂಗ್ ಪ್ರದೇಶಗಳು ಹಾಗೂ ಕಬ್ಬಿಣದ ಗಣಿ, ಉಕ್ಕಿನ ಕೈಗಾರಿಕೆ, ಉತ್ತರ ಚೀನಾದ ರೈಲ್ವೆ ಮಾರ್ಗಗಳು ಇತ್ಯಾದಿಗಳ ಮೇಲೆ ಆಕ್ರಮಣ ನಡೆಸಿತ್ತು. 1915ರಲ್ಲಿ ಜಪಾನು ಚೀನಾದ ಸರ್ಕಾರದ ಮುಂದೆ ಇಪ್ಪತ್ತೊಂದು ಅಂಶಗಳ ಪಟ್ಟಿಯೊಂದನ್ನು ನೀಡಿ ಅದಕ್ಕೆ ಚೀನಾ ಸರ್ಕಾರ ಸಹಿಹಾಕಬೇಕೆಂದೂ, ಇಲ್ಲದಿದ್ದರೆ ಧಾಳಿ ಮಾಡುವುದಾಗಿ ಬೆದರಿಸಿತು ಹಾಗೂ ಯುವಾನ್ ಗೆ ನೂರಾರು ಕೋಟಿಗಟ್ಟಲೇ ಹಣ ಚೆಲ್ಲಿತು. ಯುವಾನ್ ಶೀ ಕಾಯ್ ಇದಕ್ಕೆ ಒಪ್ಪಿ ಸಹಿ ಹಾಕಿಯೇ ಬಿಟ್ಟ. ಈ ಒಪ್ಪಂದಕ್ಕೆ ಬಹಿರಂಗವಾದ ಕೆಲವು ಅಂಶಗಳಿದ್ದರೆ ರಹಸ್ಯವಾದ ಕೆಲವು ಅಂಶಗಳಿದ್ದವು. ಮೇಲೆ ಹೇಳಿದ ಪ್ರದೇಶ, ಕೈಗಾರಿಕೆಗಳ ಮೇಲಿನ ಹಿಡಿತ ಬಹಿರಂಗ ಅಂಶಗಳಾದರೆ ಚೀನಾದ ಸರ್ಕಾರ, ಅದರ ಪೋಲೀಸು, ಸೈನ್ಯ ಜಪಾನು ನೇಮಿಸಿದ ಸಲಹೆಗಾರರ ನಿರ್ದೇಶನದ ಪ್ರಕಾರ ನಡೆಯಬೇಕೆನ್ನುವುದು ಅದರ ಗುಟ್ಟು ಗುಟ್ಟಿನ ಅಂಶಗಳು.

ಈ ಇಪ್ಪತ್ತೊಂದು ಅಂಶಗಳು ಆ ಮೂಲಕ ಚೀನಾದ ಸ್ವಾತಂತ್ರ್ಯ, ಸಾರ್ವಭೌಮತೆಯ ಮೇಲೆ ಧಾಳಿ ಚೀನಾದ ಪ್ರಜ್ಞಾವಂತ ಜನರನ್ನು ರೊಚ್ಚಿಗೆಬ್ಬಿಸಿತ್ತು. 1915ರಲ್ಲಿಯೇ ವಿದ್ಯಾರ್ಥಿಗಳು ಇದರ ವಿರುದ್ಧ ಹೋರಾಟಗಳಿಗೆ ಇಳಿದಿದ್ದರು. ಚಾಂಗ್ ಶಾದಲ್ಲಿನ ವಿದ್ಯಾರ್ಥಿಗಳ ನಾಯಕರಾಗಿ ನೇತೃತ್ವ ವಹಿಸಿದ್ದುದು ಈ ಮೊದಲೇ ನೀವು ಓದಿದ್ದೀರಿ. ಅಂದಿನಿಂದಲೇ ಜಪಾನ್ ವಿರುದ್ಧದ ಹೋರಾಟ ಬಲಗೊಳ್ಳ ತೊಡಗಿತ್ತು.

ಬಟ್ಟೆ ಬಯಲಾದ "ಪ್ರಜಾಪ್ರಭುತ್ವ" ದೇಶಗಳ ನಿಜ ಸ್ವರೂಪ

1914ರಿಂದ 1918ರವರೆಗೂ ಮೊದಲನೆಯ ಮಹಾ ಯುದ್ಧ ಪ್ರಪಂಚವನ್ನೆಲ್ಲಾ ಆವರಿಸಿತ್ತು. ಈ ಯುದ್ಧದಲ್ಲಿ ಚೀನಾ ಸರ್ಕಾರವೂ ಕೂಡ ಬ್ರಿಟನ್, ಅಮೇರಿಕಾಗಳ ಜೊತೆಗಾರನಾಗಿ ಯುದ್ಧದಲ್ಲಿ ಭಾಗವಹಿಸಿತ್ತು. ಈ ಮಹಾ ಯುದ್ಧದಲಿ ಗೆದ್ದ ದೇಶಗಳಾದ ಬ್ರಿಟನ್, ಅಮೇರಿಕ, ಫ್ರಾನ್ಸ್‌ಗಳು ಸೋತ ದೇಶಗಳಾದ ಜರ್ಮನಿ ಮೊದಲಾದ ದೇಶಗಳ ವಸಾಹತುಗಳನ್ನು ಹಂಚಿಕೊಳ್ಳುವುದಕ್ಕೆ ಪ್ಯಾರಿಸ್ ಶಾಂತಿ ಒಪ್ಪಂದ ಎಂದು ಹೆಸರಿಸಲಾಗಿತ್ತು. ಈ ಒಪ್ಪಂದದಲ್ಲಿ ಭಾಗಿದಾರ ದೇಶವಾಗಿ ಹಲವು ಬೇಡಿಕೆಗಳನ್ನು ಮಂಡಿಸಿತ್ತು. ಹಲವು ನಿರೀಕ್ಷೆಗಳನ್ನು ಇಟ್ಟುಕೊಂಡಿತ್ತು. ಜರ್ಮನಿಯ ವಶದಲ್ಲಿದ್ದ ಪ್ರದೇಶಗಳನ್ನು ಬಿಟ್ಟುಕೊಡಬೇಕು. ಕೈಗಾರಿಕೆ, ವ್ಯಾಪಾರಗಳಿಗೆ ಸಂಬಂಧಿಸಿದ ಒಪ್ಪಂದಗಳನ್ನು ರದ್ದುಗೊಳಿಸಬೇಕು; ಜಪಾನು ಹೇರಿದ್ದ ಇಪ್ಪತ್ತೊಂದು ಅಂಶಗಳ ನಿರ್ಬಂಧವನ್ನು ಕಿತ್ತೊಗೆಯ ಬೇಕು. ಹಾಗೂ ಚೀನಾದ ಮೇಲಿದ್ದ ಹೊರ ದೇಶಗಳ ಎಲ್ಲ ಹಿಡಿತವನ್ನೂ ತೆಗೆದು ಹಾಕಬೇಕು ಎಂಬುದು ಅವರ ಮುಖ್ಯ ಬೇಡಿಕೆಗಳು.

ಈ ಸಮಯದಲ್ಲಿ ಅಮೇರಿಕದ ಅಧ್ಯಕ್ಷನಾದ ವುಡ್ರೋ ವಿಲ್ಸನ್ ಎಲ್ಲ ಅಧೀನ ದೇಶಗಳು, ವಸಾಹತುಗಳಿಗೆ ಸ್ವಯಂ ನಿರ್ಣಯದ ಹಕ್ಕನ್ನು ನೀಡಬೇಕು ಎಂಬ ಅಂಶವನ್ನು ಪ್ರಧಾನವಾಗುಳ್ಳ ಹದಿನಾಲ್ಕು ಅಂಶಗಳ ಸೂತ್ರವೊಂದನ್ನು ಪ್ರತಿಪಾದಿಸುತ್ತಿದ್ದ. ಇದು ಜಗತ್ತಿನ ಅನೇಕ ವಸಾಹತು ದೇಶಗಳಲ್ಲಿ


ಮೇ 4 ರ ಚಳುವಳಿ

ಆಶಾ ಭಾವನೆಯನ್ನು ಮೂಡಿಸಿತ್ತು. ಹೀಗಾಗಿ ಇಡೀ ಚೀನಾ ದೇಶವೇ ಕಣ್ಣಾಗಿ ಪ್ಯಾರಿಸ್‌ನಲ್ಲಿ ಸೇರಿದ್ದ ಈ ಅತಿ ಮಹತ್ವದ ಸಭೆಯ ಕಡೆಗೆ ನೋಡುತ್ತಿತ್ತು. ಆದರೆ ಈ "ಶಾಂತಿ ಸಭೆ"ಯಲ್ಲಿ ಜಪಾನಿನ ಸಾಮ್ರಾಜ್ಯಶಾಹೀ ದಾಹಕ್ಕೆ ಬಲಿಯಾಗಿ ಹಾಗೂ ತಂತಮ್ಮ ಸಾಮ್ರಾಜ್ಯಶಾಹೀ ಹಿತಗಳನ್ನು ಸಂರಕ್ಷಿಸಿಕೊಳ್ಳಲು ಜರ್ಮನಿಯ ಹಿಡಿತದ ಪ್ರದೇಶಗಳನ್ನು ಜಪಾನಿಗೆ ಒಪ್ಪಿಸಲು ನಿರ್ಧರಿಸಿತು. ಜಪಾನಿನ ಇಪ್ಪತ್ತೊಂದು ಅಂಶಗಳ ಬಗ್ಗೆ ಮಾತೇ ಎತ್ತಲಿಲ್ಲ. ಸೋವಿಯೆತ್ ಒಕ್ಕೂಟದ ಮೂಲಕ ಇವೆಲ್ಲ ಚೀನದ ಪತ್ರಿಕೆಗಳಲ್ಲಿ ಬಹಿರಂಗವಾಗುತ್ತಿತ್ತು ಹಾಗೂ ಚೀನದಲ್ಲೆಲ್ಲ ಮನೆ ಮಾತಾಗಿ ಚರ್ಚೆಯಾಗುತ್ತಿತ್ತು. ಇದು ಜನರ ಹಕ್ಕುಗಳು, ಪ್ರಜಾಪ್ರಭುತ್ವವೆಂದೆಲ್ಲಾ ಗೊಳ್ಳು ಹೊಡೆಯುತ್ತಿದ್ದ ಈ ದೇಶಗಳ ನಿಜ ಬಣ್ಣವನ್ನು ಬಯಲು ಮಾಡಿತು. ಒಂದುಕ[illegible] ಪ್ರಜಾಪ್ರಭುತ್ವವೆಂಬ ದೇಶಗಳ ಈ ನಡವಳಿ[illegible] ಮತ್ತೊಂದು ಕಡೆ ಯಾವ ಸ[illegible] ಸಂಧಾನಗಳೆಂಬ ಯಾವ ನಾಟಕಗಳಿಲ್ಲದ[illegible] ತಮ್ಮ ಹಿಡಿತಲ್ಲಿದ್ದ ಪ್ರದೇಶಗಳನ್ನೆಲ್ಲಾ ಬಿಟ್ಟುಕೊ[illegible] ಕಾರ್ಮಿಕ ಪ್ರಭುತ್ವ ರಷ್ಯಾ. ಈ ಹೋಲಿ[illegible] ಕಣ್ಣಿಗೆ ರಾಚುವಂತಿತ್ತು. ಪ್ರಜಾಪ್ರಭುತ್ವ[illegible] ದೇಶಗಳೆಂಬ ಸೆಳೆತಕ್ಕೆ ಒಳಗಾಗಿದ್ದ ಬು[illegible] ಜೀವಿಗಳು, ವಿದ್ಯಾರ್ಥಿಗಳನೇಕರು ಈ[illegible] ರೀತಿಯ ಪ್ರಜಾಪ್ರಭುತ್ವದ ಬಗ್ಗೆ ನಂಬಿ[illegible] ಕಳೆದುಕೊಂಡರು.

ಚೀನಾವನ್ನು ಬಡಿದೆಬ್ಬಿಸಿದ ಮೇ ನಾಲ್ಕರ ಚಳುವಳಿ

ಪ್ಯಾರಿಸ್ ಸಭೆಯ ಈ ನಿರ್ಣಯ ಚೀನಾದ[illegible] ಜನತೆಯನ್ನು ರೊಚ್ಚಿಗೆಬ್ಬಿಸಿತು[illegible] ದೇಶಾಭಿಮಾನದ ಅಲೆಗಳನ್ನೆಬ್ಬಿಸಿತು[illegible] ಶಾಸ್ತ್ರೀಯ ಭಾಷೆಯ ಬಳಕೆ, ಸಾಂಪ್ರದಾಯಿ[illegible] ಕಟ್ಟು ಕಟ್ಟಲೆಗಳು ಇವುಗಳ ವಿರುದ್ಧ[illegible] ನಡೆಯುತ್ತಿದ್ದ ನವೋದಯದ ಸಾಂಸ್ಕೃತಿ[illegible] ಚಳುವಳಿಯೂ ಕೂಡ ಈ ಚಳುವಳಿಯ[illegible] ಸಹಚರನಾಗಿ ಚಳುವಳಿ ಎತ್ತರಕ್ಕೆ ಮುಟ್ಟಲು[illegible] ದೊಡ್ಡ ನೆರವನ್ನು ನೀಡಿತು.

ಮೇ ನಾಲ್ಕರಂದು ಬೀಜಿಂಗ್ ವಿ.ವಿ.ಯಲ್ಲಿ[illegible] ಸಭೆ ಸೇರಿದ್ದ ಆ ವಿ.ವಿ. ಹಾಗೂ ಇತರ[illegible] ಹದಿಮೂರು ಕಾಲೇಜುಗಳ ವಿದ್ಯಾರ್ಥಿಗಳ[illegible] ಬೀಜಿಂಗ್ ನಗರದಲ್ಲಿ ಒಂದ[illegible] ಪ್ರತಿಭಟನೆಯನ್ನು ನಡೆಸಲು[illegible] ನಿರ್ಧರಿಸಿದ್ದರು. ಅಂದು ಮೂರು[illegible] ಸಾವಿರಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು[illegible] ಬೀಜಿಂಗ್‌ನ ಬೀದಿ ಬೀದಿಗಳಲ್ಲಿ[illegible] ಮೆರವಣಿಗೆ ತೆಗೆದರು. "ಶಾಂಡೋಂಗ್" ಪ್ರದೇಶವನ್ನು ಚೀನಾಕ್ಕೆ ಒಪ್ಪಿಸಬೇಕು, ಜಪಾನಿನ ಇಪ್ಪತ್ತು ಅಂಶಗಳ[illegible] ಒಪ್ಪಂದವನ್ನು ರದ್ದು ಮಾಡಬೇಕು, ಒಪ್ಪಂದಕ್ಕೆ ಕಾರಣರಾದ ಮೂರು ಜನ[illegible] ಮಂತ್ರಿಗಳನ್ನು ಕೈ ಬಿಡಬೇಕು, ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಬಾರದು" ಇವು[illegible] ಅವರ ಮುಖ್ಯ ಘೋಷಣೆಗಳು. ಅಂದು[illegible] ರೊಚ್ಚಿಗೆದ್ದ ವಿದ್ಯಾಥಿಗಳು ಈ ಮೂರು ಜನ[illegible] ಮಂತ್ರಿಗಳಲ್ಲೊಬ್ಬರ ಮನೆಯನ್ನು ಸುಟ್ಟು ಹಾಕಿದರು.

ಸರ್ಕಾರ ವಿದ್ಯಾರ್ಥಿಗಳ ಮರ್ದನ ನಡೆಸಿ[illegible] ಅಂದು ಮೂವತ್ತು ಜನರನ್ನು ಬಂಧಿಸಿತು. ಮರು ದಿನ ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಆದರೆ ಈ ದಮನ ಹಾಗೂ ಪ್ಯಾರಿಸ್ ಒಪ್ಪಂದದ ಅನ್ಯಾಯದಿಂದ ಉಂಟಾದ ಅತೃಪ್ತಿ ಚೀನದ ಇತರ ನಗರಗಳಲ್ಲಿನ ವಿದ್ಯಾರ್ಥಿಗಳನ್ನು ಹೋರಾಟದ ಕಣಕ್ಕಿಳಿಸಿತು. ತಿಂಗಳುಗಟ್ಟಲೇ ಚಳುವಳಿ ನಡೆಯಿತು. ಜಪಾನಿನಿಂದ ಬಂದ ವಸ್ತುಗಳಿಗೆ ಬಹಿಷ್ಕಾರ ಹಾಕಲಾಯಿತು. ಅನೇಕ ಕಡೆ ಅವುಗಳನ್ನು ಸುಟ್ಟು ಹಾಕಿದರು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH